# ಕೂಡಿನಡೆವ ಲೇಖನಿ

(ಕವನ ಸಂಕಲನ)

ರವೀಂದ್ರನಾಥ ಠಾಕೂರ್

ಅನುವಾದಕರು :
ಮಾರ್ಕಂಡಪುರಂ ಶ್ರೀನಿವಾಸ

Copyright
All Rights Reserved

© *Kannada Translation :*
Kavyalaya Publishers,
Mysore

Printed At
............................................
.........................................................................

# ಅನುವಾದಕರ ಮಾತು

ಆಧುನಿಕ ತೆಲಗು ಸಾರಸ್ವತ ಲೋಕ ಹಾಗೂ ಚಲನಚಿತ್ರ ರಂಗಗಳಲ್ಲಿ 'ಸಿನಾರೆ' ಎಂಬ ಕಾವ್ಯನಾಮದಿಂದ ಅತ್ಯಂತ ಜನಪ್ರಿಯರು ಭಾರತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ, ಪದ್ಮಭೂಷಣ ಡಾ॥ ಸಿ. ನಾರಾಯಣರೆಡ್ಡಿ ಅವರು. ಶ್ರೀಯುತರು ಕಾವ್ಯ, ನಾಟಕ, ವಿಮರ್ಶೆ, ಪ್ರಬಂಧ, ಅನುವಾದ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು ಎಪ್ಪತ್ತು ಮೌಲಿಕ ಸಾಹಿತ್ಯ ಕೃತಿಗಳನ್ನು ರಚಿಸಿ ಆಧುನಿಕ ತೆಲುಗು ಸಾಹಿತ್ಯ ಕ್ಷೇತ್ರದ ಶ್ರೇಷ್ಠತೆಗಳನ್ನು ಮತ್ತು ಸುಮಾರು ಮೂರುಸಾವಿರ ತೆಲಗು ಚಲನಚಿತ್ರ ಗೀತೆಗಳನ್ನು ರಚಿಸಿ ತೆಲುಗು ಚಲನ ಚಿತ್ರರಂಗದ ಔನ್ನತ್ಯವನ್ನು ಹೆಚ್ಚಿಸಿದ್ದಾರೆ.

ಡಾ॥ ಸಿ. ನಾರಾಯಣರೆಡ್ಡಿ ಅವರು ವೃತ್ತಿಶೀಲ ತೆಲುಗು ಅಧ್ಯಾಪಕರಾಗಿ, ವಿಶ್ವವಿದ್ಯಾಲಯಗಳ ಕುಲಪತಿಯಾಗಿ, ನಾಡು–ನುಡಿ, ಸಂಸ್ಕೃತಿ ಸಂಬಂಧಗಳ ಪದಾಧಿಕಾರಿಯಾಗಿ, ಪ್ರತಿನಿಧಿಯಾಗಿ, ಸಲಹೆಗಾರರಾಗಿ ವಿಶ್ವದ ಸಮಸ್ತ ತೆಲುಗು ಜನರ ಮಹತ್ವದ ಅಕ್ಕರೆಯ ವ್ಯಕ್ತಿಯಾಗಿದ್ದಾರೆ.

ಡಾ॥ ಸಿ. ನಾರಾಯಣರೆಡ್ಡಿ ಅವರು ೧೯೩೧ರ ಜುಲೈ ೨೯ ರಂದು ತೆಲಂಗಾಣದ ಕರೀಂನಗರ್ ಜಿಲ್ಲೆಯ ಸಿರಿಸಿಲ್ಲಾ ತಾಲ್ಲೂಕಿನ 'ಹನುಮಾಜಿಪೇಟ' ಎಂಬ ಗ್ರಾಮದಲ್ಲಿ ಶ್ರೀಮತಿ ಬುಚ್ಚಮ್ಮ ಮತ್ತು ಶ್ರೀ ಸಿಂಗಿರೆಡ್ಡಿ ಮಲ್ಲಾರೆಡ್ಡಿ ದಂಪತಿಗಳ ಸುಪುತ್ರರಾಗಿ ಜನಿಸಿದರು. ರೈತ ಕುಟುಂಬದಲ್ಲಿ ಹುಟ್ಟಿದ ಅವರ ಬಾಲ್ಯ ಸಹಜವಾಗಿಯೆ ಗ್ರಾಮಾಂತರ ಪ್ರದೇಶದ 'ಹನುಮಾಜಿ ಪೇಟ' ದಲ್ಲೇ ಕಳೆಯಿತು. ೩ನೆ ತರಗತಿವರೆಗಿನ ಶಿಕ್ಷಣವನ್ನು 'ಹನುಮಾಜಿಪೇಟ'ದಲ್ಲಿ ನಡೆಸಿದ ಡಾ॥ ನಾರಾಯಣರೆಡ್ಡಿ ಅವರು ತಮ್ಮ ಹನ್ನೊಂದನೆಯ ವಯಸ್ಸಿಗೆ ತಾಲ್ಲೂಕ್ ಕೇಂದ್ರವಾದ ಸಿರಿಸಿಲ್ಲಾದ ಮಾಧ್ಯಮಿಕ ಶಾಲೆಯಲ್ಲಿ ೪ನೇ ತರಗತಿಗೆ ಉರ್ದು ಮಾಧ್ಯಮದಲ್ಲಿ ಸೇರಿದರು. ಅಲ್ಲಿಯೇ ೭ನೇ ತರಗತಿಯವರೆಗೆ ಓದಿದ ಅವರು ೮ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಅಂದರೆ ೧೯೪೮ರಲ್ಲಿ ನಿಜಾಂ ರಾಜ್ಯದ ಮೇಲೆ ಪೋಲಿಸ್ ಆಕ್ಷನ್ ನಡೆಯುವ ತನಕ ಜಿಲ್ಲಾ ಕೇಂದ್ರವಾದ ಕರೀಂನಗರ್‌ನಲ್ಲಿ ವಿದ್ಯಾಭ್ಯಾಸ ಮಾಡಿದರು. ೧೯೪೮ರಲ್ಲಿ ಹೆಚ್.ಎಸ್.ಸಿ.ಯಲ್ಲಿ ತೇರ್ಗಡೆಯಾದ ಅವರು ಅದೇ ವರ್ಷದ ಕಡೆ ಭಾಗದಲ್ಲಿ ಚಾದರ್ ಘಾಟ್ ಕಲಾಶಾಲೆಯಲ್ಲಿ ಇಂಟರ್ ಮೀಡಿಯಟ್‌ಗೆ ಸೇರಿ ೧೯೪೯ರಲ್ಲಿ ಇಂಟರ್ ಮೀಡಿಯಟ್ ಮುಗಿಸಿದರು. ೧೯೫೨ ರಲ್ಲಿ ಹೈದರದಬಾದ್ ಆರ್ಟ್ಸ್ ಕಾಲೇಜಿನಲ್ಲಿ ಬಿ.ಎ., ಪದವಿಯನ್ನು, ೧೯೫೪ರಲ್ಲಿ

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ತೆಲುಗು ಎಂ.ಎ., ಪದವಿಯನ್ನು ಪಡೆದರು. ನಂತರ "ಆಧುನಿಕಾಂಧ್ರ ಕವಿತ್ವಮು: ಸಂಪ್ರದಾಯಮುಲು–ಪ್ರಯೋಗಮುಲು" ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ ೧೯೬೨ರಲ್ಲಿ ಪಿಹೆಚ್.ಡಿ. ಪದವಿಯನ್ನು ಪಡೆದರು.

ಡಾ॥ ಸಿ. ನಾರಾಯಣರೆಡ್ಡಿ ಅವರು ೧೯೫೪ರಲ್ಲಿ ಸಿಕಂದರಾಬಾದ್ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲಿ ತೆಲುಗು ಉಪನ್ಯಾಸಕರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ೧೯೫೮–೫೯ರಲ್ಲಿ ನಿಜಾಂ ಕಲಾ ಶಾಲೆಯಲ್ಲಿ ಕೆಲಸ ಮಾಡಿದ ಅವರು ಪಿಹೆಚ್.ಡಿ. ಪದವಿ ಪಡೆದ ತರುವಾಯ ೧೯೬೩ರಲ್ಲಿ ಹೈದರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ತೆಲುಗುರೀಡರ್ ಆಗಿ ಸೇರಿ, ೧೯೭೬ರಲ್ಲಿ ಪ್ರಾಧ್ಯಾಪಕರಾಗಿ ೧೯೮೧ ರ ತನಕ ಅಲ್ಲಿ ಸೇವೆ ಸಲ್ಲಿಸಿದರು. ೧೯೮೧ರಲ್ಲಿ ಆಂಧ್ರಪ್ರದೇಶ ಸರ್ಕಾರದ ಅಧಿಕಾರ ಭಾಷಾ ಸಂಘದ (ಕರ್ನಾಟಕದಲ್ಲಿ ಕನ್ನಡ ಕಾವಲು ಸಮಿತಿ ಇದ್ದಂತೆ) ಅಧ್ಯಕ್ಷರಾಗಿ ೧೯೮೫ ರವರೆಗೆ ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ೧೯೮೫ ರಲ್ಲಿ ಆಂಧ್ರಪ್ರದೇಶದ ಮುಕ್ತ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, ೧೯೮೯ ರ ನಂತರ ತೆಲುಗು ವಿಶ್ವವಿದ್ಯಾಲಯದ ಉಪಕುಲಪತಿಯಾಗಿ, ೧೯೯೩ರಿಂದ ಆಂಧ್ರಪ್ರದೇಶ ಸರ್ಕಾರದ ಸಂಸ್ಕೃತಿ ಮತ್ತು ಭಾಷಾ ಸಲಹೆಗಾರರಾಗಿ, ಆಂಧ್ರಪ್ರದೇಶ ರಾಜ್ಯದ ಸಾಂಸ್ಕೃತಿಕ ಮಂಡಲಿ ಅಧ್ಯಕ್ಷರಾಗಿ ಮತ್ತು ರಾಜ್ಯಸಭಾ ಸದಸ್ಯರಾಗಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ.

ಡಾ॥ ಸಿ. ನಾರಾಯಣರೆಡ್ಡಿ ಅವರು ತೆಲುಗು ಸಾರಸ್ವತ ಲೋಕದಲ್ಲಿ ಜನಪ್ರಿಯ ಕವಿಯಾಗಿ, ತೆಲುಗು ಚಲನಚಿತ್ರ ರಂಗದಲ್ಲಿ ಗೀತರಚನಕಾರರಾಗಿ, ಅಧ್ಯಾಪಕರಾಗಿ, ಪರಿಶೋಧಕರಾಗಿ, ಗಾಯಕರಾಗಿ, ದಕ್ಷ ಆಡಳಿತಗಾರರಾಗಿ ನಾಡು–ನುಡಿ, ಸಂಸ್ಕೃತಿಗಳಿಗೆ ಅನನ್ಯ ಸೇವೆ ಸಲ್ಲಿಸಿದ್ದಾರೆ. ತಾವು ತಮ್ಮ ಬಿ.ಎ. ಪದವಿ ತನಕ ಉರ್ದು ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದ್ದರೂ ಡಾ॥ ರೆಡ್ಡಿ ಅವರಿಗೆ ತಮ್ಮ ಬಾಲ್ಯದಿಂದಲೇ ಗ್ರಾಮೀಣ ಪರಿಸರದಲ್ಲಿ ಹರಿಕಥೆ, ಬೀದಿನಾಟಕ, ಜನಪದ ಗೀತೆಗಳನ್ನು ಕೇಳಿ ನೋಡಿ ಕಲಿತ ತೆಲುಗು ಭಾಷೆಯೇ ಕರಗತವಾಗಿದೆ. ಹೀಗಾಗಿ ಅವರಿಗೆ ಆಶುಗುಣ ಮತ್ತು ಗಾಯನ ಪ್ರವೃತ್ತಿಗಳು ಸಹಜವಾಗಿ ಮೈಗೂಡಿ ಬಂದಿವೆ. ಡಾ॥ ರೆಡ್ಡಿ ಅವರು ತಾವು ಹತ್ತನೆಯ ತರಗತಿಯಲ್ಲಿ ಓದುವ ಕಾಲಕ್ಕೇ ಕವಿತೆಗಳನ್ನು ಬರೆಯಲಾರಂಭಿಸಿದರು. ಇವರ ಮೊದಲ ಕೃತಿ 'ನವ್ವನಿ ಪುವ್ವು' (ನಗದ ಹೂವು) ಗೀತ ನಾಟಕ ೧೯೫೩ರಲ್ಲಿ ಪ್ರಕಟವಾಗಿದ್ದರೂ ೧೯೫೨ರಲ್ಲಿ ಪ್ರಕಟವಾದ ಡಾ॥ ರೆಡ್ಡಿ ಅವರೂ ಸೇರಿದಂತೆ ಆರುಮಂದಿ ಸಹಕವಿಗಳ ಒಟ್ಟು ೪೯ ಕವನಗಳನ್ನೊಳಗೊಂಡ 'ಪೂಲಪಾಟಲು' (ಹೂವಿನ ಹಾಡುಗಳು) ಕವನ

ಸಂಕಲನದಲ್ಲಿ ಇವರ ೧೩ ಕವನಗಳು ಸೇರಿವೆ. ಡಾ॥ ಸಿ. ನಾರಾಯಣರೆಡ್ಡಿ ಅವರ 'ಋತುಚಕ್ರಂ' (೧೯೬೪) ಗೇಯಕಾವ್ಯಕೃತಿಗೆ ೧೯೬೫ರಲ್ಲಿ ಆಂಧ್ರಪ್ರದೇಶ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. "ಮಂಟಲೂ–ಮಾನವುಡೂ" (ಜ್ವಾಲೆಗಳು ಮತ್ತು ಮಾನವ) (೧೯೭೦) ಕವನ ಸಂಕಲನಕ್ಕೆ ೧೯೭೪ರಲ್ಲಿ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ವಿಶ್ವಂಭರ (೧೯೮೦) ಸಮಗ್ರ ಕಾವ್ಯಕೃತಿಗೆ ೧೯೮೦ರಲ್ಲಿ ಕಲ್ಕತ್ತದ ಭಾರತೀಯ ಭಾಷಾ ಪರಿಷತ್ತಿನ "ಭಿಲ್ವಾರಾ ಪ್ರಶಸ್ತಿ", ೧೯೮೨ರಲ್ಲಿ ತ್ರಿವೇಂಡ್ರಂ "ಕುಮಾರನ್ ಆಸಾನ್ ಪ್ರಶಸ್ತಿ", ೧೯೮೨ರಲ್ಲಿ ಸೋವಿಯಟ್ ಲ್ಯಾಂಡ್ ನೆಹರೂ ಪ್ರಶಸ್ತಿ ('ಎ' ಶ್ರೇಣಿ) ಹಾಗೂ ೧೯೮೮ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿವೆ.

ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ೧೯೫೪ರಲ್ಲಿ ತೆಲುಗು ಎಂ.ಎ., ಪದವಿಯನ್ನು ಪಡೆದ ಡಾ॥ ಸಿ. ನಾರಾಯಣರೆಡ್ಡಿ ಅವರು ನಂತರ "ಆಧುನಿಕಾಂಧ್ರ ಕವಿತ್ವಮುಃ ಸಂಪ್ರದಾಯಮುಲು–ಪ್ರಯೋಗಮುಲು" ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ ೧೯೬೨ರಲ್ಲಿ ಪಿಹೆಚ್.ಡಿ., ಪದವಿಯನ್ನು ಪಡೆದ ಮೇಲೆ ಅವರಿಗೆ ೧೯೭೬ರಲ್ಲಿ ಮೀರತ್ ವಿಶ್ವವಿದ್ಯಾಲಯ (ಯು.ಪಿ.) ಗೌರವ ಡಾಕ್ಟರೇಟ್ (ಡಿ.ಲಿಟ್) ಅನ್ನು ೧೯೭೬ ರಲ್ಲಿ ಭಾರತ ಸರ್ಕಾರ 'ಪದ್ಮಶ್ರೀ' ಪ್ರಶಸ್ತಿಯನ್ನು, ೧೯೭೮ರಲ್ಲಿ ಆಂಧ್ರ ವಿಶ್ವವಿದ್ಯಾಲಯ (ವಾಲ್ಟೇರ್) ಗೌರವ ಡಾಕ್ಟರೇಟ್ (ಕಳಾಪ್ರಪೂರ್ಣ) ಅನ್ನು, ೧೯೮೪ ರಲ್ಲಿ ನಾಗಾರ್ಜುನ ವಿಶ್ವವಿದ್ಯಾಲಯ (ಗುಂಟೂರು) ಗೌರವ ಡಾಕ್ಟರೇಟ್ (ಡಾಕ್ಟರ್ ಆಫ್ ಲೆಟರ್ಸ್) ಅನ್ನು, ೧೯೮೭ರಲ್ಲಿ ನವದೆಹಲಿಯಲ್ಲಿ ಕೇಂದ್ರಸರ್ಕಾರ ಸೌಹಾರ್ದತಾ ಪ್ರಶಸ್ತಿಯನ್ನು, ೧೯೮೮ರಲ್ಲಿ ತೆಲುಗು ಸಾಹಿತ್ಯಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಶ್ರೀ ರಾಜಲಕ್ಷ್ಮಿ ಪ್ರಶಸ್ತಿಯನ್ನು, ೧೯೮೮ರಲ್ಲಿ ಕಾಕತೀಯ ವಿಶ್ವವಿದ್ಯಾಲಯ (ವಾರಂಗಲ್) ಗೌರವ ಡಾಕ್ಟರೇಟ್ ಅನ್ನು, ೧೯೯೨ರಲ್ಲಿ ಭಾರತ ಸರ್ಕಾರ 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿ ಗೌರವಿಸಿವೆ. ಅಷ್ಟೇ ಅಲ್ಲದೆ ದೇಶ ವಿದೇಶಗಳ ಅನೇಕ ಸಂಘ–ಸಂಸ್ಥೆಗಳು ಅವರನ್ನು ಸನ್ಮಾನಿಸಿ ಪ್ರಶಸ್ತಿಗಳು ಬಿರುದುಗಳನ್ನು ನೀಡಿ ಗೌರವಿಸಿರುತ್ತವೆ.

ಡಾ॥ ಸಿ. ನಾರಾಯಣರೆಡ್ಡಿ ಅವರು ಆಧುನಿಕ ತೆಲುಗು ಸಾರಸ್ವರ ಲೋಕದಲ್ಲಿ ಅಗ್ರಮಾನ್ಯರು ಮಾತ್ರವಲ್ಲ, ತೆಲುಗು ಚಲನಚಿತ್ರರಂಗದಲ್ಲಿ ಚಲನ ಚಿತ್ರಗೀತೆಗಳ ರಚನಾಕಾರರಾಗಿ, ಅಪಾರ ಹೆಸರು ಸಂಪಾದಿಸಿದ್ದಾರೆ. ೧೯೬೧ರಲ್ಲಿ ಪ್ರಾರಂಭವಾದ ಅವರ ಚಲನಚಿತ್ರ ಗೀತರಚನಾ ಕೃಷಿ ಇಂದಿಗೂ ಸಾಗಿದೆ. ಈತನಕ ಮೂರು ಸಾವಿರಕ್ಕೂ ಮಿಗಿಲಾಗಿ ಚಿತ್ರಗೀತೆಗಳನ್ನು ರಚಿಸಿದ ಕೀರ್ತಿ ಅವರದಾಗಿದೆ. ಅವರ ಅನೇಕ ಚಿತ್ರಗೀತೆಗಳಿಗೆ ಬಹುಮಾನ, ಪ್ರಶಸ್ತಿ ಲಭಿಸಿರುತ್ತವೆ.

ತೆಲುಗಿನಲ್ಲಿ ಪ್ರಥಮ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ॥ ವಿಶ್ವನಾಥ ಸತ್ಯನಾರಾಯಣ ಅವರು ತೆಲುಗಿನ ಶ್ರೇಷ್ಠ ಕವಿ ಮಾತ್ರವಲ್ಲ, ಜನಪ್ರಿಯ ಕಾದಂಬರಿಕಾರರೂ ಹೌದು. ಅವರ ಕಾದಂಬರಿಗಳಲ್ಲಿ 'ಏಕವೀರ' ತುಂಬಾ ಜನಪ್ರಿಯವಾದದ್ದು, ಇದು ಚಲನಚಿತ್ರವಾಗಿಯೂ ಅಪಾರ ಜನಪ್ರಿಯತೆ ಗಳಿಸಿದೆ. ಈ ಚಿತ್ರಕ್ಕೆ ಚಿತ್ರಕಥೆಯನ್ನು ಹಾಡುಗಳನ್ನು ತೆಲುಗಿನ ದ್ವಿತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ॥ ಸಿ. ನಾರಾಯಣರೆಡ್ಡಿ ಅವರು ಬರೆದಿದ್ದಾರೆ. ಇದೊಂದು ಆಕಸ್ಮಿಕವೂ, ಅಪೂರ್ವ ಸಂಗತಿಯೂ ಆಗಿದೆ.

ಡಾ॥ ಸಿ. ನಾರಾಯಣರೆಡ್ಡಿ ಅವರು ತೆಲುಗು ಚಲನಚಿತ್ರಗಳಿಗೆ ತಮ್ಮ ಬಹುಮುಖ ಪ್ರತಿಭೆಯಿಂದ ಸೊಗಸಾದ ಚಿತ್ರಗೀತೆಗಳನ್ನು ಬರೆದಿದ್ದಾರೆ. ಇವರ ಚಿತ್ರಗೀತೆಗಳಲ್ಲಿ ಪ್ರಣಯಗೀತೆಗಳು, ಜನಪದಗೀತೆಗಳು, ಪ್ರಕೃತಿ ಗೀತೆಗಳು, ದೇಶಭಕ್ತಿ ಗೀತೆಗಳು, ವಿಷಾದ ಗೀತೆಗಳು, ಭಕ್ತಿ ಗೀತೆಗಳು, ನೀತಿ ಪ್ರಧಾನಗೀತೆಗಳು ಹೀಗೆ ಹಲವು ಹತ್ತು ಬಗೆಗಳಿವೆ. ಡಾ॥ ರೆಡ್ಡಿ ಅವರು ಮೂಲತಃ ವೃತ್ತಿಯಲ್ಲಿ ಕಾಲೇಜ್ ಅಧ್ಯಾಪಕರು, ಆದರೆ ಹುಟ್ಟುಕವಿ. ತೆಲುಗಿನ ಶ್ರೇಷ್ಠ ಕವಿಯಾಗಿದ್ದು, ಚಿತ್ರರಂಗ ಪ್ರವೇಶಿಸಿ ಹೇರಳವಾಗಿ ಚಿತ್ರಗೀತೆಗಳನ್ನು ಬರೆದರೂ ತಮ್ಮನ್ನು ಅಲ್ಲಿಯೇ ಶಾಶ್ವತವಾಗಿ ಮುದ್ರೆ ಹಾಕಿಕೊಂಡಿಲ್ಲ. ಅವರು ಎಷ್ಟೇ ಚಿತ್ರಗೀತೆಗಳನ್ನು ಬರೆದರೂ ಸೃಜನಶೀಲ ಕವಿಯಾಗಿ ತಮ್ಮ ಮೂಲಸತ್ವವನ್ನು ಕಳೆದುಕೊಂಡಿಲ್ಲ. ಎರಡೂ ಕಡೆ ತಮ್ಮ ತನವನ್ನು ಪ್ರತ್ಯೇಕವಾಗಿ ಉಳಿಸಿಕೊಂಡಿದ್ದಾರೆ. ಇವರಲ್ಲಿ ತೆಲುಗಿನ ಸಾರಸ್ವತ ಲೋಕ, ಚಲನಚಿತ್ರ ಪ್ರಪಂಚಗಳು ಪರಸ್ಪರ ಸಮಾನಾಂತರವಾಗಿ ಪ್ರತ್ಯೇಕವಾಗಿ ಸಾಗಿವೆಯೆಂದೇ ಹೇಳಬೇಕು. ಒಂದುಕಡೆ ಚಲನಚಿತ್ರ ರಂಗದಲ್ಲಿ ಅತ್ಯಧಿಕ ಚಿತ್ರಗೀತೆಗಳನ್ನು ರಚಿಸಿರುವ ಡಾ॥ ರೆಡ್ಡಿ ಅವರು ಮತ್ತೊಂದು ಕಡೆ ಜನಪ್ರಿಯ ತೆಲುಗು ಕವಿಯಾಗಿಯೂ ಅತ್ಯಧಿಕ ಕಾವ್ಯಕೃತಿಗಳನ್ನೂ ರಚಿಸಿದ್ದಾರೆ. ಒಂದು ವಿಶೇಷವೆಂದರೆ ತೆಲುಗಿನಲ್ಲಿ ಚಲನಚಿತ್ರ ಗೀತೆಗಳನ್ನು ಬರೆದ ಬಹುಮಂದಿ ಮೂಲತಃ ತೆಲುಗು ಸಾರಸ್ವತ ಲೋಕದ ಶ್ರೇಷ್ಠ ಕವಿಗಳೂ ಆಗಿರುವುದು. ಈ ಪೈಕಿ 'ಶ್ರೀ ಶ್ರೀ ಆರುದ್ರ', 'ದಾಶರಥಿ', 'ಆತ್ರೇಯ', 'ಸಮುದ್ರಾಲ', ಸಿನಾರೆ' ಮೊದಲಾದವರನ್ನು ಹೆಸರಿಸಬಹುದು. ಇತರೆ ಭಾಷೆಗಳಲ್ಲಿ ಇಂಥ ಸಂದರ್ಭ ತೀರಾ ವಿರಳವೆಂದೇ ಹೇಳಬೇಕು.

ಡಾ॥ ಸಿ. ನಾರಾಯಣರೆಡ್ಡಿ ಅವರು ಅಧ್ಯಾಪಕರಾಗಿ, ಜನಪ್ರಿಯ ತೆಲುಗು ಕವಿಯಾಗಿ, ರಾಷ್ಟ್ರದ ಸಾಂಸ್ಕೃತಿಕ ರಾಯಭಾರಿಯಾಗಿ ವಿಶ್ವದ ಹಲವು ರಾಷ್ಟ್ರಗಳ ಸಂಘ–ಸಂಸ್ಥೆ ಹಾಗೂ ಸರ್ಕಾರಗಳ ಆಹ್ವಾನದ ಮೇರೆಗೆ ವಿಶ್ವದ ಅನೇಕ ದೇಶಗಳಿಗೆ ಭೇಟಿನೀಡಿ, ನಾಡು–ನುಡಿಗಳ ಘನತೆ ಗೌರವಗಳನ್ನು ಹೆಚ್ಚಿಸಿದ್ದಾರೆ.

ಡಾ॥ ಸಿ. ನಾರಾಯಣರೆಡ್ಡಿ ಅವರು ತೆಲುಗಿನಲ್ಲಿ ಕಾವ್ಯ, ನಾಟಕ, ವಿಮರ್ಶೆ, ಪ್ರಬಂಧ, ಅನುವಾದ ಮೊದಲಾದ ಪ್ರಕಾರಗಳಲ್ಲಿ ಬಹಳಷ್ಟು ಕೃತಿಗಳನ್ನು ರಚಿಸಿ

ತೆಲುಗು ಸಾರಸ್ವತ ಲೋಕದ ಔನ್ನತ್ಯವನ್ನು ಹೆಚ್ಚಿಸಿದ್ದಾರೆ. ಒಬ್ಬ ಲೇಖಕ ಒಂದು ಭಾಷೆಯಲ್ಲಿ ಎಷ್ಟು ಬರೆದ, ಏನು ಬರೆದ ಎಂಬುವಲ್ಲಿ ಡಾ॥ ರೆಡ್ಡಿ ಅವರು ಎರಡರಲ್ಲೂ 'ಸೈ' ಅನ್ನಿಸಿಕೊಂಡಿದ್ದಾರೆ. ಇವರ ಅಧಿಕ ಸಂಖ್ಯೆಯ ಮೌಲಿಕ ಕಾವ್ಯ ಕೃತಿಗಳನ್ನು ನೋಡಿದರೆ ಎಂಥವರಿಗೂ ಅಚ್ಚರಿಯಾಗುತ್ತದೆ. ಅವರ ಒಟ್ಟು ಕೃತಿಗಳ ಪೈಕಿ ಐವತ್ತಕ್ಕೂ ಹೆಚ್ಚಾಗಿ ಕಾವ್ಯಕೃತಿಗಳೇ ಇರುವುದೊಂದು ವಿಶೇಷ. ಅವರ ಕಾವ್ಯಕೃತಿಗಳನ್ನು ಮುಖ್ಯವಾಗಿ ನೀಳ್ಗವನ ಕೃತಿಗಳು (Long poems), ಮುಕ್ತಛಂದಸ್ಸಿನ ಕವನ ಸಂಕಲನಗಳು (ವಚನ ಕವಿತೆಗಳು) (Volumes of free Verse), ಗೀತ ನಾಟಕಗಳು, (Lyrical plays), 'ತೆಲುಗು ಗಜ಼ಲ್‌ಗಳು', 'ದ್ವಿಪದಿಗಳು' (Epigrams) ಮೊದಲಾಗಿ ಗುರ್ತಿಸಬಹುದು. ಹೀಗೆ ಡಾ॥ ರೆಡ್ಡಿ ಅವರು ವಿವಿಧ ಪ್ರಕಾರಗಳಲ್ಲಿ ಕಾವ್ಯಕೃಷಿಯನ್ನು ಮಾಡಿ ತೆಲುಗು ಸಾರಸ್ವತ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಮತ್ತು ವೈವಿಧ್ಯತೆಯನ್ನು ಮೆರೆದಿದ್ದಾರೆ. ಇವರ ಕಾವ್ಯ ರಚನೆಯಲ್ಲಿ ಹೆಚ್ಚು ಪ್ರಾಮುಖ್ಯತೆ ಇರುವುದು ಅವರ ಮುಕ್ತ ಛಂದಸ್ಸಿನ ಕವಿತಾ ರಚನೆಗೆ ಎಂಬುದು ಮುಖ್ಯವಾದ ಅಂಶ. ಈ ವಚನ ಕವಿತಾ ರಚನೆಯಲ್ಲಿ ಒಂದು ಪ್ರತ್ಯೇಕತೆ ಹಾಗೂ ವಿಶಿಷ್ಟತೆಯಿರುವುದು ಕಂಡುಬರುತ್ತದೆ.

ಡಾ॥ ಸಿ. ನಾರಾಯಣರೆಡ್ಡಿ ಅವರು ನಿರಂತರವಾಗಿ ತಮ್ಮ ಕಾವ್ಯಕೃಷಿ ನಡೆಸುತ್ತಲೇ ಬಂದಿದ್ದಾರೆ. ೧೯೯೫ರ ನಂತರದಲ್ಲಿ ಪ್ರಕಟವಾಗಿರುವ 'ಸಿನಾರೆಗಜ಼ಲ್ಲು', 'ಕಲಂಸಾಕ್ಷಿಗಾ' (ಲೇಖನಿ ಸಾಕ್ಷಿಯಾಗಿ), 'ಭೂಗೋಳಮಂತ ಮನಿಷಿ ಬೊಮ್ಮ', (ಭೂಗೋಳದಷ್ಟು ಮನುಷ್ಯ ಗೊಂಬೆ), 'ಮಟ್ಟೀ ಮನಿಷೀ ಆಕಾಶಂ' (ಮಣ್ಣು, ಮನುಷ್ಯ ಮತ್ತು ಆಕಾಶ), 'ಗದಿಲೋ ಸಮುದ್ರಂ' (ಕೊಠಡಿಯಲ್ಲಿ ಸಮುದ್ರ), 'ವ್ಯಕ್ತಿತ್ವಂ', 'ದೂರಾಲನು ದೂಸು ಕೊಚ್ಚಿ', (ದೂರಗಳನ್ನು ತಳ್ಳಿಕೊಂಡು ಬಂದು), 'ಸಪ್ತತಿ ಒಕ ಲಿಪ್ತಿಗಾ' (ಸಪ್ತತಿ ಒಂದು ಲಿಪ್ತಿಯಾಗಿ), 'ರೆಕ್ಕಲಸಂತಕಾಲು' (ರೆಕ್ಕೆಗಳ ಸಹಿಗಳು), 'ಜ್ವಾಲಗಾ ಜೀವಿಂಚಾಲನಿ' (ಜ್ವಾಲೆಯಾಗಿ ಜೀವಿಸಬೇಕೆಂದು), 'ಕೊನಗೋಟಿ ಮೀದ ಜೀವಿತಂ' (ತುದಿ ಉಗುರ ಮೇಲೆ ಜೀವನ) ಮೊದಲಾದವು ಗಮನಾರ್ಹ ಕಾವ್ಯ ಕೃತಿಗಳು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಾನು ಕನ್ನಡ ಬಿ.ಎ. (ಆನರ್ಸ್) ವ್ಯಾಸಂಗ ಮಾಡುತ್ತಿದ್ದ ಕಾಲಕ್ಕೆ ನನಗೆ ತೆಲುಗು ಸಾಹಿತ್ಯವನ್ನು ಅಭ್ಯಾಸ ಮಾಡುವ ಅವಕಾಶ ಲಭಿಸಿತು. ಮೊದಲಿನಿಂದಲೂ ಕಾವ್ಯದ ಬಗ್ಗೆ ಹೆಚ್ಚು ಆಸಕ್ತಿಯಿದ್ದ, ಸಹಜವಾಗಿ ಮನೆಯಲ್ಲಿ ತೆಲುಗು ಭಾಷೆಯನ್ನೂ ಆಡುಭಾಷೆಯಾಗಿ ಬಲ್ಲ ನನಗೆ ಆ ಕಾಲಕ್ಕೆ ತೆಲುಗಿನ ಸಾಹಿತ್ಯ ಕ್ಷೇತ್ರ ಹಾಗೂ ಚಲನಚಿತ್ರ ರಂಗಗಳಲ್ಲಿ ಖ್ಯಾತನಾಮರಾಗಿದ್ದ ಡಾ॥ ಸಿ. ನಾರಾಯಣರೆಡ್ಡಿ ಅವರ ಕವಿತೆಗಳ ಕಡೆ ಗಮನ

ಸೆಳೆಯಿತು. ಅಲ್ಲದೆ, ಅವರ ಕವಿತೆಗಳಲ್ಲಿನ ಚಿಂತನಶೀಲತೆ, ಗಂಭೀರ ಭಾವ, ಸುಲಲಿತ ಶೈಲಿ ಹಾಗೂ ಸರಳ ಸುಂದರ ಭಾಷೆ ನನ್ನನ್ನು ಬಹಳವಾಗಿ ಆಕರ್ಷಿಸಿದವು. ಹೀಗಾಗಿ ಆ ಕಾಲಕ್ಕೆ ಅವರ ಪ್ರಕಟಿತ ಕವಿತೆಗಳಿಂದ ಕೆಲವನ್ನು ಕನ್ನಡಕ್ಕೆ ಅನುವಾದಿಸಿ, ಅವರ ಅನುಮತಿ ಪಡೆದು ಕೆಲವು ಕನ್ನಡ ಪತ್ರಿಕೆಗಳಲ್ಲಿ ಪ್ರಕಟಿಸ ತೊಡಗಿದೆ. ೧೯೭೬ರಲ್ಲಿ ನಾನು ಆ ವರೆಗೆ ಅನುವಾದಿಸಿದ್ದ ಡಾ॥ ರೆಡ್ಡಿ ಅವರ ಕವಿತೆಗಳ ಪೈಕಿ ಆಯ್ದ ಇಪ್ಪತ್ತೈದು ಕವಿತೆಗಳನ್ನು 'ಹೊಸಮುಖ ತೊಟ್ಟುಕೊ' ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಇದರಲ್ಲಿ ೧೯೭೪ ರ ವರೆಗೆ ಡಾ॥ ಸಿ. ನಾರಾಯಣರೆಡ್ಡಿ ಅವರು ರಚಿಸಿದ ಕವಿತೆಗಳು ಸೇರಿವೆ. ೧೯೯೨ರಲ್ಲಿ ನಾನು ಕನ್ನಡಕ್ಕೆ ಅನುವಾದಿಸಿದ ಅವರ ಜ್ಞಾನಪೀಠ ಪ್ರಶಸ್ತಿ ವಿಜೇತ ಸಮಗ್ರ ಕಾವ್ಯಕೃತಿ 'ವಿಶ್ವಂಭರಾ' ಪ್ರಕಟವಾಗಿದೆ. ಮತ್ತೆ ಆ ಕೃತಿ ೨೦೦೧ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಮರುಮುದ್ರಣಗೊಂಡಿದೆ. ಡಾ॥ ರೆಡ್ಡಿ ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ (೧೯೭೪) ಕವನ ಸಂಕಲನ 'ಮಂಟಲೂ–ಮಾನವುಡೂ' ಕೃತಿಯ ನನ್ನ ಕನ್ನಡಾನುವಾದ "ಜ್ವಾಲೆಗಳು ಮತ್ತು ಮಾನವ" ಹಾಗೂ ಡಾ॥ ರೆಡ್ಡಿ ಅವರ ೧೯೭೫ ರಿಂದ ೧೯೯೪ ರವರೆಗಿನ ರಚನೆಗಳಲ್ಲಿನ ಕವಿತೆಗಳ (Free Verse) ಪೈಕಿ ನಾನು ಅನುವಾದಿಸಿದ ಆಯ್ದ ನೂರೊಂದು ಕವಿತೆಗಳ ಕನ್ನಡಾನುವಾದ 'ಸಮನ್ವಯ' ಎಂಬ ಹೆಸರಿನಲ್ಲಿ ಎರಡೂ ಕೃತಿಗಳು ೧೯೯೯ ರಲ್ಲಿ ಪ್ರಕಟವಾಗಿರುತ್ತವೆ.

೨೦೦೨ ರಲ್ಲಿ ಅವರ ಪ್ರತೀಕಾತ್ಮಕ ತೆಲುಗು ದೀರ್ಘಕಾವ್ಯ 'ಮಟ್ಟೀ ಮನಿಷೀ ಆಕಾಶಂ' ಕೃತಿಯ ನನ್ನ ಕನ್ನಡಾನುವಾದ 'ಮಣ್ಣು, ಮನುಷ್ಯ ಮತ್ತು ಆಕಾಶ' ಪ್ರಕಟವಾಗಿದೆ. ೨೦೦೬ ರಲ್ಲಿ ಅವರ 'ಜ್ವಾಲಗಾ ಜೀವಿಂಚಾಲನಿ' ತೆಲುಗು ಕವನ ಸಂಕಲನ ನನ್ನ ಕನ್ನಡಾನುವಾದ 'ಜ್ವಾಲೆಯಾಗಿ ಜೀವಿಸಬೇಕೆಂದು' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ.

ಡಾ॥ ಸಿ. ನಾರಾಯಣ ರೆಡ್ಡಿ ಅವರ ತೆಲುಗು ಕಾವ್ಯವನ್ನು ನಾನು ೧೯೬೯ ರಿಂದ ನಿರಂತರವಾಗಿ ಕನ್ನಡಕ್ಕೆ ಅನುವಾದಿಸುತ್ತಾ ಬಂದಿದ್ದೇನೆ. ಈ ವರೆಗೆ ಈ ಕೃತಿಯೂ ಸೇರಿ ನಾನು ಅನುವಾದಿಸಿದ ಅವರ ಒಟ್ಟು ಏಳು ಕಾವ್ಯ ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿರುತ್ತದೆ.

ಕರ್ನಾಟಕ ಅನುವಾದ ಅಕಾಡೆಮಿ ಸುವರ್ಣಕರ್ನಾಟಕ ಆಚರಣೆ ಸಂದರ್ಭದಲ್ಲಿ ಕೈಗೆತ್ತಿಕೊಂಡಿರುವ ಕೆಲವು ಅನುವಾದ ಕೃತಿಗಳ ಪ್ರಕಟನೆಯಲ್ಲಿ ಡಾ॥ ಸಿ. ನಾರಾಯಣ ರೆಡ್ಡಿ ಅವರ ಇತ್ತೀಚಿನ ಕವನ ಸಂಕಲನ "ಕಲಸಿ ನಡಿಚೇಕಲಂ" ಅನ್ನು ಕನ್ನಡದಲ್ಲಿ ಪ್ರಕಟಿಸಲು ಉದ್ದೇಶಿಸಿದ್ದು, ಅದರಂತೆ ಅಕಾಡೆಮಿ ಅಪೇಕ್ಷೆ ಮೇರೆಗೆ ಈ ಕವನಸಂಕಲನವನ್ನು ನಾನು ಕನ್ನಡಕ್ಕೆ ಅನುವಾದಿಸಿ ಕೊಟ್ಟಿರುತ್ತೇನೆ.

ಯಥಾ ಪ್ರಕಾರ ಕನ್ನಡ ಮತ್ತು ತೆಲುಗು ಸೋದರ ಭಾಷೆಗಳ ಸಾಹಿತ್ಯ ಮತ್ತು ಸಂಸ್ಕೃತಿಗಳ ಜಾಯಮಾನ ಬಹು ವಿಧದಲ್ಲಿ ಪರಸ್ಪರ ತೀರಾ ಸಮೀಪವಿರುವುದರಿಂದ ಹಾಗೂ ಲಿಪಿಯಿಂದಲೂ ಬಹುಮಟ್ಟಿಗೆ ಸಾಮತ್ಯೆಯಿರುವುದರಿಂದ ಓದುಗರು ಈ ಅನುವಾದದ ಮೂಲಕ ಮೂಲಕಾವ್ಯವನ್ನು ಆಸ್ವಾದಿಸಲು ಸುಲಭಸಾಧ್ಯವೆಂದು ನಾನು ಭಾವಿಸಿದ್ದೇನೆ.

ಡಾ॥ ಸಿ. ನಾರಾಯಣ ರೆಡ್ಡಿ ಅವರು ಮೊದಲಿನಿಂದಲೂ ನನ್ನ ಅನುವಾದ ಕಾರ್ಯ ಹಾಗೂ ಸಾಹಿತ್ಯ ಚಟುವಟಿಕೆಗಳನ್ನು ನಿರ್ವಾಜ್ಯ ಪ್ರೇಮದಿಂದ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಾ ನನ್ನ ಕಾವ್ಯಕೃಷಿಗೆ ಪ್ರೇರಕ ಶಕ್ತಿಯಾಗಿದ್ದಾರೆ. ಇದೀಗ ಅವರ ಈ "ಕಲಸಿ ನಡಿಚೇ ಕಲಂ" (ಕೂಡಿ ನಡೆಯುವ ಲೇಖನಿ) ಕವನ ಸಂಕಲನವನ್ನು ಕನ್ನಡಕ್ಕೆ ಅನುವಾದಿಸಿ ಕರ್ನಾಟಕ ಅನುವಾದ ಅಕಾಡೆಮಿ ಮೂಲಕ ಪ್ರಕಟಿಸಲು ಅಕ್ಕರೆಯಿಂದ ಅನುಮತಿ ನೀಡಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಹೃದಯಪೂರ್ವಕ ಅನಂತ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ತಮ್ಮ ಅನುವಾದ ಅಕಾಡೆಮಿ ಮೂಲಕ ಪ್ರಕಟಿಸಲು ಅಕ್ಕರೆಯಿಂದ ಮುಂದೆ ಬಂದು ನನಗೆ ಈ ಕೃತಿಯ ಅನುವಾದ ಕಾರ್ಯಕ್ಕೆ ಅನುವು ಮಾಡಿಕೊಟ್ಟ ಸುಪ್ರಸಿದ್ಧ ಸಾಹಿತಿಗಳು, ಬಹುಭಾಷಾಕೋವಿದರೂ, ಕರ್ನಾಟಕ ಅನುವಾದ ಅಕಾಡೆಮಿ ಅಧ್ಯಕ್ಷರೂ ಆದ ಡಾ॥ ಪ್ರಧಾನ್ ಗುರುದತ್ತ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಈ ಅನುವಾದ ಕೃತಿಯನ್ನು ಪ್ರಕಟಿಸುವಲ್ಲಿ ಆಸಕ್ತಿ ತೋರಿದ ಕರ್ನಾಟಕ ಅನುವಾದ ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ನಾರಾಯಣಸ್ವಾಮಿ ಅವರಿಗೆ, ಈ ಕೃತಿಯನ್ನು ಅಂದವಾಗಿ ಮುದ್ರಿಸಿದ ಮಯೂರ ಪ್ರಿಂಟ್ ಆರ್ಟ್ಸ್ ಅವರಿಗೆ, ಕೃತಿಯ ಮುಖಪುಟ ವಿನ್ಯಾಸ ಮಾಡಿರುವ ಶ್ರೀ ವಿಶ್ವನಾಥ್ ಅವರಿಗೆ ಈ ಅನುವಾದ ಕೃತಿಯ ಕರಡು ಸಿದ್ಧಪಡಿಸುವಲ್ಲಿ ನೆರವಾದ ಸಾಹಿತ್ಯ ಬಂಧುಗಳಾದ ಡಾ॥ ಎ. ಅಂಜನಪ್ಪ ಮತ್ತು ಡಾ॥ ಅಣ್ಣಮ್ಮನವರಿಗೆ, ಈ ಕೃತಿ ಹೊರ ಬರುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾದ ಎಲ್ಲಾ ಸಹೃದಯ ಬಂಧುಗಳಿಗೆ ನನ್ನ ಹೃತ್ಪೂರ್ವಕ ಅನಂತ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು ೫೬೦ ೦೫೨ **ಮಾರ್ಕಂಡಪುರಂ ಶ್ರೀನಿವಾಸ**

ದಿನಾಂಕ : ೧೮.೦೬.೨೦೦೭

# ಪರಿವಿಡಿ


| | | | |
|---|---|---|---|
| ೧. | ತುಳುಕಿದರೆನೇ ಅಲ್ಲವೇ ! | ... | ೧ |
| ೨. | ದಡ ಮುಟ್ಟುವ ತನಕ | ... | ೩ |
| ೩. | ನನ್ನನ್ನು ಕುಡಿದ ಆಕಾಶ | ... | ೫ |
| ೪. | ರಿವೈಂಡ್ ಮಾಡಿ ನೋಡಿಕೊ | ... | ೭ |
| ೫. | ಸರಿ ತೂಕ | ... | ೯ |
| ೬. | ಇದ್ದರೆ ಹಾಗೆ ಇರಬೇಕು | ... | ೧೧ |
| ೭. | ಹಾರಿ ಬಂದ ಪುಸ್ತಕ | ... | ೧೩ |
| ೮. | ಜೀವಿಸುತ್ತಲೇ ಇರುತ್ತೇನೆ | ... | ೧೫ |
| ೯. | ಅಂತರಿಕ್ಷ ಸುರಿಸಿದ ಅಶ್ರುಬಿಂದು | ... | ೧೭ |
| ೧೦. | ಅಂಟಿಸಿದ ರೆಕ್ಕೆಗಳು | ... | ೧೯ |
| ೧೧. | ವಿಜೃಂಭಿತ ಗತಿಯಲ್ಲಿ | ... | ೨೧ |
| ೧೨. | ತಿರುಗಿ ಹೋಗಬಾರದು | ... | ೨೩ |
| ೧೩. | ಸಂಘೀ ಭಾವ | ... | ೨೫ |
| ೧೪. | ಪ್ರತಿಘಟ್ಟ ಪತಾಕ ಸನ್ನಿವೇಶವೇ | ... | ೨೭ |
| ೧೫. | ಪ್ರಾತಿಪದಿಗಳು | ... | ೨೯ |
| ೧೬. | ಸವೆದುಹೋಗದ ನಿಧಿಗಳು | ... | ೩೧ |
| ೧೭. | ಮಾತನಾಡಿಕೊಂಡ ನೆರಳುಗಳು | ... | ೩೩ |
| ೧೮. | ಮೇಧಾ ಮಂಡಲವೇ ತಿರುಗಿಬೀಳು | ... | ೩೫ |
| ೧೯. | ಬೀದಿ ಸದ್ದನ್ನು ಈಜುತ್ತಾ ಹೋದರೆ | ... | ೩೭ |
| ೨೦. | ಆ ಚಿತ್ರ | ... | ೩೯ |
| ೨೧. | ಕಾಲಕ್ಕೆ ಅಂದಾಜು ಕಟ್ಟುವುದ್ಹೇಗೆ ? | ... | ೪೧ |
| ೨೨. | ಎಷ್ಟು ವೈವಿಧ್ಯವೆಂದು | ... | ೪೩ |
| ೨೩. | ಮನಸ್ಸಿಗೆ ಮಂಕು ಕವಿಯದವರೆಗೆ | ... | ೪೫ |
| ೨೪. | ಮನಸ್ಸಿನೊಂದಿಗೆ ನಡೆಯಬಹುದಾದರೇ | ... | ೪೭ |
| ೨೫. | ಅನುಭವ ಗುಚ್ಛ | ... | ೪೯ |
| ೨೬. | ವ್ಯವಧಿ | ... | ೫೧ |

೨೭. ಡೈರಿ ... ೫೨
೨೮. ಸೃಜನ ಯಾತ್ರೆ ... ೫೪
೨೯. ನ್ಯಾಯ ಪ್ರಜ್ವಲಿಸಬೇಕೆಂದರೆ ... ೫೬
೩೦. ಸಂಘಟನೆ ಚಿಕ್ಕದೇ – ಆದರೆ ... ೫೮
೩೧. ಅನಿವಾರ್ಯ ಪರಿಣಾಮ ... ೬೦
೩೨. ಸಮತೂಕವೆಂದರೆ ಅದೇ ... ೬೨
೩೩. ಹಿಂದೆ ಸರಿಯದ ಶಸ್ತ್ರ ... ೬೪
೩೪. ಆ ಅಕ್ಷರಗಳು ಯಾವ ಲಿಪಿಯಲ್ಲೋ ... ೬೬
೩೫. ಅಂಚುಗಳು ಎರಡು ... ೬೮
೩೬. ನನ್ನೊಂದಿಗೆ ಆಡಿಕೊಂಡ ಚೆಂಡು ... ೭೦
೩೭. ಮತ್ತೊಮ್ಮೆ ಮನುಷ್ಯನನ್ನು ಕುರಿತು ... ೭೧
೩೮. ಬೆವರ ಹನಿಗಳು ... ೭೩
೩೯. ಪ್ರವಾಹ ರೂಪದಲ್ಲಿ ನಾನು ... ೭೫
೪೦. ಹನಿಯೇ ಅಲ್ಲವೆ ಎಂದುಕೊಳ್ಳಬೇಡ ... ೭೭
೪೧. ಅನಿರ್ವಚನೀಯ ... ೭೯
೪೨. ಅದಕ್ಕದೇ ... ೮೧
೪೩. ಅಕ್ಷರ ... ೮೩
೪೪. ಕೂಡಿ ನಡೆವ ಲೇಖನಿ ... ೮೫
೪೫. ಹರಿತವೆಷ್ಟೋ ತಿಳಿಯಬೇಕೆಂದರೆ ... ೮೭
೪೬. ಸಮನ್ವಯಿಸಿಕೊಂಡರೆ ... ೮೯
೪೭. ಉಪೇಕ್ಷಿಸಿದರೆ ಅಷ್ಟೇ ... ೯೧
೪೮. ಪೊರೆಗಳು ಬಿಚ್ಚಿ ನೋಡಿದರೆ ... ೯೩
೪೯. ಅನುಭವಿಸದ ಹೊರತು ... ೯೫
೫೦. ಅವೇ ಪಕ್ಷಿಗಳು ಮತ್ತೊಂದು ಕೋನದಿಂದ ... ೯೭
೫೧. ಮುಗಿಯುವುದೆಂದೋ? ... ೯೯
೫೫. ನೋಟಗಳು ನೋಟಗಳೇ ... ೧೦೧
೫೩. ತಾರೆ ನುಡಿದ ಮಾತು ... ೧೦೩
೫೪. ಪರಿಪೂರ್ಣಾಕೃತಿ ... ೧೦೫
೫೫. ಹೀಗೇ ಇರುತ್ತೇನೆಂದರೆ ... ೧೦೭
೫೬. ತ್ಯಾಗ ನಿರತಿ ... ೧೦೯
೫೭. ಹೊಳಪುಗಳಿಗೇನು ಕೊರತೆ ? ... ೧೧೧

## ತುಳುಕಿದರೇನೇ ಅಲ್ಲವೇ !

ತುಳುಕುವಿಕೆಯಲ್ಲಿ ಒಂದು ಅಂದವಿದೆ
ಮಧುಪಾತ್ರೆಯಾದರೂ ಮನಸ್ಸಾದರೂ.
ತುಳುಕಿದರೇನೇ ಅಲ್ಲವೇ
ಅದರ ಪರಿಪೂರ್ಣತೆ ನಮಗೆ ತಿಳಿಯುವುದು.
ತುಳುಕಿದಾಗ ಏರ್ಪಟ್ಟ ಆ ತುಸು ಖಾಲಿಯನ್ನು
ಆಗಿಂದಾಗಲೆ
ಹೊಚ್ಚ ಹೊಸ ಮೌಲ್ಯಗಳೊಂದಿಗೆ ತುಂಬುತ್ತಾ ಹೋಗಬೇಕು.
ಅಗತ್ಯವಾದಾಗ ಬಸಿಯುತ್ತಾ ಹೋಗಬೇಕು.
ಸೃಷ್ಟಿಗತಿಗಳನ್ನು ಸರಿಪಡಿಸುವ ಕಾಲಕ್ಕೇ
ಶಾಶ್ವತ ಸಮಗ್ರತೆ ಇರದು.
ಅಷ್ಟುಮಾತ್ರಕ್ಕೆ ಅದು ಕನವರಿಸುತ್ತದಾ.
ಹೊರಉಕ್ಕುವ ತನ್ನ ಶಿರಸ್ಸಿನೊಂದಿಗೆ
ವರ್ಷಧಾರೆಗಳನ್ನು ಮೇಲಕ್ಕೆತ್ತಿ ಚಿಮ್ಮುವ
ಜೀವನದಿಯನ್ನು ನೋಡಿ ನಗಾಡಿಕೊಳ್ಳುತ್ತದೆ ಅದು.
ಬಿಸಿಲು ಮೇಲೆ ಬೀಳುತ್ತಲೇ ಆ ನದಿ ಕೈ ಬೆರಳುಗಳು
ದಡವನ್ನು ಮುಟ್ಟಲಾಗದೆ ಕುಗ್ಗಿಹೋಗುತ್ತಿದ್ದರೆ
ಅಯ್ಯೋ ಪಾಪ ಎನ್ನುತ್ತ ಗೋಳಾಡುತ್ತದೆ ಕಾಲ.
ವಿವೇಕನೇತ್ರದಿಂದ ವೀಕ್ಷಿಸುತ್ತಾ
ಭವಿತವ್ಯವನ್ನು ನಿರ್ದೇಶಿಸಿಕೊಂಡಾಗಲೇ ಉಂಟಾಗುತ್ತದೆ
ಲಕ್ಷ್ಯೋಚಿತ ಪುನರುಜ್ಜೀವನ.
ಬದುಕು ಅಷ್ಟೇ!
ಸುರಿಯದ ಮೇಘದಂತೆ ಅದು
ಸದಾ ತುಂಬಿರಬೇಕೆಂದುಕೊಂಡರೆ ಹೇಗೆ ?
ಸುರಿದು ನಿಂತುಹೋಗದೆಯೇ ಅದು
ತನ್ನಲ್ಲಿ ವಿನೂತನ ಚೈತನ್ಯ ಧಾತುಗಳನ್ನು

ತುಂಬಿಕೊಳ್ಳುತ್ತಿರಬೇಕು
ಈ ಪ್ರಾಥಮಿಕ ಪಾಠ
ವಿಜ್ಞತೆಗೆ ಹಾಕಿದ ಮೂಲಪೀಠ.

●

## ದಡ ಮುಟ್ಟುವ ತನಕ

ತಿರುಗಿ ನೋಡಿಕೊಂಡರೆ ಏನಿದೆ.
ಕಾಲದ ಮರಳಲ್ಲಿ
ಹೆಜ್ಜೆ ಗುರುತುಗಳು ಕೂಡಾ ಉಳಿಯಲಿಲ್ಲ.
ಗಮ್ಯ ನಿನ್ನ ಹಿಂದೆ ಇಲ್ಲ
ಮುಂದಿರುವ ಶೂನ್ಯಕ್ಕೆ ಆ ಕಡೆ ಎಲ್ಲೋ ಇದೆ.
ಸಾಗಿ ಸಾಗಿ
ಕುಸಿದುಬೀಳುತ್ತಿರುವ ಶ್ವಾಸಗಳನ್ನು
ಅಂಗೈಯಲ್ಲಿ ಹಿಡಿದುಕೊಂಡು ಪುರೋಗಮಿಸಿದಾಗ
ನಿನ್ನ ಗತಿಗೆ ಕ್ಷತಿ ಇರದು
ತಿರೋಗತಿ ಇರದು.
ಅನುಕ್ಷಣ ನಿನ್ನ ಕಣ್ಣುಬ್ಬುಗಳು
ಹೆದೆಯೇರಿಸಿದ ಧನಸ್ಸಿನಂತೆ ಇರಬೇಕು.
ಹದನಿರಿಸಿಕೊಂಡ ನೋಟಗಳು
ಪ್ರಯೋಗಗಳಿಗೆ ಸಂಸಿದ್ಧವಾಗಿರುವ ಅಸ್ತ್ರಗಳಂತಿರಬೇಕು.
ನೀರಿನ ತುಂತುರಿನಂಥ ಸಾನುಭೂತಿ ವಾಕ್ಯಗಳನ್ನು
ಎಂದಿಗೂ ಆಶಿಸಬೇಡ
ನೀನೇ ಒಂದು ಕುಂಭವೃಷ್ಟಿಯಾಗಿ ಸುರಿಯುತ್ತಾ ಹೋಗಬೇಕು.
ಒಂದೊಂದು ಪರ್ಯಾಯ
ನೈರಾಶ್ಯ ಪಾಳುಬಿದ್ದ ಹಳ್ಳದಂತೆ ಎದುರಾಗುತ್ತದೆ.
ಪಾದಗಳ ರೆಕ್ಕೆಗಳಿಂದ ಹಾರುವವನಿಗೆ
ಅದೊಂದು ಲೆಕ್ಕವೇ ?
ಹೀಗೆ ಎಷ್ಟು ದಿನ ನಡೆಯುತ್ತ ಹೋಗಬೇಕೆಂದು
ಆಗಲೇ ಗುಣಾಕಾರ ಪ್ರಾರಂಭಿಸಬೇಡ.
ನಿಟ್ಟುಸಿರು ಬಿಡದ ನಿನ್ನ ಗಮನವನ್ನು ನೋಡಿ
ಪರವಶಿಸಿದ ಸಹಚರ ಪಕ್ಷಿಗಳ ಗುಂಪುಗಳು

ನಿನ್ನ ಮೇಲೆ ಪ್ರಶಂಸೆಗಳನ್ನು ಸುರಿಸಿದಾಗಲೇ
ಎದುರು ನಿಂತುಕೊಳ್ಳುತ್ತದೆ ನೀನು ಆಶಿಸಿದ ಗಮ್ಯ.
ಯಾವ ಲಕ್ಷ್ಯವಾದರೂ ಚಿಟಿಕೆ ಹಾಕಿದರೆ ಕೈಗೆಟುಕದು
ಅಗತ್ಯಬಿದ್ದಾಗ
ಉಬ್ಬರವೇಳುವಕಡಲಿಗೆ ಎದುರೀಜಿದರೆ ವಿನಹ
ಆಚೆಯ ತೀರ ಮುಟ್ಟದು.

●

# ನನ್ನನ್ನು ಕುಡಿದ ಆಕಾಶ

ಆಗಾಗ ಏನೂ ತೋಚದಾಗ
ಒಬ್ಬನೇ ಬಟ್ಟಬಯಲಲಿ ನಾಟಿಕೊಂಡು ಹೋಗುತ್ತೇನೆ.
ಆಕಾಶವನ್ನು ನನ್ನ ಕಣ್ಣಿಂದ ಅದೇ ಕೆಲಸವಾಗಿ ಕುಡಿಯುತ್ತೇನೆ.
ಎಷ್ಟು ಕುಡಿದುಬಿಟ್ಟರೂ ಅವು
ಎಷ್ಟು ಮಾತ್ರವೂ ಸವೆದುಹೋಗದ ನೀಲಿಮಗಳ ಮಧುನಿಧಿಗಳು.
ಒಬ್ಬ ನಾನೇನಾ ?
ಪ್ರಪಂಚದಲ್ಲಿನ ಎಷ್ಟು ಕೋಟಿ ನೋಟಗಳು
ಆ ನೀಲಿಮಗಳನ್ನು ಆಸ್ವಾದಿಸುತ್ತಿವೆಯೋ.
ಮಧುವನ್ನು ಶ್ರುತಿಮೀರಿ ಕುಡಿಯುತ್ತಾ ಹೋದರೆ
ಮತ್ತು ನೆತ್ತಿಗೇರುತ್ತದೆ.
ಆದರೆ ಈ ಮಧು ಹಾಗೆ ಅಲ್ಲ.
ಕುಡಿದಷ್ಟೂ
ಹೃದಯ ಪರಿಧಿಗಳನ್ನು ವಿಸ್ತರಿಸುವಂತೆ ಮಾಡುತ್ತದೆ.
ವಿಶಾಲ ವಿಶ್ವಾಸವನ್ನು
ಎಳೆ ಕೂಸಿನಂತೆ ಎದೆಗವಿಚಿಕೊಳ್ಳುವ ಔನ್ನತ್ಯವನ್ನುಂಟುಮಾಡುತ್ತದೆ.
ಗಗನದೊಂದಿಗೆ ನನಗಿರುವ ತಾದಾತ್ಮ್ಯವನ್ನು ಗಮನಿಸಿದ
ಅರಣ್ಯಗಳೂ ಸಮುದ್ರಗಳೂ
ತಮ್ಮ ಅತಿಥಿಯಾಗಿ ಬರಬೇಕೆಂದು ನನ್ನನ್ನು ಆಹ್ವಾನಿಸಿವೆ.
ಆ ಕರೆಯನ್ನು ಬೇಡವೆನ್ನಲಾಗದೆ ಆಗಲಿ ಎಂದೆ.
ಆದರೆ ಕದಲುವುದಕ್ಕೆ ಮನಸೊಪ್ಪಲಿಲ್ಲ.
ಮತ್ತೆ ಕೊಟ್ಟ ಮಾತು ಉಳಿಸಿಕೊಳ್ಳಬೇಕಲ್ಲಾ.
ಊಹೆಗಳ ವಿಹಂಗಗಳನ್ನು ನೋಟಗಳಾಗಿ ಬದಲಿಸಿ
ಎಲ್ಲ ದಿಕ್ಕುಗಳಿಗೂ ಹಾರಿಬಿಟ್ಟೆ
ಎತ್ತ ತಿರಿಗಿದರೂ ಎಷ್ಟನ್ನು ನೋಡಿದರೂ
ನನ್ನೆದುರು ನಿಂತಿದ್ದು ಆಕಾಶವೇ.

ಆಗ ನನ್ನಲ್ಲಿ ಒಂದು ವಿಚಿತ್ರ ಬಯಕೆ ಚಿಗುರಿದೆ.
ಆ ಬಯಕೆಯನ್ನು ಆಕಾಶದೊಂದಿಗೆ ಹೀಗೆ ನಿವೇದಿಸಿಕೊಂಡೆ.
"ಓ ನೀಲಾಕಾಶವೇ !
ಇಷ್ಟೂ ದಿನ ನಾನು ನಿನ್ನನ್ನು ಕುಡಿಯುತ್ತಿದ್ದೇನೆ
ಒಮ್ಮೆ ನನ್ನನ್ನು ನೀನು ಕುಡಿದುಬಿಡಲಾರೆಯಾ ?
ಆ ಅಪೂರ್ವಾನುಭೂತಿಯನ್ನು ನನಗೆ ಪ್ರಸಾದಿಸಲಾರೆಯಾ ?
ಹಾಗೆ ಎಂದನೋ ಇಲ್ಲವೋ ನಾನು ನಾನಾಗಿ ಇಲ್ಲ.
ಆಷಾಢ ಮೇಘದಂತೆ ತೇಲಿಹೋಗುತ್ತಿದ್ದೇನೆ.
ತಡವಿ ನೋಡಿಕೊಂಡೆ.
ನನ್ನ ಮೈತುಂಬಾ ಹೊಳಪುಗಳೇ ಹೊಳಪುಗಳು.
ಅವುಗಳನ್ನು ಕೈಯಿಂದ ತೆಗೆದು ಓದಿ ನೋಡಿಕೊಂಡೆ ಹಾಗೇ
ಹೊಚ್ಚಹೊಸ ಕವಿತೆಗಳೇ ಕವಿತೆಗಳು.
ಮತ್ತೊಂದು ಜನ್ಮವೆಂಬುವುದು ಇದ್ದರೆ
ಒಬ್ಬ ಕವಿಗೆ ಇದಕ್ಕಿಂತ ಮತ್ತೇನು ಬೇಕು.

●

## ರಿವೈಂಡ್ ಮಾಡಿ ನೋಡಿಕೊ

ಈಗ ನೀನು ತೊಟ್ಟುಕೊಂಡ ವ್ಯಕ್ತಿತ್ವ
ಎಷ್ಟು ಸ್ವಚ್ಛವಾಗಿದೆ
ಏನು ಬಿಳುಪು ಅದು !
ಮಲ್ಲಿಗೆ ಹೂ ಗುಂಪು ಗುಂಪಾಗಿ ಓಡಿಬಂದು
ತಮ್ಮ ಕಣ್ಣುಗಳಿಗೆ ಒತ್ತಿಕೊಳ್ಳುವಷ್ಟು.
ಒಂದುಸಲ ನಿನ್ನ ಗತ ಜೀವಿತವನ್ನು
ಮೆಲುಕು ಹಾಕಿಕೋ.
ಮತ್ತೇನೂ ಅಂದುಕೊಳ್ಳದಿದ್ದರೆ
ಮರೆಯಾಗಿ ಹೋದ ಆ ರೀಲನ್ನು
ನಿನ್ನ ಅನುಕೂಲಕ್ಕನುಗುಣವಾಗಿ ರಿವೈಂಡ್ ಮಾಡಿ ನೋಡಿಕೋ.
ಆಗಿನ ಹಸಿನೆತ್ತರ ಕಲೆಗಳು ಕ್ಲೋಜಪ್‌ನಲ್ಲಿ ಕಾಣಿಸಿ
ನಿನ್ನನ್ನು ಭಯಭೀತನನ್ನಾಗಿ ಮಾಡುತ್ತವೆ.
ಹೀಗೆ ನಾನು ಹೇಳುತ್ತಿರುವುದು
ನಿನ್ನ ಪ್ರಸ್ತುತ ನಿರಾತಂಕ ಗತಿಯನ್ನು
ನಿರೋಧಿಸುವುದಕ್ಕೆ ಅಲ್ಲ.
ನಿನ್ನೆಯ ನಿನ್ನ ದ್ವಿಪಾತ್ರಾಭಿನಯಕ್ಕೆ
ಇಷ್ಟರಲ್ಲಾದರೂ ಸ್ವಸ್ತಿ ಹೇಳಬೇಕೆಂದು
ಎಚ್ಚರಿಸುವುದಕ್ಕೆ.
ಏನು ಏನಾದರೇನು
ನಿನ್ನ ಸುದೀರ್ಘ ಜೀವನಯಾತ್ರಾ ಗ್ರಂಥದಲ್ಲಿ
ಹೊಚ್ಚ ಹೊಸ ತಿರುವುಗಳ ಪುಟಗಳನ್ನು ತಿರುವಿಕೊಳ್ಳುತ್ತಾ
ಸಾಗಿ ಹೋಗುತ್ತಿರುವೆ.
ತಟ್ಟನೆ ಹಿಂದಕ್ಕೆ ತಿರುಗಿ ನೋಡಬೇಡ
ಆ ದುಷ್ಕೃತ್ಯಗಳ ಭೂತಗಳು ಬೆನ್ನತ್ತಿ
ನಿನ್ನ ವರ್ತಮಾನವನ್ನು ಸುಲಿದುಬಿಡುವ ಪ್ರಮಾದವಿದೆ.

ರಿವೈಂಡ್ ಮಾಡಿಕೋ ಎಂದೆನೆಂದರೆ
ಆ ಗತದಲ್ಲಿಯೇ ಇಳಿಬಿದ್ದು ಹೋಗೆಂದಲ್ಲ.
ಇಂದಿನ ನಿನ್ನ ಬದುಕು ಪಟದ ಮೇಲೆ
ನಿನ್ನೆಯ ಆ ಕಲೆಗಳು ಬೀಳದಂತೆ ಜಾಗರೂಕರಾಗೆಂದು.

●

## ಸರಿತೂಕ

ಮತ್ತೆ ಇಷ್ಟು ನಿಶ್ಶಬ್ದವಾದರೆ ಹೇಗೆ ಭರಿಸುವುದು,
ಸುತ್ತಲೂ ಮೃತ್ಯುವನ್ನು
ತಿವಾಚಿಯಂತೆ ಹಾಸಿದಹಾಗೆ ಇದೆ.
ನನ್ನ ಮನಸ್ಸನ್ನು ರೆಪರೆಪನೆ ಆಡಿಸುವ ಮರದ ಎಲೆಗಳು
ಅಲುಗಾಡುವುದನ್ನು ಬಿಟ್ಟುಬಿಟ್ಟಿವೆ.
ಅವುಗಳ ಕೊರಳುಗಳನ್ನು
ಅಮುಕಿಟ್ಟವರ್‍ಯಾರೋ.
ಯಾವಾಗಲೂ ನನ್ನನ್ನು
ಕಿಲ ಕಿಲ ಭಾಷೆಯಲ್ಲಿ ಮಾತಾಡಿಸುವ ಪಕ್ಷಿಗಳು
ಏನಾಗಿ ಹೋದಂತೆ.
ಅವುಗಳ ಸ್ವರಗಳನ್ನು ನೇಣುಹಾಕಿದವರ್‍ಯಾರೋ.
ನನ್ನನ್ನು ಮೌನವಾಗಿ ಬಿದ್ದಿರು ಎನ್ನುತ್ತೀರಾ.
ಹಾಗೆ ಅಂದರೆ
ನನ್ನ ಉಸಿರು ತಿರುಗಿ ಬೀಳುತ್ತದೆ.
ನಾನಿನ್ನೂ ಧ್ಯಾನಯೋಗಿನಿ ಆಗಲಿಲ್ಲ.
ಕವಿತಾ ಕರ್ಮಯೋಗಿನಿ.
ಪರಿಸರಗಳನ್ನು ವಶೀಕರಿಸಿಕೊಳ್ಳುವ
ಶ್ರುತಿ ರಮ್ಯ ಶಬ್ದ
ನಾನು ನಿತ್ಯ ಪ್ರಯೋಗಿಸುವ ಸಮ್ಮೋಹನಾಸ್ತ್ರ.
ಕರ್ಣಪುಟಗಳಿಗೆ ಗಾಯ ಮಾಡುವ
ದುಶ್ಶಬ್ದಗಳನ್ನು ನಿರಸಿಸುತ್ತಾ ಬಂದೆನೇ ಹೊರತು
ಈ ಶ್ಮಶಾನ ನಿಶ್ಶಬ್ದವನ್ನು ಕೋರಿಕೊಳ್ಳಲಿಲ್ಲವಲ್ಲಾ !
ನಿಶ್ಚಲವಾಗಿ ನಿಟ್ಟುಸಿರು ಬಿಡುವ ಕೊಳದಲ್ಲಿ
ಸಣ್ಣ ಕಣ್ಣು ಎಸೆದರೇಳುವ ಅಲೆಗಳ ಸದ್ದನ್ನು
ನನ್ನಲ್ಲಿ ತುಂಬಿಕೊಳ್ಳಬೇಕೆಂದುಕೊಳ್ಳುತ್ತೇನೆ.

ರೂಪವಾಗಲಿ ಧ್ವನಿಯಾಗಲಿ
ಸವ್ಯವಾಗಿ ಚಲಿಸಿ ಹೋದಾಗಲೇ
ಹೃದಯ ತಂತಿಗಳಿಗೆ ಪುಳಕ ಉಂಟಾಗುತ್ತದೆ.
ಶಬ್ದವನ್ನು ನಿಶ್ಶಬ್ದವನ್ನು
ಸರಿತೂಕದಿಂದ ಸಮನ್ವಯಿಸಿಕೊಂಡರೇನೆ
ಜೀವನಗತಿ ಪುರೋಗಮನವಾಗಿ ಸಾಗುತ್ತದೆ.

●

## ಇದ್ದರೆ ಹಾಗೆ ಇರಬೇಕು

ಇನ್ನು ಈ ಪೊರೆ ಬಿಡದೆ ತಪ್ಪದು.
ಬುಸಗುಡಬೇಕಾದ ಹೆಡೆ
ಎಷ್ಟು ದಿನವೆಂದು ಮುದಿರಿಕೊಂಡು ಮಲಗಿರುತ್ತದೆ.
ಯಾರನ್ನೋ ಕಡಿಯುವುದಕ್ಕೆ ಅಲ್ಲ.
ಲೋಕದ ಕಣ್ಣಮುಂದೆ ತನ್ನ ಗುಪ್ತ ಚೈತನ್ಯವನ್ನು
ಆಳೆತ್ತರವಾಗಿ ನಿಲ್ಲಿಸುವುದಕ್ಕೆ.
ಧಗಧಗನೆ ಉರಿಯುವ ಕೆಂಡ
ಮೈ ತುಂಬಾ ಬೂದಿ ಮುಚ್ಚಿಕೊಂಡು
ಹೇಗಿರುತ್ತದೆ ?
ತನಗೆ ತಾನೇ ಊದಿಕೊಳ್ಳದಿರಲಾಗದು.
ಆಗ ವಿನಹ
ಅದರ ಜ್ವಲನಶೀಲತೆ ಹದನೇರದು.
ಬೆಟ್ಟಕಣಿವೆಗಳಲ್ಲಿ ಗೆರೆಗೀಚಿಕೊಂಡಿದ್ದರೆ
ನದಿಬುನಾದಿಗೆ ವಿಸ್ತೃತಗತಿ ಎಲ್ಲಿನದು ?
ಪರಿಸರಗಳನ್ನು ಕೊಡವಿಗೊಂಡು ಪ್ರವೇಶಿಸಿದಾಗಲೇ
ಅದರ ಪಾದಗಳು ಮಣ್ಣಿನ ಸ್ಪರ್ಶದಿಂದ ಪುಳಕಿಸಿ
ಅದು ಮಹಾನದಿ ಆಗುತ್ತದೆ.
ಬೀಸುವ ಗಾಳಿ ಸುಳಿವು ತಿಳಿಯುವುದು
ಅದು ಶ್ವಾಸಕ್ಕೆ ಪರಿಮಿತವಾದಾಗ ಮಾತ್ರವೇ ಅಲ್ಲ.
ಕೊಂಬೆಗಳ ತಲೆಗಳ ಮೇಲಿನಿಂದ ಉರುಳಿ ಹೋದಾಗ
ಚಲಿಸಿ ಚಲಿಸಿ ಬಳಲಿಹೋದ ಸಾಗರ ತರಂಗಗಳನ್ನು
ಪಥ ಚಲನೆ ಮಾಡಿದಾಗ.
ಇದ್ದದ್ದು ಇದ್ದಹಾಗೆ ಇದ್ದರೆ
ಬೆಲೆ ಕಟ್ಟುವ ವಿಜ್ಞರೆಷ್ಟು ಮಂದಿಯಿರುತ್ತಾರೆ.

ಉಸಿರನ್ನು ಆಚ್ಛಾದನೆಗಳಲ್ಲಿ ಎಳೆದುಕೊಂಡು ಹೋದರೆ
ಅದು ಬದುಕೇನಾ ?
ಅರ್ಧ ಮೃತ್ಯುವೆನ್ನುತ್ತೇನೆ.
ಬೆಳಗಿದರೆ ಬೆಳಗಬೇಕು
ಯಾವ ಹೊಗೆಗಳೂ ಕಲುಷಿತ ಮಾಡಲಾಗದ ಸೂರ್ಯಗೋಳದಂತೆ.
ಬದುಕಿದರೆ ಬದುಕುಬೇಕು
ಹೊಂಚಿರುವ ಮರಣದ ಮೇಲೆ ಕಾಲು ಕೆರೆವ
ಅಚಂಚಲ ಪ್ರಾಣ ಬಿಂಬದಂತೆ.

●

## ಹಾರಿ ಬಂದ ಪುಸ್ತಕ

ಪುಸ್ತಕಗಳ ಪುಟಗಳ ದಾರಿಗಳಲ್ಲಿ
ವರ್ಷಾನುಗಟ್ಟಲೆ ನಡೆದುನಡೆದು ಬಳಲಿಹೋದ
ನನ್ನ ಕಣ್ಣುಗಳಿಗೆ
ಸ್ವಲ್ಪ ವಿಶ್ರಾಂತಿ ಅಗತ್ಯವೆನ್ನಿಸಿದೆ.
ಅದು ಸರಿ
ಪ್ರತಿ ದಿನ ಯಾವುದೋ ಒಂದು ಪುಸ್ತಕದಲ್ಲಿ
ಮುಳುಗದಿದ್ದರೆ
ನನ್ನ ಮನಸ್ಸಿಗೆ ನಿದ್ರೆ ಬಾರದಲ್ಲ.
ಮತ್ತೆ ಹೇಗೆ?
ಮೆದುಳು ಕೊಠಡಿಯಲ್ಲಿ ಭದ್ರಪಡಿಸಿಕೊಂಡ
ಬಗೆಬಗೆಯ ಜೀವಿತಾನುಭವಗಳ ಸಂಪುಟಗಳಿವೆಯೇ
ಅವುಗಳನ್ನು ನೆನಪುಗಳ ನೋಟಗಳಿಂದ
ಅದೇ ಕೆಲಸವಾಗಿ ಓದಿಕೊಳ್ಳುತ್ತೇನೆ.
ಹಾಗೆ ಅಂದುಕೊಂಡೆನೋ ಇಲ್ಲವೋ
ನನ್ನೆದುರು ಎಷ್ಟೆಷ್ಟು ಜೀವಿತಗಳೋ
ರಾಶಿ ಸುರಿದಂತೆ ನಿಂತುಕೊಂಡಿವೆ.
ಒಂದು ಬೊಗಸೆ ಮಾತ್ರ ತೆಗೆದುಕೊಂಡೆ.
ಅವುಗಳಲ್ಲಿ ಅಪ್ಪಟ ಬಿಳಿ ಆಣಿಮುತ್ಯಗಳಿವೆ
ರತ್ನಗಳ ಆಕೃತಿಗಳನ್ನು ತೊಟ್ಟುಕೊಂಡ ಕಲ್ಲುಗಳಿವೆ.
ಕೆಲವನ್ನು ಸ್ಪರ್ಶಿಸಿದರೆ ಕಣ್ಣೀರ ಒದ್ದೆ ತಾಗಿದೆ.
ಕೆಲವನ್ನು ತಡವಿನೋಡಿದರೆ
ಬಳಿದುಕೊಂಡ ಬಣ್ಣ ಬೆರಳುಗಳಿಗಟ್ಟಿಕೊಂಡಿದೆ.
ಪರಿಶೀಲಿಸುತ್ತಾ ಹೋಗುತ್ತಿದ್ದರೆ
ಎಷ್ಟು ವೈವಿಧ್ಯಗಳೆಂದು.
ಎಷ್ಟೆಷ್ಟು ಪ್ರಚ್ಛನ್ನ ವೈರುಧ್ಯಗಳೆಂದು.

ಗುರುತಿಗೆ ಇವು ಸಾಕು.
ಆ ರಾಶಿಗಳನ್ನೆಲ್ಲಾ ಎತ್ತಿ ಸಾರತೆಗೆಯಲು
ಉಳಿದಿರುವ ಈ ಸ್ವಲ್ಪಕಾಲ ಸಾಲದು.
ಪ್ರಸ್ತುತಕ್ಕಿದು ಸ್ವಲ್ಪವಿರಾಮ.
ಇಷ್ಟರಲ್ಲಿ ಬರ‍್ರನೆ ಒಂದು ಪಾರಿವಾಳ ಹಾರಿ ಬಂದು
ನನ್ನೆದುರು ಇಳಿದಿದೆ.
ಮುದ್ದಾಗಿ ಅದನ್ನು ಸವರುತ್ತಿದ್ದರೆ
ಅದು ಹೀಗೆನ್ನಿದೆ :
"ನಾನು ನೀವಂದುಕೊಳ್ಳುತ್ತಿರುವ ಪಾರಿವಾಳ ಅಲ್ಲ ಪುಸ್ತಕ.
ಇದೀಗಲೇ ಹುಟ್ಟಿದ್ದೇನೆ.
ನಿಮ್ಮ ನೋಟದ ಸ್ಪರ್ಶದಿಂದ ನನ್ನ ಪುಟಗಳನ್ನು
ಪುಳಕಿತಗೊಳಿಸಬೇಕೆಂದು ಬಂದಿದ್ದೇನೆ.
ದಯವಿಟ್ಟು ನನ್ನನ್ನು ಬೇಡವೆನ್ನದಿರಿ."
ಹಾಗೆ ಮೆತ್ತಗೆ ಸ್ವರವೆತ್ತಿದ ಆ ಹೊಸ ಪುಸ್ತಕವನ್ನು ಕಣ್ಣುಗಳಿಗೇ ಅಲ್ಲ
ಎದೆಗೂ ಗಾಢವಾಗಿ ಒತ್ತಿಕೊಂಡೆ
ಮತ್ತೊಮ್ಮೆ ತಿಳಿದಿದೆ ನನಗೆ
ಪರಿಶೀಲಿಸುವ ತಪನವಿದ್ದರೆ
ಪುಸ್ತಕವಾದರೂ ಬದುಕಾದರೂ ಒಂದೇ ಎಂದು.

●

## ಜೀವಿಸುತ್ತಲೇ ಇರುತ್ತೇನೆ

ನಾನು ಜೀವಿಸುತ್ತಿರುವುದು ನನಗಾಗಿ ಅಲ್ಲ
ಮತ್ತ್ಯಾರಿಗಾಗಿ ?
ನಾನು ಜೀವಿಸದೆ ಹೋದರೆ
ತಾನೂ ಜೀವಿಸಲಾರೆನೆಂದು ತಹತಹಿಸಿಹೋಗುವ
ಜೀವಿತಕ್ಕಾಗಿ.
ಅಷ್ಟು ಅನ್ಯೋನ್ಯ ಬಂಧ ನಮ್ಮದು.
ಬದುಕುವುದೆಂದರೆ ಕ್ರಿಮಿಯಂತೆ ತೆವಳುತ್ತಾ ಹೋಗುವುದಲ್ಲ
ಗಾಣದೆತ್ತಿನಂತೆ ತಿರುಗಿದ ಕಡೆಯೇ
ತಿರುಗುತ್ತಿರುವುದೂ ಅಲ್ಲ.
ಬದುಕೆಂದರೆ ವಿರಾಮ ಚಿಹ್ನೆಗಳು ಇಲ್ಲದೆ ಪ್ರವಹಿಸುವ
ಒಂದು ಮಹಾವಾಕ್ಯ.
ಆ ಬದುಕು
ಎತ್ತಿದ ತನ್ನ ಶಿರಸ್ಸನ್ನು ಬಾಗಿಸುವುದು
ನಿದ್ರೆಯಲ್ಲಿಯೇ.
ಹಾಕಿದ ಪ್ರತಿ ಹೆಜ್ಜೆ
ಒಂದು ಸ್ಮೃತಿ ಚಿಹ್ನೆಯಂತೆ ನಿಂತುಹೋದಾಗಲೇ
ಅದು ಗಮನವೆನ್ನಿಸಿಕೊಳ್ಳುತ್ತದೆ.
ಶ್ವಾಸ ತೆಗೆದುಕೊಳ್ಳುವುದು
ಸಜೀವ ಪ್ರಾಣಿಗಳ ಸಹಜ ಲಕ್ಷಣ ಅಲ್ಲವೆ.
ಅದರಲ್ಲಿ ವಿಶೇಷವೇನಿದೆ.
ತೆಗೆದುಕೊಂಡ ಆ ಶ್ವಾಸದಲ್ಲಿ
ಅರೆಸತ್ತ ಜೀವನಮೌಲ್ಯಗಳನ್ನು
ಪುನರುಜ್ಜೀವನಗೊಳಿಸುವ
ಹೊಚ್ಚಹೊಸ ಆಶೆಗಳು ಶ್ರುತಿ ಮಾಡಿಕೊಂಡಾಗಲೇ
ಅವಕ್ಕೆ ಸಾರ್ಥಕತೆ.

ಪ್ರಾಣಗಳನ್ನು ಚಾಕ್ಲೆಟ್ಟುಗಳಂತೆ ಚಪ್ಪರಿಸಬೇಕೆಂದು
ಮೃತ್ಯುವಿಗೆಷ್ಟು ಬಯಕೆಯೋ.
ಆ ಮೃತ್ಯುವನ್ನು ಎಂದಿಗಂದು
ಹರಳೆ ಎಳೆಯಂತೆ ಊದಿಬಿಡುತ್ತಾ ಹೋದರೇನೇ
ಬಾಳ ಬುನಾದಿಗಳು ಬಲಪಡುತ್ತಿರುತ್ತವೆ.
ಈಗಿನ ನನ್ನ ದೃಶ್ಯ ಜೀವನ
ಕೆಲವು ದಿನಗಳಿಗೆ ತೆರೆಮರೆಯಾಗಿ ಹೋದರೂ
ನಾನು ಜೀವಿಸುತ್ತಲೇ ಇರುತ್ತೇನೆ
ಕಾಲವೆನ್ನುವ ಕಾವ್ಯದಲ್ಲಿ ಕೆತ್ತಿದ ಅಕ್ಷರ ಶಿಲ್ಪದಂತೆ.

●

## ಅಂತರಿಕ್ಷ ಸುರಿಸಿದ ಅಶ್ರುಬಿಂದು

ಅಂತರಿಕ್ಷ
ಒಂದು ಪಾರವಶ್ಯದೆಶೆಯಲ್ಲಿ ಸುರಿಸಿದ ಅಶ್ರುಬಿಂದುವಿಗೆ
ರೂಪುಗೊಂಡ ಮಾನವಾಕೃತಿಯೇ ನಾನು ?
ಔದೇನೋ ?
ಅಲ್ಲದಿದ್ದರೆ ನನ್ನ ನೇತ್ರಬಿಂಬಗಳು
ಸಾನುಭೂತಿಯಲ್ಲಿ ಮುಳುಗಿಸಿದ ನೋಟಗಳಿಗೆ
ಪ್ರತಿಬಿಂಬಗಳ್ಹೇಗಾಗುತ್ತವೆ ?
ನನ್ನ ಎದೆಯ ಪೊರೆಗಳ ತುಂಬಾ
ಅಂಥ ಆರ್ದ್ರತೆ ಹೇಗೆ ರೇಖೆಗಳು ಬಿಚ್ಚಿಕೊಳ್ಳುತ್ತದೆ ?
ಮುಳ್ಳು ಕಂಪೆಗಳೊಳಗಿಂದ ಗಾಳಿ ತೂರಿಕೊಂಡು ಹೋಗುತ್ತಿದ್ದರೆ
ಅಯ್ಯೋ ಅದರ ಮೈ ಎಷ್ಟೊಂದು ಪರಚಿಕೊಂಡು ಹೋಗಿದೆಯೋ ಎಂದು
ಬೆರಳುಗಳಿಂದ ಪರಾಮರ್ಶಿಸಬೇಕೆಂದುಕೊಳ್ಳುತ್ತೇನೆ.
ಆಗತಾನೇ ಉದಯಿಸಿದ
ಸೂರ್ಯ ಶಿಶುವಿನ ಕುತ್ತಿಗೆ ಹಿಸುಕಿಬಿಡಬೇಕೆಂದು
ಕಗ್ಗತ್ತಲು ಹುನ್ನಾರ ಮಾಡುತ್ತಿದ್ದರೆ
ಅದು ಅಕ್ರಮವೆಂದು ಕಿರುಚಿ ಬಿಡುತ್ತೇನೆ.
ಅಷ್ಟಕ್ಕೇ ಸುಮ್ಮನಿರುತ್ತೇನಾ
ಸಹ ಮನುಷ್ಯನ ಉಸಿರನ್ನು ಕತ್ತರಿಸಿಬಿಡಬೇಕೆಂದು
ವಿಷಮಿಸಿದ ಕಾಲ ಮುರಿದುಬೀಳುತ್ತಿದ್ದರೆ
ನನ್ನ ಉಸಿರು ನಿಂತುಹೋಗುತ್ತಿರುವಂತೆ
ತಳಮಳಿಸಿಹೋಗುತ್ತೇನೆ.
ದಿನ ದಿನಕ್ಕೆ ಹಾಗೆ ಜಲ ಊರುತ್ತಿರುವ ಆತ್ಮೀಯತೆ
ನನ್ನಲ್ಲಿ ಬೆಳೆಸುತ್ತಿರುವ ಸಂತೃಪ್ತಿಯನ್ನು
ಯಾವ ಮಾತುಗಳಿಂದ ಅಳೆದು ತೋರಿಸಲಿ.
ಕರುಣೆಗೆ ರೂಪಾಂತರವಾಗಿರುವ ಓ ಅಂತರಿಕ್ಷವೇ.

ನಿನ್ನ ಔದಾರ್ಯ ನನಗೆ ತಿಳಿಯದ್ದೇನು ಅಲ್ಲ.
ಚಿಕ್ಕ ಮನವಿ
ದಯೆಯಿಂದ ಇನ್ನಷ್ಟು ನಿನ್ನ ಅಶ್ರುಬಿಂದುಗಳನ್ನು
ನನ್ನ ಸುತ್ತಯಿರುವ ಬಂಡ ಜನರ
ಹೃದಯಗಳೊಳಕ್ಕೆ ಇಳಿಸು.
ಆಗಾದರೂ ಈ ಸಮಾಜದಲ್ಲಿ
ಆರ್ದ್ರಮನಸ್ಕರ ಸಂಖ್ಯೆ
ಗಣನೀಯವಾಗಿ ಬೆಳೆದುಹೋಗುತ್ತದೇನೋ.

●

## ಅಂಟಿಸಿದ ರೆಕ್ಕೆಗಳು

ಆ ರೆಕ್ಕೆಗಳು ದೇಹದಲ್ಲಿ ಹುಟ್ಟಿರುವುವು ಅಲ್ಲ
ಅಂಟಿಸಿರುವವು.
ಹಾರುತ್ತಿರುವಾಗ
ಹಾರುತ್ತಾ ಹಾಗೆ ವಾಲುತ್ತಿರುವಾಗ ತಿಳಿಯುತ್ತದೆ
ಅವುಗಳ ನಿಜವಾದ ವಾಲುವಿಕೆ.
ಸ್ವರ ಚಾಲನೆಯಂಥದ್ದೇ ರೆಕ್ಕೆಗಳ ಚಲನಕ್ರಮ.
ಮೇಲಕ್ಕೆ ಹೋಗುತ್ತಿರುವಾಗ ತಾರಸ್ಥಾಯಿ
ಕೆಳಕೆ ಇಳಿಯುತ್ತಿರುವಾಗ ಮಂದ್ರಸ್ಥಾಯಿ
ಈ ಸ್ಥಾಯಿ ಭೇದ ಇಲ್ಲದಾಗ
ಅವು ಅಂಟು ತೇಪೆಗಳೇ.
ಎಷ್ಟು ಭೇಷಜಗಳೆಂದು
ಎಷ್ಟು ಅಸಂದರ್ಭ ವಿನ್ಯಾಸಗಳೆಂದು.
ಸತ್ವವಿಲ್ಲದ ಆ ಸರಕುಗಳ ಮೆರವಣಿಗೆ ಅಬ್ಬರವನ್ನು
ಭರಿಸಲಾಗದೆ
ಹುಚ್ಚೆದ್ದು ಅರುಚಿಬಿಡುತ್ತದೆ ಮೂಕ ಜನ.
ಬಿಚ್ಚಿಕೊಂಡ ರೋದನೆಗಳ ಬಾಯಿಗಳು
ಆ ನಿರಸನ ಸ್ವರಗಳನ್ನು ಅಗಿದು ನುಂಗಿಬಿಡುತ್ತವೆ.
ಆ ಹಾರುವಿಕೆ ಎಷ್ಟು ದಿನವೋ.
ಉಕ್ಕುವ ಜನವಾಣಿಯನ್ನು
ತುಳಿದು ಹಿಡಿಯುವ ದುಶ್ಚರ್ಯೆಗಳು ಎಷ್ಟು ಕಾಲವೋ.
ಸರ್ವಸಾಕ್ಷಿಯಾಗಿ ಎಲ್ಲವನ್ನು ಗಮನಿಸುತ್ತಿರುವ ಕಾಲ
ಸಹನೆ ಕಳೆದುಕೊಂಡಿದೆ.
ಬೆಚ್ಚಿಬಿದ್ದು ಎದ್ದು ಹೀಗೆ ದನಿಯೆತ್ತಿ ಎಚ್ಚರಿಸಿದೆ.
“ಅಂಟಿಸಿದ ಓ ರೆಕ್ಕೆಗಳಿರಾ !
ನಿಮ್ಮ ಜಿಗುಟು ಮುಗಿದುಹೋಗುತ್ತದೆ ಎಚ್ಚರ.

ಇನ್ನು ನಿಮ್ಮ ಕೃತ್ತಿಮ ನಟನೆಗೆ ಸ್ವಸ್ತಿ ”
ಎಂದಂತೇ ಆಗಿದೆ
ಅಂಟಿಸಿದ ರೆಕ್ಕೆಗಳು ಕಳಚಿ ಪಟ ಪಟನೆ ಉರುಳಿಬಿದ್ದಿವೆ.
ಮೂಲೆಗಳಲ್ಲಿ ಉದಿಗಿರುವ ದೇಹದಲ್ಲಿ ಹುಟ್ಟಿದ ರೆಕ್ಕೆಗಳು
ಶಿಳ್ಳೆಹಾಕುತ್ತಾ ಭರ್‍ರನೆ ಹಾರಿಹೋಗಿವೆ.
ಆಕಾಶ ಚಪ್ಪಾಳೆಯೊಂದಿಗೆ
ಆ ನಿಜವಾದ ರೆಕ್ಕೆಗಳನ್ನು ಆಹ್ವಾನಿಸಿದೆ.

●

## ವಿಜೃಂಭಿತ ಗತಿಯಲ್ಲಿ

ಅಲೆಯಂತೆ ಮನಸ್ಸು ಸುಲಭವಾಗಿ ಮುರಿದುಬಿದ್ದರೆ
ಆಶಿಸಿದ ಲಕ್ಷ್ಯವೆನ್ನುವ ತೀರ
ತನ್ನಿಷ್ಟಕ್ಕೆ ತಾನೇ ಸಮೀಪಿಸುತ್ತದೆ.
ಗುಣಕಾರಗಳಿಂದ ಗೊಣಗುಗಳಿಂದ
ಗಮ್ಯವನ್ನು ಹೇಗೆ ಸಾಧಿಸುತ್ತಾರೆ ?
ಸಮರ್ಥನು ಪ್ರಯೋಗಿಸಿದ ಅಸ್ತ್ರ
ಹಿಂದಕ್ಕೆ ತಿರುಗಿ ನೋಡುತ್ತದಾ ?
ತೂರಿಕೊಂಡು ಹೋಗುವುದೇ ಅದರ ಸಹಜಗುಣ.
ಸಿಂಹಾವಲೋಕನ
ಆಲೋಚನೆಗೆ ಹೊರತು ಆವೇಶಕ್ಕೆ ಅಲ್ಲ,
ಆಗತಾನೇ ಹುಟ್ಟಿದ ಶಿಶುವು ಕಿರುಚಾಡದೇ ಹೋದರೆ
ಅದು ಮಣ್ಣಿನ ಮುದ್ದೆ.
ಒಂದು ತೂಗು ಒಂದು ಎಸೆತ
ಒಂದು ನಿನಾದ ಒಂದು ಪ್ರತಿಘಟನೆ
ಉದ್ವಿಗ್ನ ಚೈತನ್ಯಕ್ಕೆ
ಬಹುಮುಖಗಳಾಗಿ ತೆರೆದುಕೊಂಡ ಹುರಿಗಳು.
ಮಂಜುಗಡ್ಡೆಗಳು ತಾವು ಬದುಕಿರುವಷ್ಟೂ ದಿನ
ಮೊದ್ದು ನಿದ್ರೆಹೋಗುತ್ತವೆ.
ಉರಿಗಳು ಹಾಗಲ್ಲ
ಪ್ರತಿಕ್ಷಣ ಪರಮ ಜಾಗೃತವಾಗಿರುತ್ತವೆ.
ಪುರೋಗತಿ ತಿದ್ದಿಕೊಳ್ಳುವ ಚೊಚ್ಚಲ ಅಕ್ಷರವೇ
ಜಾಗೃತಿ.
ಬೀಸುವ ಗಾಳಿಯನ್ನು ಪೊದೆಗಳು ಗೋಗರೆದುಕೊಳ್ಳುತ್ತವೆ
ಸ್ವಲ್ಪ ಹೊತ್ತು ತಮ್ಮ ಮಡಿಲಲ್ಲಿ ವಿಶ್ರಮಿಸಿ ಹೋಗೆಂದು.
ಏನು ಮಾಡುತ್ತದಾ ಗಾಳಿ ?

ಆ ಪೊದೆಗಳನ್ನು ತನ್ನ ಬೆರಳುಗಳಿಂದ ನಿಮಿರಿ
ಶಿಳ್ಳುಹಾಕುತ್ತಾ ಸಾಗಿ ಹೋಗುತ್ತದೆ.
ಹೌದು.
ಶ್ವಾಸಕ್ಕಾದರೂ ಜೀವಿತಕ್ಕಾದರೂ
ಸಾಗಿಹೋದಾಗಲೇ ಅಲ್ಲವೇ ಅಂತಿಮ ಬೀಳ್ಕೊಂಡಿಗೆ.

●

# ತಿರುಗಿ ಹೋಗಬಾರದು

ಏನಾದರೂ ಸರಿಯೆ
ಈ ನಡಿಗೆ ಕಡೆತನಕ ಸಾಗಿಹೋಗಬೇಕಾದ್ದೆ.
ಚಲಿಸುವ ಹೆಜ್ಜೆಗಳು ಆಗಾಗ
ಪ್ರಶ್ನಾರ್ಥಕಗಳಾಗಿ ನಿಂತುಹೋಗುತ್ತವೆ.
ಎಲ್ಲೋ ಏನೋ ಮರೆತುಬಂದಂತೆ ಅವು
ತಮ್ಮ ನೇತ್ರಗಳನ್ನು ಹಿಂದಕ್ಕೆ ತಿರುವಿಕೊಳ್ಳುತ್ತವೆ.
ಕರಗಿ ಹೋಗುತ್ತಿರುವ ನಿಮಿಷಗಳು
ಆ ಹೆಜ್ಜೆಗಳ ತಿರೋದೃಷ್ಟಿಯನ್ನು ಗಮನಿಸಿ
ನಗಾಡಿಕೊಳ್ಳುತ್ತವೆ.
ಮರೆವುಗಳ ಕೆಸರಲ್ಲಿ ಇಳಿಬಿದ್ದ ನೆನಪುಗಳು
ಅಷ್ಟು ಸುಲಭವಾಗಿ ಹೊರಬೀಳುತ್ತವಾ ?
ಏಕಾಂತದಲ್ಲಿ ಹೂತುಹೋಗಿ
ತಲೆಯನ್ನು ಅದೇ ಕೆಲಸವಾಗಿ ಹಿಂಡಿಕೊಳ್ಳುತ್ತಿದ್ದರೆ
ಆಗ ಮೇಲಕ್ಕೆ ಉಕ್ಕಿ ಬರುತ್ತವೇನೋ.
ಏನಿದು ಮಳೆಬರುವಂತಿದಿಯೇ
ಇಂದು ನಡೆಯುವುದು ಹೇಗೆಂದು ತಡಬಡಿಸುತ್ತಿದ್ದರೆ
ಕೊಠಡಿಯ ಮೂಲೆಯೊಂದಲ್ಲಿ ಉಡುಗಿರುವ ಕೊಡೆ
ಕಿಲಕಿಲ ನಕ್ಕುಬಿಡುತ್ತದೆ.
ಆದರೂ ಓ ಗಮನ ಜೀವಿ !
ಹನಿಗಳಿಗೆ ನಿನ್ನ ತಲೆಮೇಲೆ ಮೊಳಕೆ ಮೊಳೆಯುತ್ತವೆಯಾ ?
ಏನೋ ಒಂದು ನೆವದಲ್ಲಿ
ನಡಿಗೆಯನ್ನು ಮಡಚಿಟ್ಟು ತೆಗೆದುಕೊಂಡು ಹೋಗುವ ನೀನು
ಸುದೀರ್ಘ ಜೀವನ ಪ್ರಸ್ಥಾನ ಘಟ್ಟಗಳನ್ನು
ಹೇಗೆ ತಿರುವಿಹಾಕುವೆ.

ಸಾಗಬೇಕಾದ ಗತಿಗೆ ಸೊನ್ನೆಸುತ್ತಿ
ತಿರುಗಿ ಹೋಗುವುದು
ಕರ್ಮಶೀಲಕ್ಕೆ ಸಜೀವ ಸಮಾಧಿ ಮಾಡುವುದೆ.

●

## ಸಂಘೀ ಭಾವ

ನಿತ್ಯವೂ ನೋಡುತ್ತಿರುತ್ತೇನೆ
ಎದುರುಮನೆ ಛಾವಣಿಮೇಲೆ
ಎಲ್ಲೆಲ್ಲಿನ ಪಕ್ಷಿಗಳೋ ಗುಂಪುಗೂಡಿ
ಚರ್ಚಾಗೋಷ್ಠಿ ನಡೆಸಿಕೊಳ್ಳುತ್ತವೆ.
ಒಂದೊಂದು ಪಕ್ಷಿಯೇ
ಆ ಹೊತ್ತು ತಾನು ಎದುರುಗೊಂಡ ಸಮಸ್ಯೆಗಳನ್ನು
ಒಂದೇಸಮ ಒಪ್ಪಿಸುತ್ತದೆ.
ಉಳಿದವುಗಳೆಲ್ಲಾ
ನಿಶ್ಶಬ್ದವಾಗಿ ಕೇಳುತ್ತಿರುತ್ತವೆ.
ತನ್ನಮೇಲೆ ಹಠಾತ್ತನೆ ಬಂದು ಎರಗಿದ
ಹದ್ದಿನ ಕೊಕ್ಕಿನಿಂದ ತಪ್ಪಿಸಿಕೊಂಡು
ತಾನು ಹೇಗೆ ಹೊರಬಿದ್ದಿದೆಯೋ
ಒಂದು ಹಕ್ಕಿ ಗಾದ್ಗದ್ಯದಿಂದ ಹೇಳುತ್ತಿದ್ದರೆ
ಎದುರಿಗಿದ್ದ ಪಕ್ಷಿ
ತನ್ನ ರೆಕ್ಕೆ ತುದಿಯಿಂದ ಅದರ ಕಣ್ಣೀರು ಒರೆಸುತ್ತದೆ.
ಅಷ್ಟರಲ್ಲಿ ಮತ್ತೊಂದು ಪಕ್ಷಿ
ಜಗ್ಗನೆ ಮೇಲಕ್ಕೆ ಹಾರಿ ಸುತ್ತಾ ನೋಡಿ
ಹಂತಕರ್‍ಯಾರೂ ಇಲ್ಲವೆಂದು ಭರವಸೆ ನೀಡುತ್ತದೆ.
ಅವುಗಳಲ್ಲಿ ಕನ್ಯೆಪಕ್ಷಿ ಒಂದು
ಒಯ್ಯಾರದಿಂದ ತಲೆಬಾಗಿ ಕೊರಳು ತಿರುವಿಕೊಳ್ಳುತ್ತಾ
ತಾನು ಇಷ್ಟಪಟ್ಟ
ಗಂಡು ಪಕ್ಷಿ ಸೊಗಸು ಕುರಿತು
ಮಂದ್ರಸ್ವರದಲ್ಲಿ ಕೇಳಿಸುತ್ತದೆ.
ಪಕ್ಷಿಗಳೆಲ್ಲಾ ಹರ್ಷಪುಳಕಿತವಾಗಿ

ಪಟ ಪಟನಾಡುವ ರೆಕ್ಕೆಗಳ ಚಪ್ಪಾಳೆಯಲ್ಲಿ
ತಮ್ಮ ಹರ್ಷವನ್ನು ಪ್ರಕಟಿಸುತ್ತವೆ.
ಕೂಡಿ ಕುಳಿತುಕೊಂಡು ಸಂಭಾಷಿಸಿಕೊಂಡ ಆ ಸ್ವಲ್ಪ ಹೊತ್ತು
ಸುಖ ದುಃಖಗಳಲ್ಲಿ
ಪರಸ್ಪರ ಪಾಲು ಹಂಚಿಕೊಳ್ಳುವ ಪಕ್ಷಿಗಳ
ಸಂಘೀಭಾವ
ಒರಟು ಮನುಷ್ಯರಿಗೆ ಅನುಸರಣೀಯ.

●

## ಪ್ರತಿ ಘಾಟ್ಟವು ಪತಾಕ ಸನ್ನಿವೇಶವೇ

ಆಗಲೇ ತೆರೆಬಿದ್ದಿದೆಯೇ.
ಪ್ರದರ್ಶಿಸುತ್ತಿರುವ ಈ ರೂಪಕದ ಇತಿವೃತ್ತಕ್ಕೆ
ಪತಾಕ ಸನ್ನಿವೇಶವೆಂಬುದು ಇಲ್ಲವೇ.
ಏನಿದು ?
ಪ್ರತಿಕಥೆಗೂ ಆದಿ ಮಧ್ಯಾಂತಗಳಿರುತ್ತವಲ್ಲಾ
ನೋಡುತ್ತಿರುವ ಈ ಕಥೆಗೆ
ಆ ಪ್ರಮಾಣಗಳ್ಯಾವುವು ವರ್ತಿಸವೇ.
ಇಷ್ಟಕ್ಕೂ ಪತಾಕಸ್ಥಾಯಿಯನ್ನು ಸೇರಿಕೊಳ್ಳದೆ
ಪ್ರದರ್ಶನ ಹೇಗೆ ಮುಗಿಯುತ್ತದೆ ?
ಅದೂ ಸಂದೇಹ.
ಸಮಕಾಲೀನ ಜೀವಿತ ರೂಪಕಗಳಲ್ಲಿ
ಪ್ರತಿ ಘಾಟ್ಟವು ಒಂದು ಪತಾಕ ಸನ್ನಿವೇಶವೇ.
ಎದುರುನೋಡುವ ಶುಭ ಪರಿಣಾಮಗಳ
ಡೊಕ್ಕೆಗಳಲ್ಲಿ ಹಾಯುವ
ಎಷ್ಟೆಷ್ಟೋ ದುಸ್ಸಂಘಟನೆಗಳ ಪರಂಪರೆಗಳು.
ಊಹೆಗಳ ಅಂಚುಗಳಿಗೆಟುಕದ ತಿರುವುಗಳು.
ನೋಡುವ ಕಣ್ಣರೆಪ್ಪೆಗಳಿಗೆ ಒದ್ದೆ ಎಲ್ಲಿನದೆಂದು
ತಡವಿ ನೋಡಿಕೊಂಡರೆ
ಅಂಟಿಕೊಳ್ಳುವ ಹಸಿನೆತ್ತರ ತೊಟ್ಟುಗಳು.
ಎದೆಯ ಮೇಲೆ ಕೈ ಇಟ್ಟರೆ
ಎಗರಿಬೀಳುವ ಅಲೆಗಳ ತುಳಿದಾಟ.
ಇವು ಪ್ರತ್ಯಕ್ಷವಾಗಿ ಎದುರಾಗುವ ವಾಸ್ತವಿಕ ಕಥೆಗಳು.
ನಿತ್ಯ ಅನುಭವಿಸುವ ಅನಿರ್ವಚನೀಯ ವ್ಯಥೆಗಳು
ಇಷ್ಟೆಲ್ಲ ಕ್ಲೈಮಾಕ್ಸುಗಳ ಮಧ್ಯೆ
ತಟಕ್ಕನೆ ಕಡಿದುಹೋಗುವ

ಪ್ರಮಾದವಿರುವ ಬದುಕುದಾರಗಳನ್ನು
ಎಂದಿಗಂದು ಗಂಟುಹಾಕಿಕೊಂಡು ಹೋದರೆ ವಿನಹ
ಜೀವನಯಾತ್ರೆ ಸಾಗದು.
ಮೊದಲ್ಯಾವುದೋ ಮುಕ್ತಾಯ ಯಾವುದೋ
ಅಶಾಂತಿ ಎಂದೋ ಪ್ರಶಾಂತಿ ಎಂದೋ
ಗುಣಿಸಿಕೊಂಡು ಕುಳಿತರೆ
ಬಳಲಿಹೋಗುವ ಆಲೋಚನೆಗಳು ತಾಳಲಾರದೆ
ಕಿಟಾರನೆ ಕಿರುಚಿಬಿಡುತ್ತವೆ.
ಏನಾದರೂ ಸರಿಯೇ ಎಂದು ಸಾಹಸಿಸಿ
ಇಳಿದ ಊಬನ್ನು ಕೊಡವಿಕೊಳ್ಳುತ್ತ
ಈಜುತ್ತಾ ಹೋದಾಗಲೇ
ಉಸಿರು
ಸ್ವೇಚ್ಛೆಯಾಗಿ ಉಸಿರು ತೆಗೆದುಕೊಳ್ಳುತ್ತದೆ.

●

## ಪ್ರಾತಿಪದಿಗಳು

ನಿರೀಕ್ಷಿಸುತ್ತಿದ್ದೇನೆ
ಒಂದು ಮಿಂಚಿನ ಬಳ್ಳಿಯಾದರೂ ಸಿಗದಾ ಎಂದು.
ಅದನ್ನು ಹಿಡಿದುಕೊಂಡು
ಎಲ್ಲೋ ಶೂನ್ಯಕ್ಕೆ ಆಚೆ ಇರುವ
ಕಾಂತಿಮಂಡಲದಲ್ಲಿ ಹಾರಿ ಬೀಳುತ್ತೇನೆ.

ಪೇಚಾಡುತ್ತಿದ್ದೇನೆ
ಒಂದು ಸ್ವರವಾದರೂ ನಿನದಿಸದೇ ಎಂದು.
ಅದನ್ನು ನನ್ನ ಶರೀರದಲ್ಲಿನ
ಅಖಿಲಾಣುವುಗಳಲ್ಲಿ ತುಂಬಿಕೊಂಡು
ರಾಗಜಲಧಿಯಾಳಗಳು ಮುಟ್ಟುತ್ತೇನೆ.

ವಿಲೋಕಿಸುತ್ತಿದ್ದೇನೆ
ಒಂದು ಚಿಗುರೆಲೆಯಾದರೂ ಕಾಣಿಸದಾ ಎಂದು.
ಅದನ್ನು ನಿಮುರುತ್ತಾ ಇದ್ದರೆ
ನನ್ನ ಕಣ್ಣೆದುರು ಸಾಕ್ಷಾತ್ಕರಿಸುವ
ಹೂದೋಟವನ್ನು ಮೈತುಂಬಾ ಹೊದ್ದುಕೊಳ್ಳುತ್ತೇನೆ.

ತಪಿಸುತ್ತಿದ್ದೇನೆ
ಒಂದು ಮಳೆಹನಿಯಾದರೂ ಸುರಿಯದಾ ಎಂದು.
ಅದನ್ನು ನನ್ನ ಹಣೆಯಂಚಿನ ಮೇಲೆ
ಭದ್ರವಾಗಿ ನಿಲ್ಲಿಸಿಕೊಂಡು
ಮಹಾನದಿಯಾಗಿ ವಿಶ್ವವನ್ನೇ ಸುತ್ತಿಬರುತ್ತೇನೆ.
ಮಿಂಚಾದರೂ ಸ್ವರವಾದರೂ
ಹನಿಯಾದರೂ ಚಿಗುರಾದರೂ

ಅಷ್ಟಷ್ಟುಮಾತ್ರ ಅಸ್ತಿತ್ವವಿರುವ
ಅಂಶಗಳೇ.
ಅವೇ ಒಂದು ಚೈತನ್ಯಶೀಲಿ ಸಹಯೋಗದಿಂದ
ರೂಪುಗೊಳ್ಳುತ್ತವೆ
ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ
ಪ್ರಾತಿಪದಿಕಗಳಾಗಿ.

●

## ಸವೆದುಹೋಗದ ನಿಧಿಗಳು

ನೋಡಲಾಗದೆ ಇರಲಾರೆ.
ಪ್ರಕೃತಿ ತುಂಬಾ ತುಂಬಿಕೊಂಡಿರುವ
ವಿವಿಧ ವರ್ಣರಂಜಿತ ದೃಶ್ಯಗಳನ್ನು ಸೇದಿಕೊಂಡು
ನನ್ನಲ್ಲಿ ತುಂಬಿಕೊಳ್ಳದಿರಲಾರೆ.
ನೋಡುವುದೆಂದರೆ
ಚರ್ಮ ಚಕ್ಷುವುಗಳೊಂದಿಗೋ
ಕನ್ನಡಿ ಕಣ್ಣುಗಳೊಂದಿಗೋ ಅಲ್ಲ.
ಪೊರೆಗಳಿಲ್ಲದ ಮನೋನಯನಗಳೊಂದಿಗೆ
ಆ ದೃಶ್ಯಗಳು
ಎಂದಿಗೂ ಸವೆದುಹೋಗದ ನಿಧಿಗಳು.
ಬತ್ತಿಹೋಗದ ಅನುಭೂತಿ ಜಲನಿಧಿಗಳು.
ಅಳಿಸಿಬಿಟ್ಟರೆ ಬಣ್ಣ ಅಳಿಸಿಹೋಗುತ್ತದೆ.
ಹರಿದುಬಿಟ್ಟರೆ ಕಾಗದ ಹರಿದುಹೋಗುತ್ತದೆ.
ಇವು ಅಳಿಸಿಹೋಗದ ಹರಿದುಹೋಗದ
ಸಾರ್ವಕಾಲಿಕ ಸನ್ನಿವೇಶಗಳ ಸಂಪುಟಗಳು,
ಅವುಗಳಲ್ಲಿ
ಒಡೆದ ಮಣ್ಣಿನೆದೆಗಳ ಕಥನವಿದೆ.
ಬೇರೂರಿದ ಮಂಜುಗುಡ್ಡಗಳ
ಆತ್ಮ ಜ್ವಲನವಿದೆ.
ಆ ದೃಶ್ಯಗಳೇ ಈಗ ನನ್ನಲ್ಲಿ
ಆರ್ತಗಾಥೆಗಳಾಗಿ
ಅದೃಶ್ಯನಾದಗಳಾಗಿ ರೂಪುಗೊಂಡಿವೆ.
ಯಾವ ಒಂದನ್ನು ಬೇರ್ಪಡಿಸಿ ತೋರಿಸಲಾರೆ.
ಎಲ್ಲವನ್ನು ನಾನು ಪ್ರತ್ಯಕ್ಷವಾಗಿ ನೋಡಿದವುಗಳೇ ಎಂದು

ಅಕ್ಷರಗಳಾಗಿ ರಾಶಿ ಸುರಿದವುಗಳೇ ಎಂದು
ಎನ್ನಲಾರದೆ ಇರಲಾರೆ.
ಅಗೋ ಆಗಲೇ ಮಂಕು ಕವಿದುಕೊಂಡು ಬರುತ್ತಿದೆ.
ಏನು ಮಾಡುತ್ತದದು
ಕಾಣಿಸದ ಜಿಗಟಿನಿಂದ ನನ್ನ ಕಣ್ಣುರೆಪ್ಪೆಗಳನ್ನು
ಅಂಟಿಸುತ್ತದೆ.
ಪಾಪ ಅದಕ್ಕೆ ತಿಳಿಯದು
ಕೆಂಡದಂತೆ ನಿರಂತರ ಎಚ್ಚರಗೊಂಡಿರುವ ಮನಸ್ಸಿನೊಳಗಿನ
ಕಿಟಕಿಗಳು ಬಾಗಿಲುಗಳು
ಯಾವಾಗಲೂ ತೆರೆದುಕೊಂಡೇ ಇರುತ್ತವೆಂದು
ಅಳತೆಗಳಲ್ಲಿ ಅಡಗಲಾಗದ ದೃಶ್ಯಗಳಿಗೆ
ಎಂದಿಗಂದು
ಆಹ್ವಾನ ನುಡಿಯುತ್ತಲೇ ಇರುತ್ತವೆಂದು.

●

## ಮಾತನಾಡಿಕೊಂಡ ನೆರಳುಗಳು

ನೆರಳುಗಳು ಮಾತನಾಡಿಕೊಳ್ಳುತ್ತಿವೆ
ಸುತ್ತಾ ಯಾರಿಗೂ ಕೇಳಿಸದಷ್ಟು ಗುಟ್ಟಾಗಿ.
"ಈ ಪರಾಧೀನ ಜೀವನ ನಮಗೆ ಎಷ್ಟು ದಿನವೆಂದು ?
ಯಾರೋ ನಡೆದರೆ ನಾವು ನಡೆಯುತ್ತೇವೆ
ನಿಂತರೆ ಕೂಡಲೆ ಸ್ತಂಭಿಸಿಹೋಗುತ್ತೇವೆ.
ಮುದುಡಿಕೊಂಡು ಕುಳಿತುಕೊಂಡರೆ
ನಾವು ಕುಸಿದುಬಿದ್ದು ಹೋಗುತ್ತೇವೆ.
ಭೋರೆಂದು ಮಳೆ ಸುರಿದರೆ
ನೆನೆದು ಮುದ್ದೆಯಾಗಿ ಹೋಗುವುದು ನಾವೇ.
ಆ ತಲೆಗಳು ಮಾತ್ರ
ಕೊಡೆಗಳ ಕೆಳಗೆ ಭದ್ರವಾಗಿ ಇರುತ್ತವೆ.
ಉರಿಬಿಸಿಲಿನಲ್ಲೂ ನಮ್ಮ ಪರಿಸ್ಥಿತಿ ಅದೇ.
ಅವರವರ ಸ್ವಾರ್ಥ ಅವರವರದು.
ನಮ್ಮನ್ನು ಹಚ್ಚಿಕೊಳ್ಳುವ ಮನುಷ್ಯ ಇಲ್ಲ.
ಹಾಡುಗಳಲ್ಲಿ ಮಾತ್ರ ನಮ್ಮ ಇರುವಿಕೆಯನ್ನು
ಉಪಮಾ ಸಾಮಗ್ರಿಯಾಗಿ ಬಳಸಿಕೊಳ್ಳುತ್ತಾರೆ.
ನನ್ನ ನೆರಳು ನೀನು ನಿನ್ನ ಜತೆಯೂ ನಾನೆನ್ನುತ್ತಾ
ರಾಗ ತೆಗೆಯುತ್ತಾ,
ಅವರ ರೂಪಗಳೇನೋ ಭಿನ್ನಭಿನ್ನವಾಗಿರುತ್ತವೆ
ನಮಗೆ ಆ ಯೋಗವಿಲ್ಲ.
ಅವರು ಬಣ್ಣಬಣ್ಣದ ಉಡುಗೆಯಲ್ಲಿ ತಿರುಗುತ್ತಿದ್ದರೆ
ನಾವು ಯಾವ ಆಚ್ಛಾದನವೂ ಇಲ್ಲದೆಯೇ
ಅನುಸರಿಸಬೇಕು.
ಇನ್ನು ಲಾಭವಿಲ್ಲ.
ಸಹನೆಯ ಕಟ್ಟೆ ಕಿತ್ತುಕೊಂಡುಹೋಗುತ್ತಿದೆ.

ಒಗ್ಗಟ್ಟಾಗಿ ತಿರುಗಿಬಿದ್ದು
ಅವರ ಆಕೃತಿಗಳನ್ನು ನಾವು ಸೆಳೆದುಕೊಳ್ಳೋಣ.
ನಮಗೂ ಒಂದು ಪ್ರತ್ಯೇಕ ವ್ಯಕ್ತಿತ್ವವಿದೆಯೆಂದು
ನಿರೂಪಿಸಿಕೊಳ್ಳೋಣ."
ಹೀಗೆ ಅವು ಒಳದನಿಯಲ್ಲಿ ಘೋಷಿಸುತ್ತಿರುವಾಗಲೇ
ಕತ್ತಲಾಗಿದೆ.
ಆ ನೆರಳುಗಳೆಲ್ಲ ಒಂದೊಂದೇ ಸರಸರನೆ ಅದೃಶ್ಯವಾಗಿವೆ.
ಇಲ್ಲಿವರೆಗೂ
ಕಣ್ಣುಗಳನ್ನೇ ಕಿವಿಗಳಾಗಿ ಮಾಡಿಕೊಂಡು
ಆ ಮಾತುಗಳನ್ನು ಕೇಳುತ್ತಿದ್ದ ನಾನು
ಅಸಂಕಲ್ಪಿತವಾಗಿ ಅಂದುಬಿಟ್ಟೆ
"ಈಗ ನಮಗನ್ನಿಸಬಹುದು
ರೂಪಗಳು ರೂಪಗಳೇ ನೆರಳುಗಳು ನೆರಳುಗಳೇ ಎಂದು.
ಆದರೆ ಮೂಲರೂಪಗಳಿಗೆ ಒಂದು ಎಚ್ಚರಿಕೆ –
ಸಹಚರರನ್ನು ಉಪೇಕ್ಷಿಸಿದರೆ ಪ್ರಮಾದ ಇಲ್ಲದಿರದು" ಎಂದು.

●

## ಮೇಧಾ ಮಂಡಲವೇ ತಿರುಗಿಬೀಳು

ಮಡಿಕೆಗಳು ಪದರಗಳು – ಸೇರಿಕೊಂಡ ಮೆದಳಿನಲ್ಲಿ
ವಾಸ್ತವಗಳು
ಇದ್ದದ್ದಿದ್ದಂತೆ ಪ್ರತಿಫಲಿಸವು.
ಅವು ತಮ್ಮ ನಿಜರೂಪವನ್ನು ಕಳೆದುಕೊಳ್ಳುತ್ತವೆ.
ಮೆದುಳು ಮಸಕಾಗದ ಕನ್ನಡಿಯಂತೆ ಇರುವಾಗಲೆ
ಸ್ವಚ್ಛವಾದ ಪ್ರತಿಬಿಂಬಗಳನ್ನು
ಮುಮ್ಮೂರ್ತದಂತೆ ಆವಿಷ್ಕರಿಸಲ್ಪಡುತ್ತದೆ.
ಶಾರೀರಕ ಪ್ರಪಂಚವನ್ನು ಸಕ್ರಮವಾಗಿ ನಡೆಸುವ
ಚಕ್ರಧಾರಿ ಮೇಧ.
ಅದರ ಕೈಗಳೇ ಹಿಡಿದತಪ್ಪಿದರೆ
ಜೀವನಗತಿಗೆ ಅಡಿಗಡಿಗೂ ಕ್ಷಿತಿ.
ವಕ್ರೀಕರಿಸಿದ ವಾಸ್ತವಗಳ ಹಸ್ತಗಳು
ಸಾಮಾನ್ಯ ಮನುಷ್ಯರನ್ನು ಹೇಗೆ
ವಿಷಮ ಸಮಸ್ಯೆಗಳ ಮುಳ್ಳುಬೇಲಿಯಾಳಕ್ಕೆ ಎಸೆದುಬಿಡುತ್ತವೆಯೋ
ಚರಿತ್ರೆ ಹೇಳುತ್ತಿರುವ ನಿತ್ಯಸತ್ಯವೇ.
ತನ್ನ ಕಣ್ಣ ಮುಂದೆ ನಡೆವ ಅನರ್ಥಗಳನ್ನು ನೋಡಿ
ಪೊರೆಗಳೆಟುಕದ ಮೆದುಳು
ಹಿಡಿತ ತಪ್ಪಿ ಗಾವುಕೇಕೆ ಹಾಕುತ್ತದೆ.
ಅದು ಬಧಿರ ಲೋಕಕ್ಕೆ ಕೇಳಿಸದು.
ಬಾಯಿ ಇಲ್ಲದ ಮನಸ್ಸು ಉಸೂರೆನ್ನುತ್ತದೆ.
ನುಡಿವ ಕಂಠಕ್ಕೇನೋ ಹಗೇವುಗಳು
ಮುಷ್ಕರ ಶಕ್ತಿಗಳು ಎಣೆಯುತ್ತಿರುವ ಬಲೆಗಳು
ಬಿಗಿದುಕೊಂಡು ಹೋಗುತ್ತಿರುತ್ತವೆ.
ನಿಖಿಲ ಸೃಷ್ಟಿ ವಿಕಾಸಕ್ಕೆ
ಸಂಚಾಲಕತ್ವ ವಹಿಸುವ ಓ ಮೇಧಾಮಂಡಲವೇ

ನಿನ್ನ ಸಹಜ ಸಹನೆಯನ್ನು ಉಪ್ಪೆಂದು ಊದಿಬಿಟ್ಟು
ಮೈ ಕೊಡವಿಕೊಂಡು
ಹೂಂಕರಿಸಿ ತಿರುಗಿಬೀಳದ ಹೊರತು
ಅಕ್ರಮಗಳು ನಿಷ್ಕ್ರಮಿಸವು.
ಬೆರಕೆಯಿಲ್ಲದ ಮಾನವೀಯ ಮೌಲ್ಯಗಳು
ವಿಕ್ರಮಿಸವು.

●

## ಬೀದಿ ಸದ್ದನ್ನು ಈಜುತ್ತಾ ಹೋದರೆ

ಬೀದಿ ಮಾತನಾಡುತ್ತಲೇ ಇರುತ್ತದೆ.
ಅರುಚುತ್ತಲೇ ಇರುತ್ತದೆ.
ಪಕ್ಕದಲ್ಲೇ ತೆರೆದುಕೊಂಡಿರುವ ಮನೆಗಳ ಕಿಟಕಿಯೊಳಕ್ಕೆ
ಪಕಪಕ ನಗೆಗಳನ್ನು ಬೀಸಿ ಎಸೆಯುತ್ತಲೇ ಇರುತ್ತದೆ.
ಎಷ್ಟೆಷ್ಟು ಬಾಯಿಗಳೋ ಬೀದಿಗೆ.
ಯಾವುದನ್ನು ಅಮುಕುವುದು ?
ಅದಕ್ಕಿಂತ ಜೋರಾಗಿ ಇಲ್ಲಿಂದಲೇ ಅರುಚಿಬಿಟ್ಟರೆ –
ಕಿವಿಗಳಿದ್ದರಲ್ಲವೆ ಅದಕ್ಕೆ ಕೇಳುವುದಕ್ಕೆ.
ಬೇರೊಂದು ಮಾರ್ಗವಿಲ್ಲ
ಶರೀರವನ್ನು ಬೀದಿಯಲ್ಲಿ ಇಳಿಸಿ
ಆ ಸದ್ದನ್ನು ಈಜಿಕೊಂಡು ಹೋಗುವುದರ ಹೊರತು.
ಅಲ್ಲಿ ಎದುರಾಗುವ
ಬಗೆಬಗೆಯ ಕೂಗುಗಳು ಹಾರನ್ನುಗಳ ಮೊಳಗುಗಳು
ಒಂದೇ ಶ್ರುತಿಯಲ್ಲಿ ಪರವಶಿಸುತ್ತಿರುತ್ತವೆ.
ಅವು ಪರಸ್ಪರ ಡಿಕ್ಕಿ ಹೊಡೆದುಕೊಳ್ಳುವುದಿಲ್ಲ.
ಅವಕ್ಕವೇ ಮೊಳಗುತ್ತಿರುತ್ತವೆ.
ಹಾಗೆ ಎಷ್ಟುಹೊತ್ತು ಈಜುತ್ತ ಹೋಗುತ್ತಿದ್ದರೂ
ಬೇಸರ ಹುಟ್ಟಿಸದು ಬೀದಿ.
ಸಮೂಹದೊಳಗಿನ ತಮಾಷೆ ಅದು.
ಆದರೆ ಎಷ್ಟೋ ಹೊತ್ತಿರದು ಈ ಸನ್ನಿವೇಶ.
ಇಷ್ಟರಲ್ಲಿ ಸ್ಮೃತಿಪಟದ ಮೇಲೆ
ಸ್ವಂತ ಮನೆ ಬಾಗಿಲುಗಳು ತೆರೆದುಕೊಳ್ಳುತ್ತವೆ.
ಮತ್ತೇನಿದೆ ?
ಅಷ್ಟು ಹೊತ್ತು ಈಜುತ್ತಾ ಹೋಗುವ ಕೈಗಳಿಗೆ ಕಾಲುಗಳಿಗೆ
ಅಮಾಂತವಾಗಿ ರೆಕ್ಕೆಗಳು ಮೊಳೆಯುತ್ತವೆ.

ಶರೀರ ನೆಗೆದು ಬಾಗುತ್ತದೆ ಮನೆಯಂಗಳದಲ್ಲಿ,
ಮತ್ತೆ ಪ್ರವೇಶ
ಮೌನವಾಗಿ ಎದುರುನೋಡುತ್ತಿರುವ ಕೊಠಡಿಯೊಳಕ್ಕೆ.
ಏನಿರುತ್ತದೆ ಅಲ್ಲಿ ?
ಗಡ್ಡೆ ಕಟ್ಟಿಕೊಂಡು ಹೋಗುವ ಕ್ಷಣಗಳು.
ಭಾರ ಭಾರವಾಗಿ ನೇತಾಡುವ ಕಾಲ.
ಏನೋ ಕಳೆದುಕೊಂಡಂತೆ
ಮಾತುಮಾತಿಗೂ ಚಿಮ್ಮಿಕೊಂಡು ಬರುವ ನಿಟ್ಟುಸಿರು.
ಆಗ ಅನ್ನಿಸಿದೆ
ಏಕಾಂತದಲ್ಲಿ ಹೂತು ಹೋಗುವುದಕ್ಕಿಂತ
ಜನ ಸಮೂಹದೊಂದಿಗೆ ಕೂಡಿ ಪ್ರವಹಿಸುವುದರಲ್ಲಿನ
ಅನುಭವ
ಯಾವ ನಿರ್ವಚನೆಗೂ ಎಟುಕದ್ದೆಂದು.

●

## ಆ ಚಿತ್ರ

ಕಾಗದ, ಕುಂಚ, ಬಣ್ಣಗಳು
ಎಂದಿನಿಂದಲೋ ಎದುರುನೋಡುತ್ತಿವೆ
ಬಿಡಿಸಲಿರುವ ಆ ಚಿತ್ರಕ್ಕಾಗಿ.
ಅವು ಭ್ರಮೆಯಲ್ಲಿದ್ದಂತಿವೆ.
ನಿಜಕ್ಕೂ
ಬಿಡಿಸದ ಆ ಚಿತ್ರಕ್ಕೆ ಎಂದೋ ರೂಪ ಬಂದಿದೆ.
ಆದರೆ ಅದಕ್ಕೆ ಭಯ
ತಾನು ಚಿತ್ರ ರೂಪದಲ್ಲಿ ಕಾಗದ ಮೇಲೆ ಅವತರಿಸಿದರೆ
ಮಸಿಹಿಡಿದ ನೋಟಗಳು ತನ್ನ ಮೇಲೆ ಬಾಗಿ
ಮಲಿನ ಮಾಡುತ್ತವೇನೋ ಎಂದು.
ಎಷ್ಟು ಮರುಳೋ
ಸಾರವಿರುವ ದೃಶ್ಯಕಳಾಕೃತಿ
ನೋಡಿದಂತೆಲ್ಲಾ ಬಣ್ಣವೇರುತ್ತದೆ.
ಕೋಟಿಗಟ್ಟಲೆ ನೋಟಗಳು
ತನ್ನ ಮೇಲಿನಿಂದ ಉರುಳಿಹೋದರೂ
ಅಜಂತಾ ಚಿತ್ರ ಬಣ್ಣಗೆಟ್ಟಿದೆಯಾ.
ಹೀಗೆ ಅಂದುಕೊಂಡಿರುವಾಗಲೇ
ಆ ಅಪರೂಪದ ಚಿತ್ರ ಆಕಸ್ಮಿಕವಾಗಿ ಬಂದು
ಮೂರ್ತೀಭವಿಸಿದ ನಮ್ರತೆಯಿಂದ
ಕಾಗದದ ಮೇಲೆ ನಿಂತುಕೊಂಡಿದೆ.
ಅದನ್ನು ನೋಡಿ ಪುಳಕಿತನಾದ ನಾನು
ಅಸಂಕಲ್ಪಿತವಾಗಿ ಎಂದೆ
"ಪ್ರಿಯವಾದ ಚಿತ್ರವೇ !

ಚಿರಕಾಲ ಜೀವಿಸಿರು
ಕಲೆಗಳನ್ನು ತುಂಬಿಕೊಂಡಿರುವ ಕಣ್ಣುಗಳಲ್ಲಿ
ರಸಿಕತೆ ಉಕ್ಕುವ ಹೃದಯಗಳಲ್ಲಿ".

●

## ಕಾಲಕ್ಕೆ ಅಂದಾಜು ಕಟ್ಟುವುದ್ಹೇಗೆ ?

ಕ್ಯಾಲೆಂಡರ್ ಪುಟಗಳಲ್ಲಿ ಇಲ್ಲ ಕಾಲ.
ಅದಕ್ಕೆ ತೂಕಗಳೂ ಅಳತೆಗಳೂ ಇಲ್ಲ.
ಅದು ಕಣ್ಣಿಗೆ ಕಾಣಿಸುವುದು ಅಲ್ಲ ಅನ್ನಿಸುವುದರ ಹೊರತು.
ಅದು ಒಮ್ಮೆ ಪಕ್ಷಿಯಂತೆ ಹಾರಿಹೋದಂತೆ
ಮತ್ತೊಮ್ಮೆ
ಭಾರ ಭಾರವಾಗಿ ಎಳೆದುಕೊಳ್ಳುತ್ತಾ ಸಾಗಿಹೋದಂತೆ
ಅನುಭವ ಸಾಕ್ಷ್ಯ ಹೇಳುತ್ತದೆ.
ಆದರೆ ಈ ಎರಡು ದಶೆಗಳೂ ಕಾಲದ್ದು ಅಲ್ಲ,
ಮನಸ್ಸಿನವು.
ಹೊತ್ತೇರಿದಾಗ
ಕಾಲಕ್ಕೆ ಯೌವನ ಬಂದಂತ್ತಿರುತ್ತದೆ.
ಹೊತ್ತು ಇಳಿದಾಗ ಅದರ ಮೇಲೆ
ವಾರ್ಧಕ್ಯ ಮುಸುರಿಕೊಂಡಂತನ್ನಿಸುತ್ತದೆ.
ಹಾಗೆ ಅಂದುಕೊಳ್ಳುವುದು
ನಮ್ಮ ನಿತ್ಯಭ್ರಾಂತಿ.
ಉದಯಾಸ್ತಗಳ ಬೆಟ್ಟದ ಗುರುತುಗಳನ್ನಾಧರಿಸಿ
ಋತುಗಳ ಪರಿವರ್ತಿತ ರೂಪಗಳನ್ನಾಧರಿಸಿ
ಕಾಲಸ್ವರೂಪವನ್ನು ತೀರ್ಮಾನಿಸಿಕೊಳ್ಳರು.
ಹಾಕಿಕೊಂಡ ಉಡಿಗೆಯನ್ನಾಧರಿಸಿ
ವ್ಯಕ್ತಿತ್ವ ಮೂಲಗಳನ್ನು ತಿಳಿದುಕೊಳ್ಳಬಲ್ಲೆವಾ ?
ಅಗೋಚರವಾಗಿರುತ್ತಲೇ
ಅನಂತವಾಗಿ ಸಾಗಿಹೋಗುವ ಕಾಲಕ್ಕೆ
ಹೇಗೆ ಬೆಲೆ ಕಟ್ಟಬೇಕೋ ತೋಚದೆ
ನಾವು ಸಂವತ್ಸರಗಳ ಗೆರೆಗಳು ಎಳೆದುಕೊಳ್ಳುತ್ತೇವೆ.
ಶತಾಬ್ದಿಗಳ ಸರಹದ್ದುಗಳನ್ನು ನಿರ್ಮಿಸಿಕೊಳ್ಳುತ್ತೇವೆ.

ಹಳೆ ವರ್ಷ
ಹಣ್ಣೆಲೆಯಂತೆ ಉದುರಿಹೋಗಿದೆಯೆಂದು
ಹೊಸ ವರ್ಷ
ಈಗೀಗಲೇ ಚಿಗುರು ತೊಟ್ಟಿದೆಯೆಂದು
ಶುಭಾಶಯಗಳ ತುಂತುರು ಸುರಿಸಿಕೊಳ್ಳುತ್ತೇವೆ.
ಉಲ್ಲಾಸಗಳ ಪ್ರವಾಹದಲ್ಲಿ ಉಕ್ಕರಿಬಿಕ್ಕಿರಿಯಾಗುತ್ತಿದ್ದೇವೆ.
ಆಶಿಸಿದ ಫಲ ಕೈಗೆಟುಕದ ದಿನ
ಉಸೂರೆನ್ನುತ್ತಾ
ಕಾಲ ಕೂಡಿಬರಲಿಲ್ಲವೆಂದು ಆ ಕಾಲವನ್ನೇ ನಿಂದಿಸುತ್ತಿರುತ್ತೇವೆ.
ನಿಜಕ್ಕೆ ಅಪ್ಪಟ ಕರ್ಮಶೀಲಿಗೆ
ಕಾಲ
ಅಂಗೈಯಲ್ಲಿನ ಆಟದ ಚೆಂಡಿನಂಥದ್ದು.
ಗಟ್ಟಿಯಾಗಿ ಬೀಸೆಸೆದರೆ ಅದು ರೊಯ್ಯನೆ ತೂರಿಕೊಂಡು ಹೋಗುತ್ತದೆ.
ಭಯಗೊಂಡರೆ ಅದೇ ಕೈಜಾರಿಹೋಗುತ್ತದೆ.
ಪ್ರತಿ ಮನುಷ್ಯ ಈ ಪ್ರಾಥಮಿಕ ಸೂತ್ರವನ್ನು
ಮೈಗೂಡಿಸಿಕೊಂಡರೆ
ಜೀವನ ಪ್ರಸ್ಥಾನ ಸಮರ್ಥ ಸಮಗ್ರ.

●

## ಎಷ್ಟು ವೈವಿಧ್ಯವೆಂದು

ನನ್ನ ಮನೆ ಮುಂದೆಯಿರುವ
ಉದ್ದವಾದ ಗೆರೆಯಂಥ ಬೀದಿಯಲ್ಲಿ ಚಲಿಸುವ
ಬಗೆಬಗೆಯ ಪಾದಗಳನ್ನು ನೋಡುತ್ತಿರುತ್ತೇನೆ.
ಪ್ರವಹಿಸುವ ಪಾದಗಳು
ಪ್ರಶ್ನಿಸುವ ಪಾದಗಳು
ಅಷ್ಟರಲ್ಲೇ ಹಠಾತ್ತನೆ ನಿಂತುಹೋಗಿ
ಆಲೋಚನೆಗಳಲ್ಲಿ ಮುಳುಗಿಹೋಗುವ ಪಾದಗಳು.
ನನಗೆ ಗೊತ್ತು
ಅವ್ಯಾವುವು ಗಮ್ಯವಿಲ್ಲದೆ ಬೀದಿಗಿಳಿಯಲಿಲ್ಲವೆಂದು.
ನೋಡುನೋಡುತ್ತಿರುವಾಗಲೇ
ನನ್ನ ಕಣ್ಣ ಗಡಿ ದಾಟಿಹೋದ
ಪಾದಗಳು ಸರಿಯೆ
ಗಟ್ಟಿ ನೆಲದ ಮೇಲೆಯೇ ಕೆಸರಲ್ಲಿ ಇಳಿಬಿದ್ದಂತೆ
ಎಳೆದುಕೊಳ್ಳುತ್ತಾ
ನಿಟ್ಟುಸಿರು ಬಿಡುತ್ತಾ ಸಾಗಿಹೋಗುವ ಪಾದಗಳನ್ನು
ಒಮ್ಮೊಮ್ಮೆ ಪರಾಮರ್ಶಿಸಿ ಬರಬೇಕೆಂದು
ನನ್ನ ಹುಚ್ಚುಬಯಕೆ.
ಪೂರಾ ಅವು ನನ್ನ ಸಹಾನುಭೂತಿಯನ್ನು ತಿರುವಿಬಡಿಯುವ
ಪೌರುಷ ಗೋತ್ರಗಳಾದರೆ ?
ಹೋಗಲಿ ನನಗ್ಯಾಕೆಯೆಂದುಕೊಳ್ಳುತ್ತೇನೆ.
ಕೊಠಡಿಯಲ್ಲಿಯೇ ಊತುಹೋಗಿ ನಾನಿರುತ್ತಿದ್ದರೂ
ನನ್ನ ನೋಟಗಳನ್ನು ಮಾತ್ರ
ಎದುರು ಬೀದಿಯಲ್ಲಿ ಇತ್ತಾ ಅತ್ತಾ ಪ್ರಸರಿಸುತ್ತಿರುತ್ತೇನೆ.
ಕೆಲವು ಪಾದಗಳು ಪರಸ್ಪರ ಎದುರುಬಿದ್ದಾಗ
ಆಪ್ಯಾಯತೆಯನ್ನು ಸುರಿದುಕೊಳ್ಳುತ್ತವೆ.

ಮತ್ತೆ ಕೆಲವು
ತಮ್ಮನ್ನು ದಾಟಿ ತೂರಿಕೊಂಡು ಹೋದ ಪಾದಗಳಮೇಲೆ
ಬೈಗಳನ್ನು ಕೇರಿ ಸುರಿಯುತ್ತಿರುತ್ತವೆ.
ಪಾದಗಳಿಗೆ ಕಣ್ಣುಗಳಿರುತ್ತವೆ ಬಾಯಿಗಳಿರುತ್ತವೆ.
ನಿಶ್ಶಬ್ದ ಭಾಷೆಗಳನ್ನು ಆಲಿಸುವ ಕಿವಿಗಳಿರುತ್ತವೆ.
ಶರೀರಗಳನ್ನು ಜೋಪಾನವಾಗಿ ಹೊತ್ತುಕೊಂಡುಹೋಗುವ
ಪಾದಗಳಿಗೇ ಇಷ್ಟು ವೈವಿಧ್ಯವಿದ್ದರೆ
ಮನಸ್ಸುಗಳ ಮಾತೇನು ?
ಮತ್ತೊಮ್ಮೆ
ಅಗೋಚರವಾಗಿ ಅಕ್ಷಯವಾಗಿ ಸಾಗುವ ಹೃದಯಗತಿಗಳ ಮೇಲೆ
ನನ್ನ ಅಂತರ್ವೀಕ್ಷಣ ಹರಿಸುತ್ತೇನೆ.

●

## ಮನಸ್ಸಿಗೆ ಮಂಕು ಕವಿಯದವರೆಗೆ

ಕಣ್ಣು ಮುಚ್ಚಿಕೊಂಡು ನೋಡಿದರೆ
ಇಂದು ನನ್ನ ಎದುರು
ಬೆಳಕಿನ ಕಿರಣಗಳೇ ಹಾಸಿಕೊಂಡಿವೆ.
ಅವಕಾಶ ಸಿಕ್ಕಿದರೆ
ಕಣ್ಣುಪಾಪೆಗಳನ್ನು ಆಕ್ರಮಿಸಿಕೊಳ್ಳುವ
ಆ ಕತ್ತಲು ಏನಾಗಿ ಹೋದಂತೆ?
ಸೀಳಿಕೊಂಡು ಹೋಗುವ ನನ್ನ ನೋಟಗಳ ನೈಶಿತ್ಯಕ್ಕೆ
ಮೈಯೆಲ್ಲಾ ಮುದುಡಿಕೊಂಡು
ಅವು ತಮ್ಮ ರೂಪಗಳನ್ನು ಬದಲಿಸಿಕೊಂಡು
ಬೆಳಕಿನಲ್ಲಿ ಬೆರೆತು ಹೋದುವೇ ?
ಎಂದಿನಂತೆ ಮಲಗಿಕೊಂಡೆ.
ಇನ್ನೂ ನನ್ನನ್ನು ನಿದ್ರೆ ಮುಳುಗಿಸಿಲ್ಲ.
ಗ್ರಹಗಳು ಬಂದು ನನ್ನ ಕೈ ಬೆರಳುಗಳ ಮೇಲೆ
ತಿರುಗಲಾರಂಭಿಸಿವೆ.
ಎದ್ದು ನಡಿಯೋಣವೆಂದುಕೊಂಡು
ನೆಲದ ಮೇಲೆ ಹೆಜ್ಜೆಯೂರಿದೆ.
ಸಾಗಿಹೋಗುವ ಟೇಪಿನ ಮೇಲೆ ನಾನಿರುವ
ವಿಚಿತ್ರಾನುಭೂತಿ.
ನಿಜಕ್ಕೂ ನಾನು ಚಲಿಸುತ್ತಿಲ್ಲ.
ಆದರೂ ಬಹಳ ಹೊತ್ತು ನಡೆದಾಡಿದಂತೇ ಇದೆ.
ತಿರುಗಿ ಬಂದು ಕುರ್ಚಿಯಲ್ಲಿ ಭದ್ರವಾಗಿ ಕುಳಿತುಕೊಂಡು
ಆಕಾಶದೊಳಕ್ಕೆ ನೇರ ನೋಡಿದೆ.
ನನ್ನ ಎದುರೂ ನನ್ನ ಸುತ್ತಲೂ
ಸಾವಿರ ಮಿಂಚು ಬಳ್ಳಿಗಳ ಸುಶಿಕ್ಷಿತ ವಿನ್ಯಾಸಗಳು.
ತಡವಿ ನೋಡಿಕೊಂಡರೆ ನಾನು ನಾನಾಗಿಯೇ ಇದ್ದೇನೆ.

ಇದೆಲ್ಲವೂ ಯಾವುದೋ ನನ್ನ ಸ್ವಪ್ನ ಲೋಕದಲ್ಲಿ
ನಡಿದಿದ್ದಲ್ಲ
ಅಸಲುಸಿಸಲಾದ ಜಾಗ್ರತಾವಸ್ಥೆಯಲ್ಲೇ.
ಮನಸ್ಸಿಗೆ ಮಂಕು ಕವಿಯದವರೆಗೆ
ಕಾಲ ನಮ್ಮ ಮುಷ್ಟಿಯಲ್ಲಿರುತ್ತದೆ.
ಹಿಡಿಯ ಬಿಗಿ ಸಡಿಲಿಹೋದರೇ
ಅದು ಬರ್ರನೆ ಹಾರಿ
ನಮ್ಮ ತಲೆಗಳ ಮೇಲೆಯೇ ದುಮುಕುತ್ತದೆ.
ಅದಕ್ಕೆ ಮತ್ತೆ ಮತ್ತೆ ಹೇಳುತ್ತೇನೆ
ಕಾಲ ನಿಯಂತ್ರಣವನ್ನನುಸರಿಸಿಯೇ
ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುತ್ತದೆಂದು.

●

## ಮನಸ್ಸಿನೊಂದಿಗೆ ನಡೆಯಬಹುದಾದರೆ

ಮನೆಯಿಂದ ಬೀದಿಯೊಳಕ್ಕೆ ಕದಲಿಹೋಗುತ್ತಿರುವ
ನನ್ನ ಹೆಜ್ಜೆಗಳು ನನ್ನನ್ನು ಪ್ರಶ್ನಿಸಿವೆ
ಎಲ್ಲಿಗೆಂದು ?
ಏನೋ ಅಂದೆ
ನಿನ್ನ ನೋಟಗಳನ್ನು ಅಂತರಂಗದೆಡೆಗೆ ಹೊರಳಿಸು
ನಡಿಗೆ ಸಂಗತಿಯನ್ನು ನಾವು ನೋಡಿಕೊಳ್ಳುತ್ತೇವೆಂದು
ಹೆಜ್ಜೆಗಳು ಸೂಚಿಸಿವೆ.
ಸರೇ ಎಂದೆನು.
ಅನೂಹ್ಯ ಪರಿಣಾಮ ವೀಚಿಕೆಗಳು
ಎದುರಾಗಿ ಬೀಸುತ್ತಿರುವ ಗಾಳಿ
ನನ್ನ ಕಿವಿಗಳಲ್ಲಿ
ಗುಸಗುಸಗಳು ಚಿಮುಕಿಸುತ್ತಾ ಹೋಗಿದೆ.
ನಾನೇನೋ ತಲೆಗಳುದೂಗುವ ತರುಶಾಖೆಗಳೊಂದಿಗೆ
ಕರತಾಡನ ಮಾಡುತ್ತಾ
ಹೊಳೆಯ ತೆರೆಗಳನ್ನು ಕಾಲ ಬೆರಳುಗಳಿಂದ ಮೀಟುತ್ತಾ
ಗಿರಿ ಶಿಖರದ ಮೇಲೆ
ಬುಗುರಿಯಂತೆ ಗಿರಗಿರನೆ ತಿರುಗುತ್ತಾ
ಕಣಿವೆಗಳ ಆಲಿಂಗನದಲ್ಲಿ ಸ್ವಲ್ಪಹೊತ್ತು ಉಡುಗುತ್ತಾ
ಸಾಗಿ ಹೋಗುತ್ತಲೇ ಇದ್ದೇನೆ.
ಉದಯಗಳು ಸಂಜೆಗಳು ನನ್ನ ಸಹಚರರು,
ಆಕಾಶ ನನ್ನ ಕಾವಲುಗಾರ
ನೆಲ ನಾನು ತೂಗುವ ಉಯ್ಯಾಲೆ
ಕರಗಿ ಹೋಗುತ್ತಿರುವ ಕಾಲವನ್ನು
ಹನಿ ಹನಿಯಾಗಿ ಆಸ್ವಾದಿಸುತ್ತಾ
ಹಾಗೆ ಎಷ್ಟು ಹೊತ್ತು ಸಾಗಿಹೋದೆನೋ ತಿಳಿಯದು.

ಅಷ್ಟರಲ್ಲಿ ಒಂದು ಕರೆ ಕೇಳಿಸಿದೆ
ಹೇಗಿದೆ ನಡಿಗೆಯೆಂದು.
ಕಣ್ಣು ತೆರೆದು ಸುತ್ತಲೂ ನೋಡಿದೆ
ಯಾರೂ ಇಲ್ಲ.
ಹಾಗೆ ನನ್ನನ್ನು ಮಾತನಾಡಿಸಿದ್ದು ಯಾರು ?
ನನ್ನ ಹೆಜ್ಜೆಗಳೇ.
ಆಗ ಅನ್ನಿಸಿದೆ ನನಗೆ
ಇಷ್ಟು ಹೊತ್ತು ನಾನು
ನನ್ನ ಮನಸ್ಸಿನೊಂದಿಗೆ ನಡೆದೆನೆಂದು.
ಹಾಗೆ ನಡೆಯಬಹುದಾದರೆ
ದೂರಗಳೂ ಏರುತಗ್ಗುಗಳು ಇರವು.
ಬೆಳಕು ಕತ್ತಲ ಎಲ್ಲೆಗಳು ಇರವು.
ಆ ನಿರಂತರ ಗಮನವೇ
ಅಂತಿಮ ಗಮ್ಯಕ್ಕೆ ದಿಕ್ಸೂಚಿ.

●

## ಅನುಭವ ಗುಚ್ಛ

ಮರುಭೂಮಿಯಲ್ಲಿ ಒಂಟಿಯಾಗಿದ್ದೇನೇನೆಂದು
ಅಂದುಕೋಳ್ಳಬೇಡ.
ಮರಳ ದಿಬ್ಬಗಳು ಭದ್ರಪಡಿಸಿಕೊಂಡ
ಒಂಟೆಗಳ ಕಾಲಿನ ಮುದ್ರೆಗಳು
ನನ್ನನ್ನು ಎಂದಿಗಂದು ಮಾತನಾಡಿಸುತ್ತಿವೆ.
ಅಲ್ಲಲ್ಲಿ ನೆಟ್ಟಗೆ ನಿಂತಿರುವ
ಖರ್ಜೂರ ವೃಕ್ಷಗಳು
ತಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು
ಗಾಳಿಯೊಂದಿಗೆ
ನನಗೆ ಸಿಹಿ ಸುದ್ದಿ ಕಳುಹಿಸುತ್ತಿವೆ
ಒಳಗಡೆ ಕಿರುಚಾಟಗಳ ತುಳಿತದಲ್ಲಿ ನಲುಗಿಹೋದ
ನನ್ನ ಕಿವಿಗಳು
ನಿಶ್ಶಬ್ದವಾಗಿ ಕೇಳಿಸುವ ಅರೇಬಿಯನ್ ರಾಗಗಳನ್ನು
ಪರಮ ಪ್ರಶಾಂತವಾಗಿ ಆಸ್ವಾದಿಸುತ್ತಿವೆ.
ನೀಲಾಕಾಶದಲ್ಲಿ ಮುಳುಗುಹಾಕುವುದಕ್ಕೆ
ಯಾವ ಅವರೋಧಗಳು ಇಲ್ಲವೆಂದು
ನೋಟಗಳು ಕುಣಿದಾಡುತ್ತಿವೆ.
ಉಕ್ಕಿ ಬರುತ್ತಿರುವ ಅನುಭೂತಿಗಳ ನೊರೆಗಳು
ಅಕ್ಷರಗಳಾಗಿ ಬದಲಾಗಿ
ಮೇಧಾ ಪತ್ರದ ಮೇಲೆ ಮುದ್ರಿತವಾಗುತ್ತಿವೆ
ಆದರೂ ಮರುಭೂಮಿಯಲ್ಲಿ ಒಬ್ಬನೇ
ಹಾಗೆ ಎಷ್ಟು ಹೊತ್ತು ಎಂದು ಇರುತ್ತೇನೆ ?
ಮನೆಗೆ ಹಾರಿಹೋಗದಿರಲಾಗದು
ಜನ ಪ್ರವಾಹದಲ್ಲಿ ಸೇರಿ ಅಲೆಗಳೆತ್ತದಿರಲಾಗದು.
ಈ ವಾತಾವರಣ ಎಷ್ಟು ಆಹ್ಲಾದವನ್ನು ಹಂಚಿದರೂ

ಮರುಭೂಮಿಯನ್ನು ತೆಗೆದುಕೊಂಡು ಹೋಗಿ
ಸಮಾಜದಲ್ಲಿ ಇರಿಸಿಕೊಳ್ಳಲಾರೆವಲ್ಲ.
ಆದರೆ ಒಂದು ಸಂತೃಪ್ತಿ ರೇಖೆ,
ಅವಾಂಛನೀಯ ದೃಶ್ಯಗಳ ಅಲುಗಾಟದಿಂದ
ಕಣ್ಣುಗಳು ಕಳವಳಗೊಂಡಾಗ
ಶ್ರುತಿಮತಿಯಿಲ್ಲದ ಹುಚ್ಚುಸದ್ದುಗಳ ಇರಿತಗಳಿಂದ
ಕಿವಿಗಳೂ ಗಾಯಗೊಂಡಾಗ
ಮರುಭೂಮಿ ಕೊಟ್ಟ ಆ ಅನುಭವಗುಚ್ಛ
ಲೇಪನದಂತೆ ದಣಿವಾರಿಸುತ್ತದೆ.
ಸಾಲದೇ ಅದು ?

●

# ವ್ಯವಧಿ

ಯಾವುದಕ್ಕಾದರೂ
ಸ್ವಲ್ಪ ವ್ಯವಧಿ ಇರಬೇಕು
ಶ್ವಾಸಕ್ಕೆ ಶ್ವಾಸಕ್ಕೆ ಮಧ್ಯೆ ಇರುವಂತೆ.
ಆ ಸ್ವಲ್ಪವಿರಾಮ
ಹೊಚ್ಚಹೊಸ ಜೀವಧಾತುಗಳನ್ನು ಸಮೀಕರಿಸಿಕೊಳ್ಳುವ
ಮಾಧ್ಯಮ,
ಅದರ ಅಗತ್ಯ ಮತ್ತಷ್ಟು ಬೆಳೆದರೆ
ವಿಶ್ರಾಂತಿ ಕೆಸರಿನೊಳಕ್ಕೆ ಇಳಿದು ಹೋಗುವ ಪ್ರಮಾದ
ಇಲ್ಲದೆ ಹೋಗಲಿಲ್ಲ.
ಇಂದಿಗಿದು ಸಾಕು ಬಿಡಿ ಎನ್ನುವ
ಹೊಂದಿಕೊಳ್ಳುವ ತತ್ವ
ಅಸಕ್ತತೆಯನ್ನು ಮುಚ್ಚಿ ತೆಗೆದುಕೊಳ್ಳುವ ದಪ್ಪನೆ ವಸ್ತ್ರ.
ಕಣ್ಣಿಗೆ ಪರಮ ವಿಧೇಯತೆಯಿಂದ ಕಾವಲು ಕಾಯುವ
ಕಣ್ಣಿನ ರೆಪ್ಪೆಗಳು ಸಹ
ಆಗಾಗ ಹಾಗ್ಹಾಗೆ ವಾಲುತ್ತಾ
ಟಪ್ಪನೆ ಮೇಲಕ್ಕೇಳುತ್ತಿರುತ್ತವೆ.
ವಾಲಿದ ರೆಪ್ಪೆಗಳೂ ತಾವು ವಿಶ್ರಮಿಸುತ್ತೇವೆಂದು.
ಕಣ್ಣಿನ ಮೇಲೆ ಮುಚ್ಚಿಕೊಂಡು ಹೋದರೆ
ನೋಟದ ಚಲನೆಗೆ ಸ್ವಸ್ತಿ
ಸುದೀರ್ಘ ವಾದ್ಯದಂತೆ ಸಾಗಿಹೋಗುವ
ಅರ್ಥವತ್ತಾದ ಜೀವಿತಕ್ಕೆ
ಯಾರಾದರೂ ಬಯಸುವುದು ಅರ್ಧವಿರಾಮವೇ ಹೊರತು
ಪೂರ್ಣವಿರಾಮವಲ್ಲ.

●

# ಡೈರಿ

ನನ್ನ ಡೈರಿಯನ್ನು ಎಂದಿಗಂದು
ಕಣ್ಣುಗಳಿಂದ ಮಾತನಾಡಿಸದೇ ದಿನಚರ್ಯೆ ಸಾಗದು.
ಎಷ್ಟು ಸಹನೆಯೋ ಅದಕ್ಕೆ,
ತಿರುವಿದ ಪುಟಗಳನ್ನೇ ಎಷ್ಟುಸಲ ತಿರುವಿಹಾಕಿದರೂ
ಮಥಿಸಿದ ಅಕ್ಷರಗಳನ್ನೇ ಮತ್ತೆ ಮತ್ತೆ ನೋಡಿದರೂ
ಎಳ್ಳಷ್ಟು ಬೇಸರಗೊಳ್ಳದು.
ನನ್ನ ದೃಷ್ಟಿಯಲ್ಲಿ ಡೈರಿ
ತಿಂಗಳುಗಳನ್ನು ದಿನಗಳನ್ನು ತನ್ನಲ್ಲಿ ನಿಲ್ಲಿಸಿಕೊಂಡ
ಪುಟಗಳ ಸಂಪುಟ ಮಾತ್ರವೇ ಅಲ್ಲ,
ಅದುನನ್ನ ಜೀವನಾಡಿ.
ಮಾನಸಿಕವಾಗಿ ಶಾರೀರಕವಾಗಿ
ನನ್ನನ್ನು ನಡೆಸುವ ರಹದಾರಿ ಡೈರಿ.
ಮೇಲೆ ಬೀಳುತ್ತಿರುವ ವಯಸ್ಸು
ನನ್ನ ನೆನಪುಗಳನ್ನು ಒಂದೊಂದು ಹನಿಯಾಗಿ
ಚಪ್ಪರಿಸುತ್ತಿದ್ದರೆ
ಆ ಕೊರತೆಯನ್ನು ಡೈರಿ ಪೂರೈಸುತ್ತದೆ.
ಒಮ್ಮೊಮ್ಮೆ ನಾನು ಬೆಚ್ಚಿಬಿದ್ದು ಎದ್ದು
ಏನೋ ನೆನಪಾಗದೆ ದಿಕ್ಕುಗಳು ನೋಡುತ್ತಿದ್ದರೆ
ಗುರುವಿನಂತೆ ನನಗೆ ದಿಶಾನಿರ್ದೇಶನ ಮಾಡುತ್ತದೆ.
ನಿನ್ನೆಯನ್ನು ಕೈಬಿಟ್ಟು ನಾನು
ಇಂದಿನ ಹೊಳೆದಂಡೆಯಲ್ಲಿ ಖುಷಿಯಾಗಿ ಈಜುತ್ತಾ
ನಾಳಿನ ಕನಸುಗಳ ಎಲ್ಲೆಗಳನ್ನು ಸ್ಪೃಶಿಸುತ್ತಿದ್ದರೇ
ತ್ರಿಕಾಲಗಳನ್ನು ತನ್ನಲ್ಲಿ ಮೇಳೈಯಿಸಿಕೊಂಡು

ಇದ್ದ ಕಡೆಯೇ ತಾನು ಋಷಿಯಂತೆ ದೃಢವಾಗಿ ಕುಳಿತುಕೊಂಡು
ನನ್ನ ಯೋಗಕ್ಷೇಮವನ್ನು
ಅಂತರ್ನೇತ್ರದಿಂದ ವೀಕ್ಷಿಸುತ್ತಿರುತ್ತದೆ.
ಎಲ್ಲ ಕಾಲದಲ್ಲಿ ನನ್ನ ಆಲೋಚನೆಗಳ ಬೆನ್ನೇರಿ ಸಾಗುವ
ನಿತ್ಯ ಸಹಚರಿ ಡೈರಿ.
ಆದರೆ ಎಲ್ಲರಿಗೂ ತಿಳಿದ ನಿಜವೊಂದಿದೆ.
ಒಂದೊಂದು ವರ್ಷಕ್ಕೆ ಒಂದು ಹೊಸ ಡೈರಿ
ಕಾಲದ ಮೆಟ್ಟಿಲು ಏರಿ ಬರುತ್ತಿರುತ್ತದೆ.
ಹಳೆ ಡೈರಿ
ರಜೆಯೆನ್ನುತ್ತಾ ತಣ್ಣಗೆ ಇಳಿದುಹೋಗುತ್ತದೆ.
ಅಷ್ಟುಮಾತ್ರಕ್ಕೆ ಅದರ ಆಯಸ್ಸು ಮುಗಿಯಲಿಲ್ಲ.
ಗತದ ಸಂಘಟನೆಗಳು
ಸ್ಮೃತಿಪಟಲದ ಮೇಲೆ ಕೇರಿಹೋದಾಗ
ಇಗೋ ನಾನಿದ್ದೇನೆ ಭಯಪಡಬೇಡವೆಂದು
ಅದು ಅಭಯಹಸ್ತ ನೀಡುತ್ತದೆ.
ನನ್ನ ವರ್ತಮಾನದೊಂದಿಗೆ
ಗತವನ್ನು ಕೂಡಾ ತನ್ನಲ್ಲಿ ಭದ್ರಪಡಿಸಿಕೊಂಡ ಡೈರಿಗೆ
ನಾನು ಕೊಡಬಲ್ಲ ಕಾಣಿಕೆ ಏನಿದೆ
ತೇವಗೊಂಡ ಹೃದಯದಿಂದ
ಅರ್ಪಿಸುವ ಹಾರ್ದಿಕ ಕೃತಜ್ಞತೆಗಳ ಹೊರತು.

●

## ಸೃಜನ ಯಾತ್ರೆ

"ಏನ್ರೀ ನೀವು ಇಂದಿಗೂ ಬರೆಯುತ್ತಲೇ ಇದ್ದೀರಿ
ಇನ್ನೂ ಎಷ್ಟು ದಿನವೆಂದು ?"
ಅದು ನನ್ನ ಹಿತೈಷಿಯ ಆತ್ಮೀಯ ಪ್ರಶ್ನೆ.
"ಬರೆಯುತ್ತಲೇ ಇರುತ್ತೇನೆ ಮಿತ್ರರೇ !
ನನ್ನ ತುಂಬುಹೃದಯದ ಕಡೆಯ ಗಂಟೆ ಮೊಳಗುವ ತನಕ."
ಅದು ನನ್ನ ಸುನಿಶ್ಚಿತ ಸಮಾಧಾನ.
ರಚನೆ, ಶ್ವಾಸ
ನನ್ನಲ್ಲಿ ಸಮಾಂತರವಾಗಿ ಸಾಗುವ ಕ್ರಿಯೆಗಳು.
ಬರೆಯುವುದು ನಿಂತರೆ
ಉಸಿರು ನಿಂತುಹೋದಂತೆ.
ಎಂದಿಗಂದು ನನ್ನ ಕವಿತೆಗಳೊಳಕ್ಕೆ ಏರದೆ
ನಾನಿರುವ ಸಮಾಜಕ್ಕೆ ನಿದ್ರೆ ಬಾರದು.
ನನ್ನ ಕವಿತೆಗಳೊಂದಿಗೆ ಶ್ರುತಿ ಕೂಡಿಸಿಕೊಂಡಾಗ
ಕಣ್ಣೀರು ಹೊಂದುವ ತಾದಾತ್ಮ್ಯ ಏನೆಂದು ಹೇಳಲಿ ?
ಎಷ್ಟೆಷ್ಟೋ ಸಂಘಟನೆಗಳು
ತಮಗೆ ಅಕ್ಷರಾಕೃತಿ ಬರುವುದೆಂದಿಗೇ ಎಂದು
ನನ್ನ ಲೇಖನಿ ಅಂಗಳದಲ್ಲಿ ಕಾದುಕೊಂಡಿರುತ್ತವೆ.
ಹುಟ್ಟಲಿರುವ ಪುಸ್ತಕ
ನನ್ನ ಹುಟ್ಟಿದ ದಿನ ಇನ್ನೂ ಬಾರದೇನೆಂದು
ಕಾಲೆಂಡರ್ ಮೇಲೆ ಬೇಸರಗೊಳ್ಳುತ್ತಿರುತ್ತದೆ.
ಕಾರಣ ?
ಪ್ರತಿ ವರುಷ ನನ್ನ ಜನ್ಮದಿನ
ಆ ಹೊಸ ಕೃತಿಯ ಅವತರಣೆ ಕ್ಷಣವೇ ಅಲ್ಲವೇ ?
ಅದಕ್ಕೆಂದು.

ನನ್ನ ಕವಿತೆಗಳು ನನ್ನೊಂದಿಗಿರುವುದು ನಾನು ನುಡಿಯುವತನಕವೆ.
ಆ ಮೇಲೆ ಅವು ಓದುಗರ
ನಯನ ಬಿಂಬಗಳಲ್ಲಿ ಪ್ರತಿಬಿಂಬಿಸುತ್ತವೆ.
ಅಭಿಮಾನಿಗಳ ಹೃದಯೋದ್ಯಾನಗಳಲ್ಲಿ ವಿಹರಿಸುತ್ತವೆ.
ನೈರಾಶ್ಯವನ್ನು ತುದಿ ಉಗುರಿನಿಂದ ಚಿಮ್ಮಿಬಿಡುತ್ತಾ
ಬದುಕಿನ ಬಗ್ಗೆ
ಹೊಚ್ಚ ಹೊಸ ಆಶೆಗಳನ್ನು ಅಂಕುರಿಸುವಂತೆ ಮಾಡುತ್ತವೆ.
ನಾನು ಮಾತ್ರ ಅಂದುಕೊಂಡೆನೇ
ಅಕ್ಷರಾವನಿಯಲ್ಲಿ ನನ್ನ ಸೃಜನಯಾತ್ರೆ
ಇಷ್ಟುಕಾಲ ನಿರಂತರವಾಗಿ ವಿಕ್ರಮಿಸುತ್ತದೆಂದು
ನಾನು ನಾನಾಗಿ ಈ ಯಾತ್ರೆಯನ್ನು ಬಿಟ್ಟುಬಿಡಲಾರೆ.
ಅದೇ ಸ್ವಚ್ಛಂದ ವಿರಾಮ ಬಯಸಿದರೇ
ಆಗ ನೋಡುತ್ತೇನೆ
ಅಲ್ಲಿತನಕ ಇದೇ ರೀತಿ
ಈ ಗತಿಯಲ್ಲಿಯೇ ನನ್ನ ರಚನೋದ್ಯಮ.

●

## ನ್ಯಾಯ ಪ್ರಜ್ವಲಿಸಬೇಕೆಂದರೆ

ಎಂದಿನಿಂದಲೋ ನೋಡುತ್ತಿದ್ದೇನೆ
ಈ ಚಕ್ರ ಸಕ್ರಮವಾಗಿ ಸಾಗಿಹೋಗುತ್ತಿಲ್ಲ.
ಎಲ್ಲಾ ವಕ್ರಗತಿಗಳೇ.
ಧರಿತ್ರಿ ಹೇಗೆ ಭರಿಸುತ್ತಿದ್ದಾಳೋ ಇದನ್ನು.
'ಸರ್ವಂಸಹ' ಎಂಬ ಬಿರುದನ್ನು
ಸಾರ್ಥಕ ಮಾಡಿಕೊಳ್ಳುವುದಕ್ಕೇನೋ !
ನಮ್ಮಲ್ಲಿನ ಕೆಲವು ಮನುಷ್ಯರು ತುಳಿಯುವ
ಅಡ್ಡದಾರಿಗಳನ್ನು ಗಮನಿಸುತ್ತಾ
ನಾವು ಮಾತ್ರ ಭರಿಸುವುದಿಲ್ಲವೇ.
ಎಲ್ಲಾ ರಂಗಗಳಲ್ಲಿ ಈಗ ಗದ್ದುಗೆಯೇರಿದೆ
ಅಕ್ರಮ ವ್ಯವಸ್ಥೆ.
ಅಸಲು ಮುಖದ ಕುರುಹುಗಳನ್ನು
ಮೂಲಾಗ್ರವಾಗಿ ಬದಲಿಸುವ ಬಗೆಬಗೆಯ ಉಡುಪುಗಳಿಂದ
ಹೊದ್ದುಕೊಂಡ ಮುಸುಕುಗಳೊಂದಿಗೆ
ಅದು ಬಹು ಪಾತ್ರಾಭಿನಯ ಮಾಡುತ್ತದೆ.
ಜನರಂಜಿಕ ಪಥಕಗಳ ಹೆಸರಿನಲ್ಲಿ
ಸ್ವಾರ್ಥವನ್ನು
ರಾಜಮಾರ್ಗಗಳಲ್ಲಿ ಮೆರವಣಿಗೆ ಮಾಡಿಸುತ್ತಿದೆ.
ಕಣ್ಣಿರುವ ಸಮಾಜ
ನೋಟಗಳನ್ನು ಉಪಸಂಹರಿಸಿಕೊಂಡು ನೋಡುತ್ತಲೇ ಇದೆ.
ಯಾರಾದರೂ ಸರಿಯೇ
ದ್ರೋಹವೆಂದು ತಿಳಿದು ಉಪೇಕ್ಷಿಸುವುದೂ
ದ್ರೋಹವೇ.
ನಮ್ಮ ಕಂಠಗಳಲ್ಲಿ
ಹಾಕಿಕೊಂಡ ಮೊಳೆಗಳನ್ನು ಇನ್ನಾದರೂ ಹೊರತೆಗೆದು

ಆ ತೊಡುಗೆಗಳನ್ನು ಮುಸುಕುಗಳನ್ನು ಹರಿದುಹಾಕಿ
ವಾಸ್ತವಗಳನ್ನು
ನಡುಬೀದಿಯಲ್ಲಿ ನಗ್ನವಾಗಿ ನಿಲ್ಲಿಸಿದರೆ ವಿನಹ
ಕರಕುಗಟ್ಟಿಕೊಂಡು ಹೋಗುತ್ತಿರುವ ನ್ಯಾಯ
ಎಂದಿನಂತೆ ಪ್ರಜ್ವಲಿಸದು.
ಮರೆಯಾಗುತ್ತಿರುವ ಮಾನವತ್ವ
ಶಿರಸೆತ್ತಿಕೊಂಡು ಪ್ರಸ್ಥಾನಿಸದು.

●

## ಸಂಘಟನೆ ಚಿಕ್ಕದೇ – ಆದರೆ

ಕಾಲು ಮುರಿದಿದೆ
ಮನಸ್ಸು ಅಲ್ಲವಲ್ಲಾ.
ಮುರಿದ ಕಾಲು
ಕಾಲವನ್ನು ಔಷಧಿಯಾಗಿ ಸೇವಿಸುತ್ತಾ
ಕ್ರಮವಾಗಿ ಮೊದಲ ಸ್ಥಿತಿಗೆ ಸೇರಿಕೊಳ್ಳುತ್ತದೆ.
ಹಾಗೆ ಜರುಗುವುದು
ಮನಸ್ಸಿಗೆ ಅಷ್ಟು ಸುಲಭವಲ್ಲ
ಬಿಸಿಲಿನೇಟುಗಳಿಗೆ ನೆರೆಗಳು ಬಿಟ್ಟ ನೆಲ
ಮುಂಗಾರು ಮಳೆ ಹನಿಗಳ ಸಾಂಗತ್ಯದಲ್ಲಿ
ಒಣಹಾಕಿದ ಎಲೆಹಸಿರ ಸೀರೆಯಾಗುತ್ತದೆ.
ತಮ್ಮ ಶರೀರಗಳನ್ನು ಆಚ್ಛಾದಿಸಿದ ಹಣ್ಣೆಲೆಗಳು
ಬಿರುಗಾಳಿಯ ದಾಳಿಗೆ ಉದಿರಿ ಹೋಗಲು
ನಗ್ನವಾಗಿ ನಿಂತುಬಿಟ್ಟ ತರುಶಾಖೆಗಳು
ವಸಂತಋತು ಪಲ್ಲವಸ್ಪರ್ಶದಿಂದ
ಹಸಿರೆಲೆಗಳ ಸುರುಚಿರವಾಗಿ ರೂಪಹೊಂದುತ್ತವೆ.
ತಳದಡಿ ಜೀವಜಲ ಬತ್ತಿಹೋಗಿ
ಪಕ್ಕೆಲುಬುಗಳು ತೇಲಿ
ದಿಕ್ಕುಗಳು ನೋಡುವ ನದಿಗಳು
ಆಕಾಶದ ಆಶೀರ್ವಾದದ ಸೋನೆಯಿಂದ
ಚಂಗನೆ ಎದ್ದು ಜಲತಾಂಡವ ಮಾಡುತ್ತವೆ.
ಅಲ್ಲಿಯವರೆಗ್ಯಾಕೆ ?
ಸೀಳುಬಿಟ್ಟ ತುಟಿಗಳು
ದಿನಗಳು ಉರುಳಿಹೋಗುತ್ತಲೇ ಚಿಗುರು ತೊಟ್ಟು
ಲಕಲಕಿಸುತ್ತವೆ.

ಪ್ರಕೃತಿಯಲ್ಲಿ ನಡೆಯುವ ವೈಪರೀತ್ಯ ಪರಿಣಾಮಗಳಿಗೆ
ಎಲ್ಲಿಗಲ್ಲೇ ಅಂದಿಗಂದೇ ಪರಿಷ್ಕಾರಗಳಿರುತ್ತವೆ.
ಆ ಸೂತ್ರಗಳು ಮನಸ್ಸಿಗೆ ವರ್ತಿಸವು.
ಅದು ಹೊಂದಿಸುವಿಕೆಗಳಿಗೆ ಅಂಟಿಸುವಿಕೆಗಳಿಗೆ
ಮಾತ್ರೆಗಳಿಗೆ ಶಸ್ತ್ರ ಚಿಕಿತ್ಸೆಗಳ ತಿರುಚುಗಳಿಗೆ
ಅತೀತ.
ಕ್ಷಮಾಪಣೆಗಳಿಗೆ
ಸಂತೈಸುವಿಕೆಗಳ ಆಲಾಪನೆಗಳಿಗೆ ಒಳಪಡದ
ನಿಶ್ಚಲ ಪ್ರವೃತ್ತಿ ಅದರದು.
ಪರಿಷ್ಕಾರವೆಂಬುದು ಇಲ್ಲವೆ ಮತ್ತೆ ?
ಇಲ್ಲದೆ ಇಲ್ಲ.
ಒಬ್ಬ ಜೀಸಸ್ ಸುರಿಸಿದ ರಕ್ತದ ಹನಿಯೋ
ಒಬ್ಬ ಮಹಾತ್ಮನ ದಯಾಮಹಿತ ವಾಕ್ಕೋ
ಒಂದು ಸಾರಿ ಆರ್ದ್ರವಾಗಿ ಮಾತನಾಡಿಸಿದರೆ ಸಾಕು
ಮುರಿದ ಮನಸ್ಸು ತನಗೆತಾನೇ ಬೆಸೆದುಕೊಳ್ಳುತ್ತದೆ.
ಗತವನ್ನು ವಿಸ್ಮೃತಿಯೊಳಕ್ಕೆ ಬಿಸಾಡಿ
ಹೊಚ್ಚಹೊಸ ಜೀವಿಕೆ ಧರಿಸುತ್ತದೆ.

●

## ಅನಿವಾರ್ಯ ಪರಿಣಾಮ

ಮೋಡಗಳೊಳಗಿಂದ ಉರುಳಿಬೀಳುತ್ತಿರುವ ಮಳೆಹನಿ
ಮೋಡವನ್ನು ಅಭ್ಯರ್ಥಿಸಿದೆ
ನೆಲದ ಮೇಲೆ ಬೀಳುವ ಮುನ್ನವೇ
ನನ್ನನ್ನು ನಿನ್ನೊಳಕ್ಕೆ ಸೇದಿಕೊಳ್ಳಲಾರೆಯಾ ಎಂದು.
ಮೋಡ ಪ್ರತ್ಯುತ್ತರಿಸಿದೆ
"ನೀನು ನನ್ನ ಗರ್ಭಕೋಶದಲ್ಲಿ ಮುಲುಗುತ್ತಿರುವುದನ್ನು
ನೋಡಲಾರದೆ
ಸರಿಯಾದ ಸಮಯದಲ್ಲಿ ನಿನಗೆ ವಿಮುಕ್ತಿ ನೀಡಿದೆ.
ಮತ್ತೇನು ಮಾಡಲಿ ?"
ಪ್ರಜ್ವಲಿಸುತ್ತಿರುವ ಜ್ವಾಲೆ ಕೆಂಡವನ್ನು ಪ್ರಶ್ನಿಸಿದೆ
"ನಿನ್ನ ಒಳಗುಟ್ಟು ಸಪ್ಪಳವಾಗದೆ ಅಡಗಿರುವ ನನ್ನನ್ನು
ಯಾಕೆ ಹೀಗೆ ಹೊರಕ್ಕೆ ಬಿಸಾಡಿದೆ ?"
ಒಳದನಿಯಿಂದ ಕೆಂಡ ಹೀಗೆ ಬದುಲು ಹೇಳಿದೆ
"ನನ್ನಲ್ಲಿ ರಗಲಿಹೋಗುತ್ತಿರುವ ಹೊಟ್ಟೆಕಿಚ್ಚನ್ನು
ಗತ್ಯಂತರ ವಿಲ್ಲದೆ
ನಿನ್ನ ರೂಪದಲ್ಲಿ ಬಹಿರ್ಗತ ಮಾಡಿದೆ.
ಅದು ತಪ್ಪು ಅನ್ನುತ್ತೀಯಾ ?"
ಭೂಗೋಳ ಅಜ್ಞಾತ ಸೃಷ್ಟಿಕರ್ತನನ್ನು
ದನಿಯೆತ್ತಿ ಕರೆದು ನಿಲ್ಲಿಸಿ ಕೇಳಿದೆ
"ನನ್ನನ್ನು ವಾಯುವಲಯದೊಳಕ್ಕೆ ಚೆಂಡಿನಂತೆ ಬಿಸಾಡಿ
ನನ್ನ ಸುತ್ತಾ ನಾನೇ ಹುಚ್ಚಿಯಂತೆ ತಿರುಗುವಂತೆ ಮಾಡಿ
ಯುಗಾಂತರಗಳಿಂದ ವಿನೋದ ನೋಡುತ್ತಲೇ ಇದ್ದೇನೆ.
ಇನ್ನೂ ಎಷ್ಟು ಕಾಲವೆಂದು ?"
ಸಮಾಧಾನ ಕೇಳಿಸಿದೆ ಹೀಗೆ

"ನೀವು ಹುಚ್ಚಳಲ್ಲವಮ್ಮಾ
ನಿನ್ನ ಮಡಿಲಲ್ಲಿ ಬೆಳೆಯುತ್ತಾ
ನಿನ್ನ ನೆರಳಲ್ಲಿ ನೆಲಸಿರುವ
ಅಸಂಖ್ಯಾತ ಸಂತಾನ ಬದುಕಿಗೆ
ಆಧಾರ ಸ್ವರೂಪಿಣಿಯಾಗಿ ನಿಂತ ಮಾತೃಮೂರ್ತಿ.
ನೀನು ಒಂದು ಕ್ಷಣ ನಿಂತರೆ
ಸಮಸ್ತ ಜೀವಕೋಟಿ ವಿಕಲವಾಗಿ ಹೋಗುತ್ತದೆ.
ವಿಶ್ವಂಭರಾ ಶ್ವಾಸ ನಿಂತುಹೋಗುತ್ತದೆ.
ನಿನ್ನ ಭ್ರಮಣದಲ್ಲಿಯೇ ಮಾನವಜಾತಿ ಗಮನವಿದೆ.
ಆ ಪ್ರಾಣಿಗಳಿಗಾದರೂ
ನಿನ್ನ ನಿರ್ವಿರಾಮ ಭ್ರಮಣೆಯನ್ನು ಮುಂದುವರಿಸುತಾಯಿ."
ಸೃಷ್ಟಿಕರ್ತ ಅಭ್ಯರ್ಥನೆಯನ್ನು
ಹೇಗೆ ಬೇಡವೆನ್ನುತ್ತದೆ ಸೃಷ್ಟಿ.
ಅದೇ ಭ್ರಮಣ ಅದೇ ಗಮನ
ಅದೇ ಸಮಾನತತ್ವ ಅದೇ ಅಸ್ತಿತ್ವ..

●

## ಸಮತೂಕವೆಂದರೆ ಅದೇ

ದಡದ ಮೇಲೆ ಕುಳಿತಿರುವ ಮನುಷ್ಯ
ಹೊಳೆಯಲ್ಲಿನ ಮೀನನ್ನುದ್ದೇಶಿಸಿ ಹೀಗೆ ಎಂದನು
"ಮೀನೇ ಓ ಮೀನೇ !
ನಿನ್ನನ್ನು ನೋಡುತ್ತಿದ್ದರೆ ನನಗೆ ಕನಿಕರ.
ಯಾವಾಗ ನೋಡಿದರೂ ನೀನು ನೀರಿನಲ್ಲಿ
ಇತ್ತಾ ಅತ್ತಾ ಚಲಿಸುತ್ತಿರುವೆ.
ಮುಳುಗುತ್ತಿರುತ್ತೀಯೆ ತೇಲುತ್ತಿರುತ್ತೀಯೆ.
ಏನೂ ತೋಚದೆ ಒಂದೊಂದು ಸಲ
ಹೊಳೆಯ ದಡವನ್ನು ಹಿಡಿದುಕೊಂಡು ತೆವಳುತ್ತಿರುತ್ತೀಯೆ.
ಎಷ್ಟು ದಿನ ನಿನಗೀ ದುರ್ದೆಸೆ.
ನಿನ್ನ ಬಾಳೆಲ್ಲಾ ಇನ್ನು ನೀರುಪಾಲೇನಾ ?
ಇನ್ನಾದರೂ ಹೊರಕ್ಕೆ ಬಂದುಬಿಡು "
ಅದನ್ನು ಕೇಳಿ ಕಿಲಕಿಲನೆ ನಕ್ಕ ಮೀನು
ಮನುಷ್ಯನನ್ನು ಸಂಬೋಧಿಸುತ್ತಾ ಹೀಗೆ ಎಂದಿದೆ –
"ಮನುಷ್ಯಾ ಓ ಮನುಷ್ಯಾ !
ನನ್ನ ಮೇಲೆ ಕನಿಕರ ತೋರುವ ಮೊದಲು
ಮುಖ್ಯವಾಗಿ ನೀನೇಂದು ತಿಳಿದುಕೊಂಡೆಯಾ.
ನಾಲ್ಕು ಮಂದಿಯಲ್ಲಿ ನೀನು ತಲೆತಗ್ಗಿಸಿಕೊಂಡು ಹೋಗುತ್ತಿದ್ದರೆ
ನಡೆದಾಡುವ ಶವದಂತೆ ಇದ್ದೀಯೆಂದು ನಗಾಡುತ್ತಾರೆ.
ಪೌರುಷ ಪ್ರಕೋಪಿಸಿದಾಗ
ಪ್ರತಿಕೂಲ ಪರಿಸ್ಥಿತಿಗಳಿಗೆ ಎದುರು ತಿರುಗಿದರೆ
ಸೊಂಟ ಮುರಿದು ಅಂಗಾತಬಿದ್ದು ಹೋಗುತ್ತಿಯೆ.
ಕಾಲಕ್ಕೆ ಎದುರೀಜಲಾರದೆ

ತೊರೆ ಹಿಡಿದು ಅವಲೀಲೆಯಾಗಿ ಸಾಗಿಹೋಗಲಾರದೆ
ಹಣ್ಣುಗಾಯಿ ನೀರುಗಾಯಿಯಾಗುತ್ತಿರುತ್ತೀಯೆ.
ದಡದ ಮೇಲೆ ತಿಷ್ಠೆಹಾಕಿಕೊಂಡು ಉಪದೇಶ ನೀಡುವುದಲ್ಲ.
ಹೊಳೆಯೊಳಕ್ಕೆ ಇಳಿ
ಎಷ್ಟು ಕಾಲ ಹೊಳೆಗೆ ಎದುರೀಜುತ್ತೀಯೋ
ಎಷ್ಟು ದಿನವೆಂದು ತೊರೆಯಲ್ಲಿ ನಿರಾಯಾಸವಾಗಿ ತೇಲಿ ಹೋಗುತ್ತೀಯೋ
ನಾನೂ ನೋಡುತ್ತೇನೆ.
ಬಾ ! ಗುಂಡಿಗೆಯಿದ್ದರೆ ಇಳಿ."
ಮೀನು ಎಸದ ಸವಾಲಿನಿಂದ
ನಿಜಕ್ಕೂ ನನ್ನ ತಲೆ ತಿರುಗಿಹೋಗಿದೆ
ಆಗಂದುಕೊಂಡೆ
ನಿರಾತಂಕವಾಗಿ ಜೀವಿಸುವುದಾರೆ
ನೀರಲ್ಲಿನ ಮೀನಿಗೂ ನೆಲದ ಮೇಲಿನ ಮನುಷ್ಯನಿಗೂ
ವ್ಯತ್ಯಾಸವಿಲ್ಲವೆಂದು
ನಿವಾಸ ನಿಲಯಗಳು ಯಾವುದಾದರೂ
ಪ್ರಾಣಿಗಳ ಸ್ವರೂಪ ಸ್ವಭಾವಗಳು ಬೇರೆಯಾದರೂ
ಸಾಮಾನ್ಯ ಬದುಕುಗಳ ಆಂತರ್ಯ ಒಂದೇ ಎಂದು.

●

# ಹಿಂದೆ ಸರಿಯದ ಶಸ್ತ್ರ

ಆಶಿಸಿದ ಲಕ್ಷ್ಯ
ಕೊಂಬೆಗಂಟಿಕೊಂಡಿರುವ ಮಾಗಿದ ಹಣ್ಣಿನಂತೆ
ಗಾಳಿಗೆ ಉದುರಿ ಬೊಗಸೆಯಲ್ಲಿ ಬೀಳದು.
ನಿಟ್ಟುಸಿರುಗಳನ್ನು ಬಹಿಷ್ಕರಿಸಿದ
ನಿರ್ವಿರಾಮ ಸಾಧನೆಯಿಂದಲೇ ಅದು ಸುಸಾಧ್ಯ.
ಒಂದೊಂದು ಸಲ
ಅಂದುಕೊಂಡಿದ್ದು ಎಟುಕಿದಂತೇ ಅನ್ನಿಸುತ್ತದೆ.
ತೀರಾ ನೋಡಿಕೊಂಡರೆ
ಬಿಳಿಚಿಕೊಂಡ ಬರಿಕೈಗಳೇ ಉಳಿಯುತ್ತವೆ.
ಏರುತ್ತಿರುವ ಮೆಟ್ಟಲು ಎಷ್ಟೆಂದು ಲೆಕ್ಕಿಸುತ್ತಿದ್ದರೆ
ಆ ಮೇಲೆಯಿರುವ ಗಗನ ಕಂಠ ಅಯ್ಯೋ ಪಾಪವೆಂದು
ಒಂದು ಕನಿಕರದ ನುಡಿಯನ್ನು ಚಿಮುಕಿಸುತ್ತದೆ.
ಯಾರ ಸಂತೈಸುವಿಕೆಯಿಂದಲೋ ಸಾಗಿಸುವ ಜೀವಯಾತ್ರೆ
ಶವಯಾತ್ರೆಯಂಥದ್ದೇ.
ನಡೆದರೆ ಹೇಗೆ ನಡೆಯಬೇಕು ?
ಎದೆ ಹಿಂದಕ್ಕೆ ತಿರುಗಿಸಿ ನೋಡಬೇಡ.
ಪಾದಗಳ ಮಜಲು ಗುರುತುಗಳಿಗಾಗಿ
ತೆವಳಾಡಬೇಡ.
ಆಗಾಗ ಮನದ ತಳದಡಿಯ ಪೊರೆಗಳಲ್ಲಿರುವ ದಣಿವು
ವಿಶ್ರಾಂತಿ ತೊಡುಗೆಯೊಂದಿಗೆ ಹೊರಬರುತ್ತದೆ.
ವಿಶ್ರಾಂತಿ ರುಚಿ ಪಳಗಿದರೆ ಮತ್ತೇನಿದೆ ?
ನಿವೃತ್ತಿಗೆ ದಾರಿಮಾಡುವ ಪ್ರಮಾದವಿದೆ.
ಕೋಪ ತೀರಿದ ಬಿಲ್ಲುಗಾರ ಪ್ರಯೋಗಿಸಿದ ಶಸ್ತ್ರ
ನಿರ್ದಿಷ್ಟ ಲಕ್ಷ್ಯವನ್ನು ಭೇದಿಸದಹೊರತು
ತಿರುಗಿಬಾರದು.

ಅವಿಶ್ರಾಂತ ಸಾಧಕನ ಸಂಕಲ್ಪ
ಸುದೂರ ಗಮ್ಯವನ್ನು
ತನ್ನ ಅಂಗಳದಲ್ಲಿ ಇಳಿಸದೆ ಸುಮ್ಮನಿರದು.

## ಆ ಅಕ್ಷರಗಳು ಯಾವ ಲಿಪಿಯಲ್ಲೋ

ಆಕಾಶ ಪಟದ ಮೇಲೆ ಮುದ್ರಿಸಿದ
ನಕ್ಷತ್ರಗಳ ಅಕ್ಷರಗಳಲ್ಲಿ ಏನಿದೆಯೋ ತಿಳಿದುಕೊಳ್ಳಬೇಕೆಂದು
ನನ್ನ ನೋಟಗಳು
ತಾನು ಹುಟ್ಟಿದಂದಿನಿಂದ ತವಕಿಸುತ್ತಿವೆ.
ಇಷ್ಟಕ್ಕೂ ಅವು ಯಾವ ಲಿಪಿಯಲ್ಲಿ ಬರೆದ ಬರಹಗಳೋ
ಗೊತ್ತಾದರಲ್ಲವೇ.
ಆದ್ದರಿಂದ
ಸಮಸ್ತ ಪ್ರಪಂಚ ಭಾಷೆಗಳ ವರ್ಣಮಾಲೆಗಳನ್ನು
ಅವು ತಿರುವಿಹಾಕಿ ನೋಡಿವೆ.
ಎಲ್ಲೂ ಈ ಅಕ್ಷರಗಳ ಹೋಲಿಕೆಗಳೇ ಇಲ್ಲವಲ್ಲಾ !
ನಿರಾಶೆಯಿಂದ ನಿಟ್ಟುಸಿರು ಬಿಡುತ್ತಿರುವ ನನ್ನ ನೋಟಗಳ ಮೇಲೆ
ಸಹಾನುಭೂತಿಯಿಂದ ಹೀಗೆ ಎಂದೆ.
"ನನ್ನನ್ನು ನಡೆಸುವ ಓ ನೋಟಗಳಿರಾ !
ಯಾಕೆ ಈ ವೃಥಾ ಪ್ರಯಾಸ ?
ಮೇಲ್ಮೇಲೆ ಹೊಳೆಯುವ ನಕ್ಷತ್ರಗಳನ್ನು ಬದಿಗಿರಿಸಿ
ಆಕಾಶದ ಅಸಲು ಆಂತರ್ಯವನ್ನು ಓದುವುದಕ್ಕೆ
ಪ್ರಯತ್ನಿಸಿರಿ.
ಪರಿಣಾಮಗಳು ಸುಮುಖವಾಗಿದ್ದರೆ
ವಿಶ್ವರಹಸ್ಯಗಳೆಲ್ಲಾ ಬಂದು
ನಿಮ್ಮ ಅಂಗೈಯಲ್ಲಿ ಬಾಗುತ್ತವೆ ?"
ಕಡೆಯ ವಾಕ್ಯ ಮುಗಿಯಿತೋ ಇಲ್ಲವೋ
ಮೈಯೆಲ್ಲಾ ಪುಳಕಿತಗೊಂಡ ನನ್ನ ನೋಟಗಳಿಗೆ
ರೆಕ್ಕೆಗಳು ಮೊಳೆತಿವೆ.
ಅವು ತಟಕ್ಕನೆ ಮೇಲಕ್ಕೆ ಹಾರಿಹೋಗಿವೆ.

ಗಗನ ಮಂಡಲದ ಎತ್ತರದೊಳಕ್ಕೆ
ಎಲ್ಲ ದಿಕ್ಕುಗಳ ಅಂಚುಗಳೊಳಕ್ಕೆ ತೂರಿಕೊಂಡು ಹೋಗಿ
ಪರಿಶೀಲಿಸಿ ಪರಿಶೋಧಿಸಿ
ಬಳಲಿಹೋದ ರೆಕ್ಕೆಗಳಿಂದ
ನನ್ನ ಕಣ್ಣಗೂಡಿಗೆ ತಿರುಗಿ ಬಂದು ನಿಟ್ಟುಸಿರು ಬಿಡುತ್ತಾ
ಹೀಗೆ ನಿವೇದಿಸಿಕೊಂಡಿವೆ
"ಆಕಾಶವೆಂದರೆ ಏನೋ ಅಂದುಕೊಂಡಿದ್ದೆ
ಏನಿದೆ ಸ್ವಾಮೀ ಅಲ್ಲಿ
ಶೂನ್ಯ ಶೂನ್ಯ ಶೂನ್ಯವೇ ವಿನಹ" ಎಂದು.
ಆಗ ನಾನು ಮುದ್ದಾಗಿ ಎಂದೆ
"ಓ ನನ್ನ ಒಲವಿನ ನೋಟಗಳಿರಾ
ನಿರಾಕಾರವಾಗಿ ಹಾಸಿಕೊಂಡಿರುವ ಆ ಶೂನ್ಯದಲ್ಲಿ
ಇನ್ನೇನಿರುತ್ತದೆ.
ಥಳಥಳಿಸಿ ಹೊಳೆವ
ಆ ನಕ್ಷತ್ರಗಳ ಅಕ್ಷರಗಳ ದೃಶ್ಯಗಳನ್ನು
ವರ್ಷಗಟ್ಟಲೆ ನೋಡಿದರೂ ನಯನ ತೃಷ್ಣೆ ತೀರದಲ್ಲ,
ಅದು ಸಾಲದೇ.
ಅವು ಯಾವ ಲಿಪಿಯಲ್ಲಿವೆ ಅನ್ನುತ್ತೀರಾ
ಆದರೆ ಕೇಳಿ
ಅವುಗಳನ್ನು ಮುದ್ರಿಸಿದ ಅದೃಶ್ಯಹಸ್ತವೇ
ಆ ಲಿಪಿ ರಹಸ್ಯವನ್ನು ತಿಳಿದುಕೊಳ್ಳಲಾರದೆ
ಇನ್ನೂ ಅನ್ವೇಷಣೆ ಮುಂದುವರಿಸುತ್ತಲೇ ಇದೆ.
ಫಲಿತಾಂಶಕ್ಕಾಗಿ ನಿರೀಕ್ಷಿಸೋಣ
ಆಶಾವಾದಿಗಳು ಅಲ್ಲವೆ.

●

## ಅಂಚುಗಳು ಎರಡು

–೧–
ನನ್ನ ಶರೀರವನ್ನು ನಾನೇ ಗಿರ್ರನೆ ತಿರುವಿಹಾಕಿದೆ
ಅದು ಗಿರಗಿರನೆ ತಿರುಗುತ್ತಲೇ ಇದೆ.
ತನ್ನ ಸುತ್ತಾ ಪಕ್ಷಿಗಳನ್ನೂ ವೃಕ್ಷಗಳನ್ನೂ ನದಿಗಳನ್ನೂ
ಮೈದಾನಗಳನ್ನೂ
ತಿರುಗಿಸಿಕೊಳ್ಳುತ್ತದೆ.
ನನ್ನ ಇರುವಿಕೆ ಪರಿಭ್ರಮಣದಲ್ಲಿ ಸಿಕ್ಕಿಕೊಂಡಿದೆ.
ತಿರುಗಿದ್ದು ಸಾಕು ಇನ್ನು ನಿಲ್ಲಿಸೆಂದು
ಕೊರಳೆತ್ತಿ ಕಿರುಚಿದೆ.
ಆಗ ಅಶರೀರವಾಣಿ ಕೇಳಿಸಿದೆ ಹೀಗೆ –
"ನನ್ನನ್ನು ತಿರುವಿಹಾಕಿದ ನಿನ್ನ ಕೈಗಳು
ಕ್ಷಮಾಪಣೆ ಕೇಳದ ಹೊರತು ನಾನು ನಿಲ್ಲೆನು" ಎಂದು.
ಏನು ಮಾಡುತ್ತವೆ ಕೈಗಳು
ಕ್ಷಮಿಸಿ ಎಂದು ಕೇಳಿಕೊಂಡಿವೆ.
ಶರೀರ ತನ್ನ ಕಾಲಿನ ಬೆರಳುಗಳ ಮೇಲೆ ಠೀವಿಯಾಗಿ ನಿಂತು
ವಿಜಯ ಸೂಚಕ ಮುದ್ರೆ ಧರಿಸಿ
ಯಥಾಸ್ಥಿತಿಗೆ ಸೇರಿಕೊಂಡಿದೆ.
–೨–
ಆನಂದವಾಗಿ ನನ್ನ ನೋಟಗಳನ್ನು ಮೇಲಕ್ಕೆಬೀಸಿ ಎಸೆದೆ.
ಕಣ್ಣಸೆರೆಯನ್ನು ತಪ್ಪಿಸಿಕೊಂಡ ಖೈದಿಗಳಂತೆ ಅವು
ಅರೆ ಕ್ಷಣದಲ್ಲಿ ಅದೃಶ್ಯವಾಗಿವೆ.
ಎಲ್ಲಿಗೆ ಹೋಗುತ್ತವೆ ?
ಸ್ವಲ್ಪ ಹೊತ್ತು ವಿಹರಿಸಿ
ಅವೇ ತಿರುಗಿಬರುತ್ತವೆಬಿಡು ಎಂದುಕೊಂಡೆ.

ಎಷ್ಟಕ್ಕೂ ಬರಲಿಲ್ಲ ಏನಾಗಿಹೋದಂತೆ ?
ಯಾವ ಅಂದದ ಬಲೆಗಳಲ್ಲಿ ಸಿಕ್ಕಿಕೊಂಡಿವೆಯೋ
ಯಾವ ದೃಶ್ಯಗಳ ಪ್ರಲೋಭಗಳ ಕೆಸರಲ್ಲಿ ಇಳಿಬಿದ್ದಿವೆಯೋ –
ಹಾಗೆ ಆತಂಕಪಡುತ್ತಿರುವ ನನಗೆ
ತಣ್ಣನೆ ಸಮಾಧಾನದ ಸ್ವರದಂತೆ ಹೀಗೆ ಕೇಳಿಸಿದೆ.
"ಏನಷ್ಟು ಮುಳುಗಿಹೋಗಿದೆಯೆಂದು ಭಯಪಡುತ್ತಿರುವೆ
ನಮ್ಮನ್ನು ನಾವು ಕಳೆದುಕೊಳ್ಳಲಿಲ್ಲ
ಎಲ್ಲ ದಿಕ್ಕುಗಳನ್ನು ಶೋಧಿಸಿ
ನಿನಗಾಗಿ ವಿಶ್ವರಹಸ್ಯಗಳ ನಿಧಿಗಳನ್ನು ತೆಗೆಕೊಂಡು ಬಂದಿದ್ದೇವೆ
ಎಲ್ಲಿ ಬಚ್ಚಿಟ್ಟುಕೊಳ್ಳುವೆಯೋ" ಎಂದು ಆ ನೋಟಗಳೇ ಅನ್ನುತ್ತಿದ್ದರೆ
ಅರೆ ಅವು ಬಚ್ಚಿಟ್ಟುಕೊಳ್ಳುವುದೆಲ್ಲಿ ಎಂದು ನಾನು ದಿಗ್ಭ್ರಮೆಗೊಳ್ಳುತ್ತಿದ್ದರೆ
"ಇಗೋ ನಾನಿದ್ದೇನೆ
ಆ ನಿಧಿಗಳನ್ನು ನಿನ್ನ ಅಗತ್ಯಕ್ಕಾಗಿ ನನ್ನಲ್ಲಿ
ಪ್ರಾಣಪ್ರದವಾಗಿ ಇರಿಸಿಕೊಳ್ಳುತ್ತೇನೆ" ಎಂದು
ಅಂತರ್ವಾಣಿಯಂತೆ ಕೇಳಿಸಿದ
ಮೇಧಾನಿಲಯದ ಉದಾರತೆಗೆ
ನನ್ನ ತಲೆಬಾಗದೆ ತಪ್ಪಲಿಲ್ಲ.

●

## ನನ್ನೊಂದಿಗೆ ಆಡಿಕೊಂಡ ಚೆಂಡು

ಖುಷಿಬಿದ್ದು ಬ್ಯಾಟ್ನಿಂದ ಚೆಂಡನ್ನು ಬೀಸಿ ಹೊಡೆದೆ
ಆ ಆಟದ ಓನಾಮಗಳೂ ಕೂಡಾ ನನಗೆ ತಿಳಿಯದಿದ್ದರೂ
ಅದು ಬಿರುಸಾಗಿ ಹೊರಟುಹೋಗಿದೆ.
ಎಲ್ಲಿ ಬಿದ್ದಿದೆಯೋ ತಿಳಿಯದು
ಗಾಳಿಭುಜದ ಮೇಲೆ ಸವಾರಿಮಾಡುತ್ತಿದೆಯೋ
ಹೊಳೆಯ ಅಲೆಗಳ ಮೇಲೆ ದೋಣಿಯಂತೆ ತೇಲಿಹೋಗುತ್ತಿದೆಯೋ
ಬೆಟ್ಟದಾವರೆಗಳಿಗೆ ಡಿಕ್ಕಿ ಬಡಿಯುತ್ತಿದೆಯೋ
ಕೊಂಬೆಗಳ ಆಲಿಂಗನದಲ್ಲಿ ಪರವಶಿಸಿ ಹೋಗುತ್ತಿದೆಯೋ
ಎಲ್ಲಿ ಆ ಚೆಂಡು ಎಲ್ಲಿದೆಯೋ.
ಕಥೆ ಇಷ್ಟು ದೂರ ಬರುತ್ತದೆಂದು ಅಂದುಕೊಳ್ಳಲಿಲ್ಲವೇ.
ಆದರೆ ತಪ್ಪು ನನ್ನದೇ ಎಂದು ಕೆನ್ನೆಗೊಡೆದುಕೊಳ್ಳುತ್ತಿದ್ದರೆ
ಅದು ಬರ್ರನೆ ತಿರಿಗಿ ಬಂದು
ನನ್ನ ಕೈಯಲ್ಲಿನ ಬ್ಯಾಟನ್ನು ಮೇಲಕ್ಕೆ ಬಡಿದೆಸೆದು
ಅರ್ಥವಾಯಿತೇ ನನ್ನ ಸತ್ವ ಏನೆಂದು
ಸ್ವಾಭಿಮಾನವೆಂದರೆ ಅದೇ ಮತ್ತೆ –
ಮುಯ್ಯಿಗೆ ಮುಯ್ಯಿ ಎನ್ನುತ್ತಾ
ಕಿಲ ಕಿಲನೆ ನಕ್ಕುಬಿಟ್ಟಿದೆ.

●

## ಮತ್ತೊಮ್ಮೆ ಮನುಷ್ಯನನ್ನು ಕುರಿತು

ಗಗನದ ಗಲ್ಲವನ್ನು ಸವರುವ
ಆ ಉತ್ತುಂಗ ಗಿರಿಶಿಖರದ ಅಂಚಿನ ಮೇಲೆ
ಕಾಣಿಸುತ್ತಿರುವುದೇನು ?
ಇತ್ತ ಆಳವಾದ ಕಣಿವೆಯಲ್ಲಿ
ನಿಸ್ಸಹಾಯವಾಗಿ ಒಂಟಿಯಾಗಿ ತೆವಳಾಡುತ್ತಿರುವುದು
ಯಾವ ಪ್ರಾಣಿ ?
ಮೇಲಿರುವುದು ಕೆಳಗಿರುವುದು ಮತ್ತೇನೋ ಅಲ್ಲ ಮನುಷ್ಯನೇ.
ದೈನಂದಿನ ಬದುಕಿನಲ್ಲಿ ಮನುಷ್ಯ ಪಡೆದುಕೊಳ್ಳುವ
ಸಮುನ್ನತ ಸ್ಥಿತಿಗೆ
ಸೇರಿಕೊಳ್ಳುವ ಅಧೋಗತಿಗೆ ಪ್ರತೀಕಗಳು
ಆ ಶಿಖರ ಈ ಕಣಿವೆ.
ತಾನು ಸಮುದಾರ್ಜಿಸಿದ ಸಮುಜ್ವಲ ಜ್ಞಾನವನ್ನು
ಪಂಜಾಗಿ ಬದಲಿಸಿಕೊಂಡು
ಅಜ್ಞಾನ ತಿಮಿರಗಳ ಬೆನ್ನುಗಳಿಗೆ ಚುರುಕು ಮುಟ್ಟಿಸುತ್ತಾ
ಮಾರ್ಗನಿರ್ದೇಶ ಮಾಡುವ ಮನುಷ್ಯ
ಅಷ್ಟರಲ್ಲಿಯೇ ವಿವೇಕ ಚಕ್ಷುಗಳಿಗೆ ಪೊರೆಗವಿದು
ಕಾಣಿಸದ ಕೆಸರಿನೊಳಕ್ಕೆ ಇಳಿಜಾರಿ ಹೋಗುತ್ತಾನೆ.
ತಾನು ನಡೆಸಿದ ನೀಚಕೃತ್ಯಗಳು
ಸ್ಮೃತಿಗಳ ರೂಪದಲ್ಲಿ
ರಾತ್ರಿಯೆಲ್ಲಾ ನಿದ್ರೆಯನ್ನು ಚೂರು ಚೂರಾಗಿ ಕತ್ತರಿಸುತ್ತಿದ್ದರೆ
ಪಶ್ಚಾತ್ತಾಪದಗ್ಧನಾಗಿ
ಪ್ರಭಾತವೇಳೆ ಸ್ವಚ್ಛವಾಗಿ ಸಾತ್ವಿಕವಾಗಿ
ಬಾಲ ಸೂರ್ಯ ಕಿರಣದಂತೆ ರೂಪುಗೊಳ್ಳುತ್ತಾನೆ,
ಕತ್ತಲು ಆವರಿಸುತ್ತಲೆ ತನ್ನ ಮತಿನಿಯತಿ ತಪ್ಪುತ್ತದೆ,
ಮತ್ತೆ ಪತನ ಪ್ರಾರಂಭ.

ನೋಡುತ್ತಿದ್ದೀಯಾ ಮನುಷ್ಯ !
ನಿನ್ನ ಈ ಜನ್ಮಕ್ಕೆ ನೀನು ಅಯೋಗ್ಯ
ಅಡಿಗಡಿಗೆ ಪರವಂಚನೆಯಜತೆಗೆ
ಆತ್ಮವಂಚನೆಗೆ ಒಳಗಾಗುತ್ತಿರುವ
ದ್ವಂದ್ವ ಪ್ರವೃತ್ತಿಗಳ ಕೊಡಲಿ.
ಮುಖ್ಯವಾಗಿ ನೀನು ಮನುಷ್ಯನಾಗಿ ಯಾಕೆ ಹುಟ್ಟಿದೆ ?
ಮಣ್ಣಾಗಿ ಹುಟ್ಟಿದ್ದರೂ ಚೆನ್ನಾಗಿರುತ್ತಿತ್ತು
"ವಂದೇ ಮಾತರಂ" ಎಂಬ ವಸುಧಾಭಿವಂದನೆ ಗೀತೆಗೆ
ಕಾವ್ಯದ ವಸ್ತುವಾಗುತ್ತಿದ್ದೆ.
ಜನ್ಮ ಪರಿವರ್ತನೆ ಸಾಧ್ಯವೇ ಎಂದುಕೊಂಡರೆ
ಇಂದಿಗೂ ಮಿಂಚಿಹೋಗಿದ್ದೇನೂ ಇಲ್ಲ.
ಪದವಿ ಪ್ರಲೋಭಗಳ
ಅಕ್ರಮಾರ್ಜನೆಗಳ ವ್ಯಾಮೋಹಗಳ ಮಸಿಕಲೆಗಳನ್ನು
ನಿನ್ನ ಮನದ ಕನ್ನಡಿಯಿಂದ ಒರಸಿಕೊ.
ನಿನ್ನಲ್ಲಿನ ಸ್ವಚ್ಛವಾದ ಮನುಷ್ಯತ್ವವನ್ನು
ನಿಶ್ಚಲವಾಗಿ ನಿಲ್ಲಿಸಿಕೊ.

●

## ಬೆವರ ಹನಿಗಳು

ಬೀಜ ಖರೀದಿಸದ ಆರ್ಥಿಕ ದುಸ್ಥಿತಿ.
ಏನು ಮಾಡುತ್ತಾರೆ ನಿರ್ಭಾಗ್ಯರು.
ಬೆವರ ಹನಿಗಳನ್ನು ನಾಟಿಮಾಡುತ್ತಾ ಹೋಗುತ್ತಿದ್ದಾರೆ.
ಕಣ್ಣೀರು ಮೊಳೆಯುತ್ತವೋ
ಹೊಟ್ಟೆ ಉರಿಗಳು ಜ್ವಲಿಸುತ್ತವೋ,
ಎಂದಿಗಂದು ಸರ್ಕಾರದಧಿಪತಿಗಳು ಸುರಿಸುವ
ವಾಗ್ದಾನಗಳ ರಾಶಿಗಳಲ್ಲಿ
ನಾಟಿಗಳಿಗೆ ಉಪಯೋಗಿಸುವ
ಬುಟ್ಟಿಯಷ್ಟು ಬೀಜ ದೊರಕುತ್ತವೇನೋ ಎಂದು
ಅವರ ಹುಚ್ಚು ನೋಟಗಳು ಹುಡುಕುತ್ತಿರುತ್ತವೆ.
ಅಸಲದು ಧಾನ್ಯವಾದರಲ್ಲವೇ,
ಹಾಗೆ ಭ್ರಮೆಗೊಳಿಸುವ ಬೊಗಳೆ ಮಾತುಗಳ ಹೊಟ್ಟು.
ಸಹನೆಗೂ ಕೂಡ ಹದ್ದಿರುತ್ತದೆ,
ಅದು ಆ ಹದ್ದುಮೀರಿತೋ
ಅಗ್ರ ಪೀಠಗಳ ಕೀಲುಗಳಿಗೆ ಕೀಲುಗಳು ಮುರಿದುಬೀಳುತ್ತವೆ.
ಶ್ರಮಜೀವಿಗಳು ಕರಗಿಸುವ ಕಂಡಗಳು
ಧಗಧಗಿಸುವ ಕೆಂಡಗಳ ಬಾವುಟಗಳಾಗಿ
ಎದುರು ತಿರುಗುತ್ತವೆ.
ಅನ್ನಾರ್ತರು ಕೋರಿಕೊಳ್ಳುವುದು
ಅಗ್ರಾಸನಗಳನ್ನಲ್ಲ,
ನೆಲದ ಮೇಲೆ ಕಾಲೂರದೆ ಅನುಭವಿಸುವ
ರಂಗುರಂಗಿನ ಸುಖವನ್ನಲ್ಲ.
ಮಣ್ಣ ಕುದುರಿನಲ್ಲಿ

ಹಸಿರುದನವನ್ನು ಬೆಳೆಸುವ ಬೀಜಗಳನ್ನು
ಚೆಲ್ಲಿದ ಬೆವರ ಬೆಲೆಯನ್ನು ಗುರ್ತಿಸುವ
ಫಲಿತವನ್ನು.

●

# ಪ್ರವಾಹ ರೂಪದಲ್ಲಿ ನಾನು

ನಿಶ್ಶಬ್ದ ಹಿಮ ನಿರ್ಝರಿಯಂತೆ
ನನ್ನಲ್ಲಿ ನಾನು ಪ್ರವಹಿಸುತ್ತಿದ್ದೇನೆ.
ಯಾರ ಮೇಲೋ ಎಗರಿಬೀಳುವ ಅಲೆಗಳು
ನನ್ನಲ್ಲಿ ಇಲ್ಲ.
ಎಂದೂ ನಾನು ಮೌನ ತೀರವನ್ನು ದಾಟಿಹೋಗಲಿಲ್ಲ,
ಅಂತರಂಗ ಗರ್ಭದಲ್ಲಿ ಸುಳಿತಿರುಗುವ
ನಿರ್ವೇದ ತೆರೆಗಳನ್ನು
ಕಹಿಗುಳಿಗೆಗಳಾಗಿ ನುಂಗಿಕೊಳ್ಳುತ್ತೇನೆ.
ಆ ನಿರ್ವೇದ ವೈಯಕ್ತಿಕ ಅಲ್ಲ ಸಾಮುದಾಯಿಕ.
ನಾನು ಎಂದೋ ಗೀಚಿಕೊಂಡ ಚಿತ್ರವೇನಾ
ನನ್ನ ಕಣ್ಣಮುಂದಿರುವ ಈ ಸಮಾಜ,
ಅಸಲು ಚಿತ್ರವನ್ನು ಯಾರೋ ಅಪಹರಿಸಿ
ಅದಕ್ಕೆ ಬದಲಾಗಿ ಅಂಟಿಸಿದ ನಕಲಿ ಚಿತ್ರ ಇದು.
ವಂಚನೆ ಎಂದು ತಿಳಿದು
ವಾಸ್ತವವೆಂದು ಅದನ್ನು ಹೇಗೆ ಸ್ವೀಕರಿಸಲಿ ?
ಇದು ಅಕ್ರಮವೆಂದು ದನಿಯೆತ್ತಿ ಕಿರುಚಬೇಕೆಂದುಕೊಳ್ಳುತ್ತೇನೆ.
ಹಾಗೆ ಜರುಗಿದರೆ
ನಾನೇ ಸ್ವತಃ ವಿಧಿಸಿಕೊಂಡ ಮೌನ ನಿಬಂಧನೆಯನ್ನು
ಉಲ್ಲಂಘಿಸಿದಂತಾಗುವುದೇ ?
ಅದಕ್ಕೇ ಟಪಟಪನೆ ಬಡಿದುಕೊಳ್ಳುವ ರೆಕ್ಕೆಗಳನ್ನು ಮುದುಡಿಕೊಂಡು
ನನ್ನಲ್ಲಿ ನಾನು ಪ್ರವಹಿಸುತ್ತಿರುತ್ತೇನೆ.
ಆ ಪ್ರವಾಹದಲ್ಲಿ
ಮುಷ್ಠಿಬಿಗಿಸಿದ ಧರ್ಮಾಗ್ರಹ ಇದೆ.
ವಿಶ್ರಮಿಸದ ತೀವ್ರಗತಿಯಲ್ಲಿ ಅದು ವಿಶ್ವಸಿಸುತ್ತದೆ.

ಆ ನಿಶ್ವಾಸಗಳಲ್ಲಿ ಅಂತರ್ನಿಹಿತವಾಗಿ
ನಿರಸನ ಸ್ವರ ಝುಂಝೂಗಳಿವೆ.
ಯಾವ ಪ್ರವಾಹವಾದರೂ ದಡವನ್ನು ಸೀಳಿಕೊಂಡು ಹೋದರೆ
ಜಳ ಪ್ರಳಯವೇ.
ಇದು ಪ್ರಕೃತಿ ಮಾಡುವ ಎಚ್ಚರಿಕೆ
ಈ ಪ್ರಮಾದ ಸಮಾಜಕ್ಕೆ ವರ್ತಿಸುತ್ತದೆಂದು
ನಾನು ಸೇರಿಸುವ ಪಾದ ಸೂಚಿಕೆ.

●

## ಹನಿಯೇ ಅಲ್ಲವೆ ಎಂದುಕೊಳ್ಳಬೇಡ

ಹನಿ
ಸುರಿಯುವ ಕುಂಭವೃಷ್ಟಿಗೆ ಚೊಚ್ಚಲ ನುಡಿ.
ಹನಿ ಮೇಲೆ ಹನಿ
ಹೆಜ್ಜೆಯೊಂದಿಗೆ ಹಾಕುವ ಹೆಜ್ಜೆ.
ಪರಿಣಾಮ
ಸುದೀರ್ಘ ವರ್ಷಾಯಾನ.
ಉರಿಬಿಸಿಲಿನಲ್ಲಿ ಪೊಡವಿ ಮೇಲೆ ಬೀಳುವ
ಮೊದಲಹನಿ
ಆತ್ಮೀಯತೆಯನ್ನು ಸಿಂಪಡಿಸುವ ತಣ್ಣನೆ ಸವಿನುಡಿ.
ಅದು ಸಾಕು
ಮಾತೃಭೂಮಿ ಪ್ರಾಣಗಳು ಎದ್ದುಬರುತ್ತವೆ.
ಮಣ್ಣಿಗೆ ಹನಿ ಹೊಸದಲ್ಲ
ಮರಕ್ಕೆ ಚಿಗುರಿನಂತೆ.
ಚಿಗುರನ್ನು ತೊಟ್ಟಾಗಲೆಲ್ಲಾ ಮರಕ್ಕೆ ಉಂಟಾಗುವ
ಅನಿರ್ವಚನೀಯವಾದ ಅನುಭೂತಿ
ಮಣ್ಣನ್ನು ಕೇಳಿದರೆ ಹೇಳುತ್ತದೆ.
ಹನಿಯಾದರೂ ಚಿಗುರಾದರೂ
ಕ್ರಮಪರಿಣತಿಗೆ ಸೃಷ್ಟಿ ತಿದ್ದಿಕೊಳ್ಳುವ ಬೀಜಾಕ್ಷರಗಳು.
ಅಕ್ಷರಗಳು ಶಬ್ದಗಳಾದರೆ
ಒಂದು ವಾಙ್ಮಯ ಜಗತ್ತು ರೂಪುಗೊಳ್ಳುತ್ತದೆ.
ಹನಿಗಳು ಜಲಧಾರೆಗಳಾದರೆ
ಒಂದು ಎಲೆಹಸಿರ ಲೋಕ ಉದ್ಭವಿಸುತ್ತದೆ.
ಚಿಗುರುಗಳು ಮೊಗ್ಗುಗಳಾದರೆ
ಒಂದು ಪುಷ್ಪಮಂಡಲ ಅರಳಿಕೊಳ್ಳುತ್ತದೆ.

ಹನಿಯೇ ಅಲ್ಲ ಎಂದು ಸಣ್ಣ ನೋಟ ಬೀರಬೇಡ
ಹನಿ ಹನಿ ಕೂಡಿ ಸುರಿದರೆ
ಮಳೆಯಾಗುತ್ತದೆ.
ವ್ಯಕ್ತಿ ವ್ಯಕ್ತಿ ಕೂಡಿ ಪುರೋಗಮಿಸಿದರೆ
ಚಳವಳಿಯಾಗುತ್ತದೆ.

●

## ಅನಿರ್ವಚನೀಯ

ಆ ದೃಶ್ಯವನ್ನು ಹಾಗೇ ಇರಗೊಡಿಸುತ್ತಾರಾ ?
ಎಷ್ಟು ಹಸಿವುಗೊಂಡ ನೋಟಗಳು ಅದನ್ನು ಅಪಹರಿಸುತ್ತವೋ
ಎಷ್ಟು ಮಸಿಹಿಡಿದ ಮನಸ್ಸುಗಳು ಕಲುಷಿತ ಮಾಡುತ್ತವೆಯೋ.
ಹೀಗೆ ನನ್ನನ್ನು ಮಾತನಾಡಿಸುತ್ತಿರುವುದು ಯಥಾರ್ಥವೇ
ಆ ದೃಶ್ಯದ ಬಗ್ಗೆ ನನಗಿರುವ ತಾದಾತ್ಮ್ಯವೇ.
ಪ್ರಕೃತಿ ತನ್ನ ಕೈಯಿಂದ ರೂಪುಗೊಂಡ
ಆ ದೃಶ್ಯರೂಪಕ ಚಿತ್ರ
ನೋಟಗಳ ದಾಳಿಗೆ ಕಮರಿಹೋಗುವುದು ಅಲ್ಲ.
ಸೃಷ್ಟಿ ತೆಗೆದುಕೊಳ್ಳುವ ಕೊನೆಉಸಿರಿನವರೆಗೆ
ಅದು ಸ್ಥಿರವಾಗಿರುತ್ತದೆ.
ಉದಯ ಸೂರ್ಯಬಿಂಬವನ್ನು ಯುಗಯುಗಗಳಿಂದ
ಕೋಟಿಗಟ್ಟಲೆ ನೇತ್ರಗಳು ಕುಡಿಯುತ್ತಲೇ ಇವೆ
ಒಂದು ಕಿರಣಬಿಂದುವಾದರೂ ಕಡಿಮೆಯಾಗಿದೆಯಾ ?
ನೋಡುತ್ತಿರುವಾಗಲೇ ಅಲ್ಲ
ಕಣ್ಣೆರಡೂ ಮುಚ್ಚಿಕೊಂಡಿರುವಾಗಲೂ ಕೂಡಾ
ಆ ಮನೋಜ್ಞ ದೃಶ್ಯ ತುಟಿಗಳ ಮೇಲೆ
ಸೃಷ್ಟಿಕರ್ತನ ಮಂದಹಾಸ ಮೆರೆಯುತ್ತಲೇ ಇರುತ್ತದೆ.
ಏನೋ ಹೇಳಬೇಕೆಂದುಕೊಂಡ ನನ್ನ ಲೇಖನಿ ಕಂಠ
ಹಠಾತ್ತನೆ ಮೂಕಗೊಂಡಾಗ
ಅದು ನನ್ನ ಎದುರು
ಪದ ಚಿತ್ರಗಳ ತೋರಣಗಳನ್ನು ಕಟ್ಟುತ್ತದೆ.
ನನ್ನ ಮಾನಸ ಸರೋವರದಲ್ಲಿ
ಅವ್ಯಕ್ತ ಕವಿತಾಕೃತಿಯನ್ನು ಕಲಹಂಸವಾಗಿ ನಡೆಸುತ್ತದೆ.
ಯಾವುವೋ ಹೊಗೆಗಳು ಗುಪ್ಪನೆ ಎದ್ದು ತನ್ನನ್ನು
ಕವಿದುಕೊಂಡಾಗ

"ಕಳವಳಪಡಬೇಡ
ನಾನು ತೊಳೆದ ಕನ್ನಡಿಯಂತೆ
ಸ್ವಚ್ಛವಾಗಿದ್ದುಬಿಡುತ್ತೇನೆ" ಎಂದು
ನನ್ನನ್ನು ಸಂತೈಸುತ್ತದೆ.
ಇಷ್ಟಕ್ಕೂ ಅದು ಯಾವ ದೃಶ್ಯವೆಂದು ಕೇಳಿದರೆ
ಹೇಗೆ ಹೇಳಲಿ ?
ಅದು ಮಾತಿಗೆಟುಕದ್ದು
ಪರವಶಿಸಿ ವೀಕ್ಷಿಸುವ ಅಂತರಂಗಕ್ಕೆ ತಪ್ಪ.

●

## ಅದಕ್ಕದೇ

ಊಹೆಗೆಟುಕದ ದೂರಾಬಾರದಲ್ಲಿ
ನೀಲಿ ಮೋಡಗಳು ಬಸಿಯುವ ವಿಶಾಲಗಗನವನ್ನು
ನನ್ನ ಕೊಠಡಿಯಲ್ಲಿ ನೋಡಬೇಕೆಂದು
ನೇತ್ರಗಳಿಗೆ ಚಿರಕಾಲ ವಿಚಿತ್ರ ತಪನ.
ಆ ಬಯಕೆ ತೀರಿಸಿಕೊಳ್ಳುವುದಕ್ಕೆ
ಗಗನಕ್ಕೆ
ಆಹ್ವಾನಪತ್ರ ಕಳುಹಿಸಿದೆ.
"ಅಬ್ಬೋ ಅದ್ಹೇಗೆ ಸಾಧ್ಯವಾಗುತ್ತದೆ ?
ನಾನು ಇಲ್ಲದಿದ್ದರೆ
ಸೂರ್ಯಚಂದ್ರ ತಾರಾಮಂಡಲಗಳು
ಯಾವ ದಿಕ್ಕಿಲ್ಲದ ಅನಾಥರಾಗುತ್ತವೆ.
ಸಾಧ್ಯವಿಲ್ಲ" ಎಂದ ಆಕಾಶವನ್ನು
ಶಿಶುವಿನಂತೆ ಹಟಮಾಡಿ ಕಡೆಗೆ ಒಪ್ಪಿಸಿದೆ.
ನನ್ನ ಕೊಠಡಿಯೊಳಕ್ಕೆ ಬಂದ ಮರುಕ್ಷಣದಲ್ಲದು ಉಸೂರ್ ಎಂದಿದೆ.
ಪರಿತಪಿಸಿ ಹೋಗಿದೆ.
"ಇಲ್ಲಿ ನನಗೆ ಉಸಿರಾಡುತ್ತಿಲ್ಲ.
ಯಂತ್ರದಿಂದ ಉತ್ಪತ್ತಿಯಾಗುತ್ತಿರುವ ಈ ತಂಪುತನ
ಎಷ್ಟು ಕೃತಕವಾಗಿದೆ.
ಇಲ್ಲಿ ನಾನಿರಲಾರೆ" ಎನ್ನುತ್ತಾ ಚಂಗನೆ ಮೇಲಕ್ಕೆ ಹಾರಿಹೋಗಿದೆ.
ಕೆಲವು ದಿನಗಳ ತರುವಾಯ ಗಗನವೇ ನನಗೆ ಕರೆ ಕಳುಹಿಸಿದೆ
ತನ್ನೊಂದಿಗೆ ಒಂದು ಹೊತ್ತು ಇದ್ದು ಹೋಗೆಂದು.
ಅದಕ್ಕಿಂತ ಬೇಕಾಗಿದ್ದೇನಿದೆ.
ಹೋಗಿ ನೋಡಿದರೆ ಏನಿದೆ ಅಲ್ಲಿ ?
ಭರಿಸಲಾರದ ಒಂಟಿತನದ ಒತ್ತಡ.
ಮಾತನಾಡಿಸೋಣವೆಂದುಕೊಂಡರೆ

ನೆಲದ ಮೇಲೆ ಇದ್ದಾಗ ನನ್ನನ್ನು ಇಷ್ಟಪಟ್ಟ
ಒಂದು ತೊಟ್ಟಾದರೂ ನನ್ನ ಪಕ್ಕಕ್ಕೆ ಬಾರದೆ,
ಯಾರಲ್ಲಿ ಎಂದು ಕೂಗಿ ಕರೆದೆ.
ನನ್ನ ಸ್ವರವೇ ನನ್ನನ್ನು ಹಂಗಿಸಿದೆ
ಯಾರಲ್ಲಿ ಯಾರಲ್ಲಿ ಎಂದು.
ನನ್ನ ಶಿರಸ್ಸಿನಲ್ಲಿ ಚಕ್ರಗಳು ಗಿರಗಿರನೆ ತಿರುಗಿದಸದ್ದು.
ಏನಾಗಿಹೋದೆ ?
ನನ್ನನ್ನು ನಾನೇ ಕಳೆದುಕೊಂಡೆನಾ ?
ಇನ್ನು ಲಾಭವಿಲ್ಲ
ಹಾಗೆ ಅಂದುಕೊಂಡೆನೋ ಇಲ್ಲವೋ
ನನ್ನ ಕೊಠಡಿಯಲ್ಲಿ ಹೂವಿನಂತೆ ಉದುರಿಬಿದ್ದೆ
ಹಾರಿಹೋಗುವ ಪ್ರಾಣಗಳೂ
ನನ್ನ ಮೈಗೂಡಿಗೆ ಭದ್ರವಾಗಿ ಸೇರಿಕೊಂಡಿವೆ.
ಮೇಲಿನ ಘಟನೆಗಳು ನನಗೆ ಕಲಿಸಿದ ಪಾಠಗಳು ಎರಡು.
ಒಂದು – ಕೊಠಡಿಯಲ್ಲಿ ಗಗನ ಅಡಕವಾಗದೆಂದು
ಎರಡನೆಯದು – ಕೊಠಡಿಯಲ್ಲಿನ ಪ್ರಾಣಿಗೆ
ಗಗನದಲ್ಲಿ ಬದುಕು ಇಲ್ಲವೆಂದು.

●

# ಅಕ್ಷರ

ಅದು ಅಕ್ಷರ,
ಅದೇ ಚಿಗುರೊಡೆದರೆ ಶಬ್ದವಾಗುತ್ತದೆ.
ಬಳ್ಳಿ ಸಾಗಿದರೆ ವಾಕ್ಯವಾಗುತ್ತದೆ.
ಹಂದರದಷ್ಟು ವಿಸ್ತರಿಸಿದರೆ ಗ್ರಂಥವಾಗುತ್ತದೆ.
ಸಮಸ್ತ ವಾಗ್ಮಯ ಸೃಷ್ಟಿಗೆ ಬೀಜರೂಪ
ಅಕ್ಷರವೇ.
ಬೀಜವೇ ತಾನೆ ಎಂದು ಉಪೇಕ್ಷಿಸಿದರೆ
ಕೊಂಬೆಗಳು ರೆಂಬೆಗಳು ಬಿಳಚಿಕೊಳ್ಳುತ್ತವೆ.
ನಾಟಿಕೊಂಡು ಹೋದ ವೃಕ್ಷಗಳ ಕುದುರುಗಳು ಕದಲಿಹೋಗುತ್ತವೆ,
ವಿಶ್ವಚಕ್ರವನ್ನು ತಿರುವುತ್ತಿರುವ ಮಾನವನು ಸಹ
ಅಕ್ಷರದಷ್ಟು ಬೀಜಬಿಂದುವಿನಿಂದ
ಆವಿರ್ಭವಿಸಿದವನೇ.
ಸಂಸ್ಕೃತಿ ತಿದ್ದಿಕೊಂಡ ಮೊದಲ ರೇಖೆ ಅಕ್ಷರ.
ನಾಗರಿಕತೆಗೇ ಪಾಠಗಳು ಕಲಿಸಿದ
ಆಚಾರ್ಯ ಪೀಠ ಅಕ್ಷರ.
ಪ್ರಾಥಮಿಕ ದೆಸೆಯಲ್ಲಿ ಅಕ್ಷರ ಚಿಕ್ಕದೇ ಆದರೂ
ವಯಸ್ಸಿನೊಂದಿಗೆ ಮನಸ್ಸಿಗೆ ಉಂಟಾಗುವ ಪರಿಣತಿಗೆ
ಅದು ಅಳತೆಗೋಲು.
ಯಾರು ಎಷ್ಟು ಬೆಳೆದರೂ
ಅಕ್ಷರಗಳೊಂದಿಗೆ ಆರಾಮವಾಗಿ ಆಡಿಕೊಂಡರೆ
ಅದು ಬಾಲಲೀಲೆ.
ಜಿಹ್ವೆಗೆ ಕಿವಿಗೂಡಿಸುವುದು ಅಕ್ಷರವೇ.
ಆ ಜಿಹ್ವೆಗೆ
ಆಯುಧವಾಗಿ ಪ್ರಯೋಗಿಸುವುದು ಅಕ್ಷರವೇ.

ಮೆಲುದನಿಯಲ್ಲಿ ಕಿವಿಗಳನ್ನು ಸ್ಪರ್ಶಿಸುವ ಅಕ್ಷರ
ಸುಮನೋಹರ ನಾದವಾಗುತ್ತದೆ.
ಅದೇ ಎದುರುತಿರುಗಿ ಗರ್ಜಿಸಿದರೆ
ಕ್ರಾಂತಿ ಗೀತೆಯಾಗುತ್ತದೆ.
ಅಕ್ಷರಕ್ಕಿರುವ ಆ ಎರಡಂಚುಗಳನ್ನು ಗುರ್ತಿಸಿದರೆ
ವಿಜ್ಞಾನಕ್ಕೆ ಮಾನವತಾ ವಿಕಾಸಕ್ಕೆ
ವಿರಮಣವಿಲ್ಲ
ಮನುಷ್ಯನಿಗೆ ಒಡಹುಟ್ಟಿದ ಆ ಅಕ್ಷರ ಶಕ್ತಿಗೆ
ಮರಣವಿಲ್ಲ.

●

## ಕೂಡಿ ನಡೆವ ಲೇಖನಿ

ನಿದ್ರಿಸುತ್ತಿರುವಾಗಲೂ ಕೂಡ
ನನ್ನ ಲೇಖನಿ ನನ್ನನ್ನು ಹಿಂಬಾಲಿಸುತ್ತಲೇ ಇರುತ್ತದೆ.
"ಅತ್ತ ನೋಡಿ
ಬಿಳಿಹಾಳೆಗಳು ಹೇಗೆ ಕನವರಿಸುತ್ತಿವೆಯೋ" ಎಂದು
ನನ್ನ ಬೆನ್ನು ತಟ್ಟುತ್ತಿರುತ್ತದೆ.
ಮತ್ತೆ ಆ ಲೇಖನಿಗೆ ವಿಶ್ರಾಂತಿ ಇಲ್ಲವೇ ?
ಇಲ್ಲದೆಯೇನು ?
ಒಂದು ಕವಿತೆ
ಕಾಗದಗಳ ತುಂಬಾ ಎಣೆದುಕೊಂಡ ತರುವಾಯ
ಅದು ಸ್ವಲ್ಪ ಜೋಮುತೆಗೆಯುತ್ತದೆ.
ಕೂಡಲೇ ಮೈಕೊಡವಿ ಏಳುತ್ತದೆ.
ನನ್ನ ಖಾಲಿ ಕುರ್ಚಿಯನ್ನು ನೋಡಿ
ಯಾವಾಗ ತಿರುಗಿಬರುತ್ತೇನಾ ಎಂದು ಉಗುರು ಕಡಿದುಕೊಳ್ಳುತ್ತದೆ.
ನಾನು ಕಾಣಿಸುತ್ತಲೇ
ಅದಕ್ಕೆ ಪ್ರಾಣ ಎದ್ದುಬರುತ್ತದೆ.
ಲೇಖನಿಗೆ ನನಗೆ ಇರುವ ಬಂಧ ಆಬಾಲ್ಯ
ಅಮೂಲ್ಯ.
ವಯಸ್ಸು ಪ್ರಾಪ್ತವಾಗುವ ಮೊದಲೇ
ಅದು ನನ್ನ ಕೈಯಿಂದ ಅಕ್ಷರಗಳ ನಾಟಿಹಾಕಿಸಿದೆ.
ನನ್ನ ಪ್ರಾಯಕ್ಕೆ ಪ್ರೌಢದೆಶೆ ಗರಿಬಿಚ್ಚುವ ವೇಳೆಗೆ
ಹಾಡುಗಳ ಫಸಲನ್ನು ಗಾಡಿಗೇರಿಸಿದೆ.
ಗ್ರಂಥಗಳ ರಾಶಿಗಳನ್ನು ಕಣಜಗಳ ತುಂಬಾ ತುಂಬಿದೆ.
ನನ್ನ ಜೀವನಯಾತ್ರೆಯಲ್ಲಿ
ವರ್ಷಗಟ್ಟಲೆ ನನ್ನೊಂದಿಗೆ ಕೂಡಿ ನಡೆಯುತ್ತಿರುವ ಲೇಖನಿ
ಎಂದೂ ಬಳಲಿಹೋಗಲಿಲ್ಲ.

ಈ ಸಹಯಾನ
ಎಷ್ಟುಕಾಲ ಹೀಗೆ ಸಾಗುತ್ತದೋ ಎಂದು
ಒಳಗೊಳಗೆ ನುಡಿಯುತ್ತಿರುವ ನನ್ನ ಸ್ವರವನ್ನು ಕೇಳಿದ ಲೇಖನಿ
ಆರ್ದ್ರ ಕಂಠದಿಂದ ಹೀಗೆ ಅಂದಿದೆ
"ಇನ್ನೂ ಎಷ್ಟು ಕಾಲವೆಂದು ಅಂದಿರಲ್ಲಾ
ಅಶುಭವೆಂದು ನೀವಂದುಕೊಳ್ಳದಿದ್ದರೆ ಕೇಳಿ
ಆ ಗಳಿಗೆಯೆಂಬುದು ಬಂದರೆ
ನಿಮ್ಮ ಕೊನೆ ಉಸಿರನ್ನು ನನ್ನೊಳಕ್ಕೆ ಸೇದಿಕೊಂಡು
ಅದರಲ್ಲಿ ನಿಮ್ಮ ಕವಿತಾಮೂರ್ತಿಯನ್ನು ಪ್ರತಿಷ್ಠಿಸಿಕೊಂಡು
ಈ ಜನ್ಮಕ್ಕೆ ಇದಕ್ಕಿಂತ ಮತ್ತೇನು ಬೇಕೆಂದು
ನಿಶ್ಚಿಂತೆಯಿಂದ ಕಣ್ಣು ಮುಚ್ಚುತ್ತೇನೆ –
ನಿಟ್ಟುಸಿರು ಬಿಡುವ ಬಿಳಿಹಾಳೆಗಳ ಸಾಕ್ಷಿಯಾಗಿ."
ಅಷ್ಟೆ.
ಇಷ್ಟರಲ್ಲಿ ಈ ರಚನೆ ಮುಗಿದಿದೆ.
ಲೇಖನಿ ಮಾತ್ರ
ನಿಶ್ಚಲ ಧ್ಯಾನ ಮುದ್ರೆಯಲ್ಲಿ ನನ್ನೆದುರು ನಿಂತಿದೆ.

●

## ಹರಿತವೆಷ್ಟೋ ತಿಳಿಯಬೇಕೆಂದರೆ

ಬುದ್ಧಿಗೆ ಕೆಲಸ ನೀಡುವ ಸರಕು ಬೇಕೆಂದರೆ
ತೆಗೆದುಕೊಳ್ಳಿ
ನನಗೆ ಸ್ಫುರಿಸಿದ ಒಂದು ಬುಟ್ಟಿ ಜೀವನ ನಿರ್ವಚನಗಳನ್ನು
ನಿಮ್ಮ ಮುಂದೆ ಇಡುತ್ತಿದ್ದೇನೆ.
ಅವುಗಳಲ್ಲಿ ಜಳ್ಳು ಯಾವುದೋ ಬೀಜಯಾವುದೋ
ಜಲ್ಲಡಿ ಹಿಡಿಯುವ ನಿಮ್ಮ ವಿವೇಚನೆಗೇ ಬಿಟ್ಟುಬಿಡುತ್ತಿದ್ದೇನೆ.
ಎಟುಕಿದ ಪ್ರತಿಯೊಂದು
ಅರ್ಹವಾದದ್ದು ಅಲ್ಲದಿರಬಹುದು
ಕಚ್ಚಿ ನೋಡಿದರಲ್ಲವೇ
ಅದು ಕಾಯೋ ಹಣ್ಣೋ ಎಂದು ತಿಳಿಯುವುದು.
ತಾರ್ಕಿಕ ಸೂತ್ರಗಳ ಪರಿಧಿಯೊಳಕ್ಕೆ ಬಾರದ ಹೊರತು
ಹೆಣೆದುಕೊಂಡ ಆಲೋಚನೆಗಳ ನಾಣ್ಯತೆ ತಿಳಿಯದು
ಎಂಥಾ ಬಂಗಾರವಾದರೂ
ಗುಣಮಟ್ಟ ತಿಳಿಯುವುದು ಓರೆಗಲ್ಲಿನಿಂದಲೇ ಅಲ್ಲವೆ.
ಬುದ್ಧಿ ಇದೆಯಲ್ಲಾ ಎಂದು ಅದನ್ನು
ಮೆದುಳ ಪೆಟ್ಟಿಗೆಯಲ್ಲಿ ದಿನಗಳಗಟ್ಟಲೆ ಮಡಚಿಟ್ಟರೆ
ಸುಕ್ಕುಗಟ್ಟಿ ಹೋಗುತ್ತದೆ.
ಬಿಚ್ಚುಗತ್ತಿಯಂತೆ ಇದ್ದಾಗಲೇ ಅದು
ಹರಿತ ಹರಿತವಾಗಿ ಹೊಳೆಯುತ್ತದೆ.
ಕೆಲ ಕೆಲವು ನಿರ್ಣಯಗಳು
ತೆಗೆದುಕೊಂಡವರಿಗೆ ಚೆನ್ನಾಗಿಯೇ ಇರುತ್ತದೆ.
ಹೆತ್ತವರಿಗೆ ತನ್ನ ಮಕ್ಕಳು ಮುದ್ದಾಗಿಯೇ ಇರುತ್ತಾರಲ್ಲ.
ಯಾವ ಪೀಠದಿಂದ ಹೊರಬಿದ್ದ ತೀರ್ಪುಗಳಾದರೂ
ಸಮಕಾಲೀನ ಸಮಾಜ ವಿಧಿಸುವ ಪರೀಕ್ಷೆಗಳಿಗೆ
ತಡೆದುಕೊಂಡರೆ ವಿನಹ ಅವಕ್ಕೆ ಚಲಾವಣೆ ಇರದು.

ಎದುರೀಜಿ ಸಾಗಿದಾಗಲಲ್ಲವೇ
ಕಂಡಗಳ ಬಿಗಿಯೆಷ್ಟೋ ಹೊರಬೀಳುವುದು.
ಎದುರುತಿರುಗಿ ನಿಂತಾಗಲಲ್ಲವೇ
ಗುಂಡಿಗೆಯ ದಿಟ್ಟತನವೆಷ್ಟೋ ರುಜುವಾತು ಆಗುವುದು.

●

## ಸಮನ್ವಯಿಸಿಕೊಂಡರೆ

ಮನೆ ಪಕ್ಕದಲ್ಲಿ ಭವನ ನಿರ್ಮಾಣ ನಡೆಯುತ್ತಿದ್ದರೆ
ಉದ್ಭವಿಸುವ ದುರ್ಭರ ಧ್ವನಿಯ ದಾಳಿಗೆ
ಇಲ್ಲಿರುವ ಕಿವಿಗಳು ತಡೆದುಕೊಳ್ಳದಿರಲಾಗದು.
ಅಸ್ತಮಾನ ನಾವು ಕೇಳಬೇಕೆಂದುಕೊಳ್ಳುವುದು
ಸುಶ್ರಾವ್ಯ ಶ್ರುತಿಗಳೇನಾ,
ಶ್ರುತಿ ಇರುವಾಗ ಅಪಶ್ರುತಿ ಇಲ್ಲದಿರಲಾಗದು.
ಪ್ರತಿ ಜೀವಿತ ಅನುಭವಿಸುವುದು
ಪರಸ್ಪರ ವಿರುದ್ಧ ಫಲಿತಗಳ ಸಂಪುಟವನ್ನೇ.
ಪ್ರಪಂಚವೆಂದರೆ
ಮಲಗುತ್ತಲೇ ನಿದ್ರೆಯನ್ನು ಕಣ್ಣಿಗಂಟಿಸುವ ಹವಾವಿಯಂತ್ರಣಕೊಠಡಿ ಅಲ್ಲ.
ಬೀದಿಗೀಳಿದರೆ ಹಿಂಬಾಲಿಸುತ್ತಿರುತ್ತವೆ
ಅನೂಹ್ಯವಾಗಿ ರಗಡಿಕೊಳ್ಳುವ ಹೊಗೆಯಂಥ ಸೆಕೆ.
ಕೆಲವನ್ನು ಕಬಳಿಸಬೇಕು
ಕೆಲವಕ್ಕೆ ಅತೀತವಾಗಿ ಜೀವಿಸಬೇಕು.
ತನ್ನ ತಲೆಯನ್ನು ಉಳಿ ನಿರ್ದಾಕ್ಷಿಣ್ಯವಾಗಿ ಕೆತ್ತುತ್ತಿರುವಾಗ
ಹೇಗೆ ಭರಿಸುತ್ತದೋ ಶಿಲೆ.
ಈ ಪ್ರಶ್ನೆಗೆ ಸಮಾಧಾನ ಹೇಳುವವರ್ಯಾರು ?
ನಾನು ಹೇಳುತ್ತೇನೆ ಕೇಳು ಅನ್ನುತ್ತಾ
ಮೂಡಣ ದಿಕ್ಕು ನುಡಿದಿದೆ
ತಾನು ಪ್ರಸವವೇದನೆ ಸಹಿಸುವುದು
ಸೂರ್ಯೋದಯಕ್ಕಾಗಿಯೆಂದು
ಶಿಲೆ ಗರ್ಭಕ್ಷೋಭೆ ಭರಿಸುವುದು
ಶಿಲ್ಪೋದಯಕ್ಕಾಗಿಯೆಂದು
ಹೀಗೆ ಸಮನ್ವಯ ಸೂತ್ರವನ್ನು ಸಂಧಿಸಿನೋಡಿದರೆ

ಈ ಎರಡು ಕುರುಹುಗಳು
ಮಾನವ ಜೀವನ ಬಿಂಬದಲ್ಲಿನ ಉಭಯ ಪಾರ್ಶ್ವಗಳಿಗೆ
ಅಳತೆಗೋಲುಗಳು.

●

## ಉಪೇಕ್ಷಿಸಿದರೆ ಅಷ್ಟೇ

ಇದು ನಿದ್ರೆ ಅಲ್ಲ.
ಎಚ್ಚರದಲ್ಲಿ ಸ್ಫುರಿಸದ ಆಲೋಚನೆಗಳನ್ನು ನಿರ್ಮಿಸುವ
ಅದೃಶ್ಯದ ಕರ್ಮಾಗಾರ.
ಈ ಮೌನ
ಹರಿತ ಇಳಿಯುತ್ತಿರುವ ಶಬ್ದಗಳಿಗೆ ಸಾಣೆಯಿಡುವ
ಪ್ರಯೋಗಶಾಲೆ.
ಯಾವಾಗಲೂ ಸಿಡಿಯುತ್ತಿರುವ ಶಬ್ದಗರ್ಭಕ್ಕಿಂತ
ಮುಷ್ಟಿಬಿಗಿಸಿ
ತೀಕ್ಷ್ಣವಾಗಿ ಸೃಷ್ಟಿಯನ್ನು ಸಮೀಕ್ಷಿಸುವ ಮೌನದಲ್ಲಿ
ಕಂಪನವೆತ್ತಿಸುವ ರೌದ್ರಮುದ್ರೆಗಳಿವೆ.
ಇವು ಭೌತಿಕ ದೃಷ್ಟಿಯಿಂದ ಪಡೆದುಕೊಳ್ಳಬಲ್ಲ
ಪ್ರತ್ಯಕ್ಷ ಪ್ರಮಾಣಗಳು ಅಲ್ಲ.
ಮಸ್ತಿಷ್ಕ ಅಳತೆಗೋಲಿನಲ್ಲಿ ಅಳೆದು ನೋಡುವುವು.
ಇದು ಮರವೇ ತಾನೆ ಎಂದು ಅಂದುಕೊಳ್ಳಬೇಡ.
ನಿಗ್ರಹಿಸಿಕೊಂಡ ಆಗ್ರಹದ ಅಂಚುಗಳನ್ನು ಮುಟ್ಟಿದರೆ
ಅದು ತಾನು ಹೊದ್ದುಕೊಂಡ ಎಲೆಗಳನ್ನು ತಟ್ಟನೆ ಉದುರಿಸಿ
ನಿರಸನ ಪ್ರದರ್ಶಿಸುತ್ತದೆ.
ನೀರೇ ಅಲ್ಲವೇ ಎಂದು ಸಣ್ಣನೋಟ ನೋಡಿದರೆ ಪ್ರಮಾದ.
ನೀರಿಗೆ ಮೈ ಉರಿದಿದೆಯಾ
ಕೆಂಡಗಳನ್ನು ಮುಕ್ಕಳಿಸುತ್ತದೆ
ಕಟ್ಟೆಗಳನ್ನು ಕಬಳಿಸುತ್ತದೆ.
ಕೆಳ ವರ್ಗಗಳೇ ತಾನೆ
ಹೇಗೆ ತಿರುಗಿಸಿದರೆ ಹಾಗೆ ತಿರುಗುತ್ತವೆಂದುಕೊಳ್ಳಬೇಡ.
ಆ ಹೆಜ್ಜೆಗಳೇ ತಡೆದುಕೊಳ್ಳಲಾಗದೆ ತಿರುಗಿಬಿದ್ದರೇ
ಸಮಸ್ತ ಶರೀರ ವ್ಯವಸ್ಥೆಗೇ ತಪ್ಪದು

ಪತನಾವಸ್ಥೆ,
ತಾನು ಹೆಣೆದುಕೊಂಡ ಜೇಡರಬಲೆಯಲ್ಲಿ ತಿರುಗುವ
ಲಘುಮತಿಗಳು ವಿಸ್ತರಿಸಿದರೆ ವಿನಹ
ವಿಶ್ವಜನೀನ ದೃಕ್ಪಥಗಳ ವೈಶಾಲ್ಯ ತಿಳಿಯದು.
ಪಶು ಪಕ್ಷ್ಯಾದಿಗಳು ಆಶಿಸುವುದು ಭುಕ್ತಿಯನ್ನೇ.
ಆ ಪಂಕ್ತಿಯಲ್ಲಿನವರು ಅಲ್ಲವಲ್ಲಾ ಬುದ್ಧಿಜೀವಿಗಳು,
ಭುಕ್ತಿಯೊಂದಿಗೆ
ಸುನಿಶಿತ ಮೇಧಾಶಕ್ತಿಯನ್ನು ಬೆಳೆಸಿಕೊಂಡಾಗಲೇ
ಆ ಜನ್ಮಕ್ಕೆ ಸಾರ್ಥಕತೆ
ನಿರ್ದೇಶಿಸಿಕೊಂಡವರ ಆಶಯಗಳಿಗೆ ಸಮಗ್ರತೆ.

●

## ಪೊರೆಗಳು ಬಿಚ್ಚಿ ನೋಡಿದರೆ

ಕತ್ತಲಲ್ಲಿ ನಡೆಯುವ ನನ್ನ ಕಾಲಿಗೆ ತಗುಲಿದ್ದು
ಹಗ್ಗವೇನೋ ಅಂದುಕೊಂಡೆ.
ಮೈಗೆ ವಿಷವೇರುವ ತನಕ ತಿಳಿಯಲಿಲ್ಲ
ಅದು ಹಾವೆಂದು.
ಲಘುವಾಗಿ ತೆಗೆದುಹಾಕುವ ಸಂಘಟನೆಗಳು ಕೆಲವು
ಮನಸ್ಸನ್ನು ತೀವ್ರವಾಗಿ ಕಡಿಯುತ್ತವೆ.
ಅನೂಹ್ಯವಾಗಿ ಜರುಗುವ ವಿಷಮ ಪರಿಣಾಮಗಳು
ಎಷ್ಟಕ್ಕೂ ತೇವ ಬತ್ತದ ಹಸಿ ಎಚ್ಚರಿಕೆಯಾಗಿ
ಉಳಿದು ಹೋಗುತ್ತವೆ.
ಬಗ್ಗಿ ಬಗ್ಗಿ ನಮಸ್ಕರಿಸುವ ತಲೆಬುರುಡೆಗಳಲ್ಲಿ
ಹೊಂಚಿರುವ ಹೆಡೆಗಳನ್ನು ಗುರ್ತಿಸುವುದು ಹೇಗೋ
ಅನುಭವ ಸಂಪುಟದ ಪುಟಗಳನ್ನು ಕೇಳಿದರೆ ಹೇಳುತ್ತವೆ.
ಥಳಥಳಿಸುವ ಹೊನಲ ಎದೆಯಲ್ಲಿ
ಗುಪ್ತಶಿಲೆಗಳ ತಿಕ್ಕಾಟದಲ್ಲಿ ಉಂಟಾಗುವ ಗಾಯಗಳು
ಸಹನೆ ಮೂರ್ತಿಗಳ ವ್ಯಕ್ತಿತ್ವಗಳಿಗೆ ಪ್ರತೀಕಗಳಾಗಿ
ನಿಂತುಹೋಗುತ್ತವೆ.
ಪ್ರತಿ ಮನುಷ್ಯನಿಗೆ
ತನ್ನ ಜೀವನಗತಿಯಲ್ಲಿ ಹಾಕುವ ಒಂದೊಂದು ಹೆಜ್ಜೆ
ಒಂದು ಪಾಠ.
ಮರೆವಿನ ಮಡಿಕೆಗಳಿಗೆ ಒಳಗಾಗಿ
ಗತ ಪ್ರತಿಬಿಂಬವನ್ನು ಯಥಾತಥವಾಗಿ ಎದುರು ನಿಲ್ಲಿಸಿಕೊಳ್ಳಲಾಗದೆ
ಸುಮ್ಮನೆ ತಲೆಯನ್ನು ಹಿಂಡಿಕೊಳ್ಳುತ್ತಿರುತ್ತೇವೆ.
ನಾಳಿನ ಚಿತ್ರವನ್ನು ಬಿಡಿಸುವ ಅತ್ಯಾಶೆ
ಇಂದಿನ ಕಾಲ ರೇಖೆಗಳನ್ನೇ ಕೈಬಿಡುವ
ನಿರಾಶೆಯಾಗಿ ಉಳಿದುಹೋಗುತ್ತದೆ.

ನೀರಸಿಸಿದ ಪುರೋದೃಷ್ಟಿ
ಬಯಸಿದ ದೂರದ ಅಂಚುಗಳನ್ನು ಮುಟ್ಟಲಾಗದೆ
ಕುಸಿದು ಬೀಳುತ್ತದೆ.
ಈ ಜಾರುವಿಕೆಗೆ ಕಾರಣವೇನು ?
ಸಮಾಜದ ಅಂತರಂಗದ ಪೊರೆಗಳನ್ನು
ಅದಕ್ಕದೇ ಬಿಚ್ಚಿನೋಡಲಾಗದ ನಮ್ಮ ವಿವೇಕವೇ,
ಆ ವಿವೇಕ ಇತೋಧಿಕ ತೀಕ್ಷ್ಣತೆಯನ್ನು ಬೆಳೆಸಿಕೊಂಡರೆ
ನಮ್ಮ ಅಂಗಳದಲ್ಲಿ ಬಂದು ನಿಲ್ಲುತ್ತವೆ
ನಿರ್ದಿಷ್ಟ ಲಕ್ಷ್ಯಗಳ ಜ್ಯೋತಿಶ್ಶಿಖರಗಳು.

●

## ಅನುಭವಿಸದ ಹೊರತು

ಆಳವಾಗಿ ಪರಿಶೀಲಿಸಿದರೆ ಎತ್ತರದ ಬೆಟ್ಟಗಳು
ಧರಿತ್ರಿಯ ಆತ್ಮ ಸಮುನ್ನತಿಯನ್ನು ಮೇಲೆತ್ತಿ ಸಾರುವ
ನಿಶ್ಚಲ ಧ್ವಜಗಳಂತೆ ಕಾಣಿಸುತ್ತವೆ.
ಗಗನದೆಡೆಗೆ ಬಾಣಗಳಂತೆ ತೂರಿಹೋಗುವ
ಪಕ್ಷಿಗಳ ರೆಕ್ಕೆಗಳು
ಕೆಳವರ್ಗಗಳ ಗುಪ್ತ ಚೈತನ್ಯವನ್ನು ರೆಪರೆಪಲಾಡಿಸುವ
ಪ್ರತ್ಯಕ್ಷ ಪ್ರತೀಕಗಳಾಗಿ ನಿಲ್ಲುತ್ತವೆ.
ಒಮ್ಮೊಮ್ಮೆ ನಡುಬೀದಿಯಲ್ಲಿ ಗುಪ್ಪೆಂದು ಕವಿಯುವ
ಧೂಳಿಮೇಘಗಳು
ಅನೂಹ್ಯವಾಗಿ ಸಂಭವಿಸುವ ವಿಷಮ ಸಂಘಟನೆಗಳ
ಸಂಕೇತಗಳಾಗಿ ಉಳಿದುಹೋಗುತ್ತವೆ.
ಗ್ರಹಗತಿಗಳನ್ನು ಲೆಕ್ಕಮಾಡುವ ಗಣಾಂಕ ನಿಯಮಗಳಿಂದ
ಸಮಕಾಲೀನ ಸಾಮಾಜಿಕ ಪರಿಣಾಮಗಳ
ಮೂಲ್ಯಾಂಕನ ಮಾಡಲಾರೆವು.
ಅನುಭವಿಸದ ಹೊರತು
ಅವುಗಳ ನಿಜವಾದ ಆಂತರ್ಯ ಹೊರಬೀಳದು
ತಳದವರೆಗೆ ಮುಳುಗೇಳದ ಹೊರತು
ನೀರಿನಾಳ ತಿಳಿಯದಂತೆ.
ಕಾಣಿಸುವುದು ಅನ್ನಿಸುವುದು
ಯಾವುದರ ದಾರಿ ಅದರದೆ.
ಈ ಎರಡಕ್ಕೂ ಸಂಧಿ ಕುದರುವುದೆಂದರೇ
ಭೌತಿಕ ಶಕ್ತಿಗಳೂ ಮಾನಸಿಕ ಪ್ರವೃತ್ತಿಗಳೂ
ಕರಚಾಲನೆ ಮಾಡಿಕೊಂಡಂತೆಯೆ.
ಸಾರಾಂಶವೇನೆಂದು ಬೇರೆ ಹೇಳಬೇಕಾ ?

ಸಮಸ್ತ ಸೃಷ್ಟಿ ಚಲನ ರೀತಿಗಳಿಗೆ
ನಿಖರವಾದ ಅಳತೆಗೋಲು
ಸಮನ್ವಯ ಪ್ರಯಾಣವೇ ಅಲ್ಲವೆ !

●

# ಅವೇ ಪಕ್ಷಿಗಳು ಮತ್ತೊಂದು ಕೋನದಿಂದ

ಅದೇ ಪಕ್ಷಿಗಳು ಎನ್ನಲಾರೆ ಆದರೆ ಅಂಥಾಪಕ್ಷಿಗಳೇ.
ಎದುರು ಮನೆ ಛಾವಣೆ ಮೇಲೆ
ವರ್ಷಗಟ್ಟಲೆಯಿಂದ ನೋಡುತ್ತಲೇ ಇದ್ದೇನೆ.
ಬರಬರನೆ ಬಂದು ಕೆಲವು ನಿಮಿಷಗಳ ಕಾಲ
ಯೋಗಿಗಳಂತೆ ನಿಶ್ಚಲ ಮುದ್ರೆಯಲ್ಲಿ ಇದ್ದುಬಿಡುತ್ತವೆ.
ಅಷ್ಟರಲ್ಲೇ ಕೊರಳುಗಳನ್ನು ಅತ್ತಾ ಇತ್ತಾ ತಿರುವಿ
ದಿಕ್ಕುಗಳನ್ನು ತಮ್ಮ ಕಣ್ಣಿನೊಳಕ್ಕೆ ಇಳಿಸಿಕೊಳ್ಳುತ್ತವೆ.
ಯೋಗಿಗಳ ನಿಗ್ರಹ ಸತ್ವವನ್ನು
ವಿಯೋಗಿಗಳ ನಿರೀಕ್ಷಣ ತತ್ವವನ್ನು
ಏಕಕಾಲದಲ್ಲಿ ಅವು ತಮ್ಮಲ್ಲಿ ನಿಲ್ಲಿಸಿಕೊಳ್ಳುತ್ತವೆ.
ಬಿಸಿಲನ್ನು ಹೊದ್ದಿಕೊಳ್ಳುತ್ತವೆ
ಚಳಿಯನ್ನು ತೊಟ್ಟುಕೊಳ್ಳುತ್ತವೆ.
ತಮ್ಮ ಮೇಲೆ ಜುಳುಜುಳನೆ ಬೀಳುವ ಹನಿಗಳನ್ನು
ರೆಕ್ಕೆಗಳಿಂದ ಮೇಲಕ್ಕೆಗರಿಸಿ
ಸ್ವಲ್ಪ ಹೊತ್ತು ರಾಸಕ್ರೀಡೆಗಳನ್ನು ಆಡಿಕೊಳ್ಳುತ್ತವೆ.
ಇದ್ದಕ್ಕಿದ್ದಂತೆ ಹಠಾತ್ತನೆ ಹಾರಿಹೋಗುತ್ತವೆ.
ಗೂಡುಗಳಲ್ಲಿ ಮಲಗಿಸಿದ ಎಳೆಗೂಸುಗಳು
ನೆನಪಿಗೆ ಬರುತ್ತವೇನೋ ?
ಪಕ್ಷಿಗಳನ್ನು ನೋಡುತ್ತಿದ್ದರೆ
ನನ್ನ ಪ್ರಾಣವನ್ನು ಬಾಚಿದಂತಿರುತ್ತದೆ.
ನನ್ನ ಮೌನ ಸ್ವರದಲ್ಲಿ
ಕಿಲಕಿಲಗಳು ಮೊಳೆತಂತಿರುತ್ತದೆ.
ಪಕ್ಷಿಯಾಗಿ ನಾನು ಜನ್ಮಿಸಲಿಲ್ಲವೇ ಎನ್ನುವ ಪರಿತಾಪ
ನನ್ನ ಮನಸ್ಸನ್ನು ಆಗಾಗ ಕೊರೆಯುತ್ತಿರುತ್ತದೆ.

ಅದು ಹೇಗೆ ಸಾಧ್ಯ ?
ಅರುಣ ಕಿರಣದಂತೆ ಸ್ವಚ್ಛವಾದ ಪಕ್ಷಿ ಹೃದಯವನ್ನು
ಎರವಲು ತಂದುಕೊಂಡು
ನನ್ನಲ್ಲಿ ಕೂಡಿಸಿಕೊಂಡರೆ ಎಷ್ಟು ಚೆನ್ನಾಗಿರುತ್ತದೋ ಎಂಬ
ತೀರದ ಆಕಾಂಕ್ಷೆ.
ಎಂದಿಗಾದರೂ ಅದು ತೀರದೆ ಹೋಗುತ್ತದಾ ?
ನೋಡೋಣ.
ಆಶೆಯನ್ನು ಶ್ವಾಸವಾಗಿ ರೂಪಿಸಿಕೊಂಡವನಲ್ಲವೆ.

●

## ಮುಗಿಯುವುದೆಂದೋ ?

ಎಷ್ಟೆಷ್ಟು ಅಗೆದು ತೆಗೆದರೂ
ಎಷ್ಟು ಮಾತ್ರ ಪುಸವೆಯದ ಗಣಿ ಈ ಬದುಕು.
ಒಂದೊಂದು ಪೊರೆಯಲ್ಲಿ ಎಷ್ಟೆಷ್ಟು ಅನುಭವಗಳ ನಿಧಿಗಳೋ.
ಬುಟ್ಟಿಯಷ್ಟು ನಿಧಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ
ನಿದ್ರಿಸುತ್ತಿರುವ ಸಂಘಟನೆಗಳು
ಮೈಮುರಿದುಕೊಂಡು ಆಕಳಿಸುತ್ತಾ ಮೇಲಕ್ಕೇಳುತ್ತವೆ.
ವಾಸಿಯಾದ ಗಾಯಗಳ ಮಚ್ಚೆಗಳನ್ನು ತೋರಿಸುತ್ತಾ
ಮರೆಯಲ್ಲಿ ಬಿದ್ದ ರಕ್ತ ಸಿಕ್ತ ಸ್ಮೃತಿಗಳಿಗೆ
ಅವು ಸಾಕ್ಷ್ಯಗಳಾಗಿ ಉಳಿದಿವೆಯೆಂದು ಹೇಳುತ್ತವೆ.
ಆವಿಯಾಗಿ ಹೋದ ಗತ
ಆಳೆತ್ತರ ಹೊಗೆತೆರೆಯಾಗಿ ಎದುರು ನಿಲ್ಲುತ್ತದೆ.
ಆ ತೆರೆಮೇಲೆ ಕಿಲಕಿಲ ನಗುವ
ಆನೆ ಸೊಂಡಿಲಿನಂಥ ಪುಷ್ಪ ಮಾಲೆಗಳು
ಅವುಗಳ ಮರೆಯಲ್ಲಿ ಪ್ರಚ್ಛನ್ನವಾಗಿ ತೆವಳುತ್ತಿರುವ ಸರ್ಪಗಳು.
ಮಾಲೆಗಳನ್ನು ಹೊರುವ ಸಂಭ್ರಮದಲ್ಲಿ
ಕಟ್ಟಿರುವೆ ಕಡಿತಗಳನ್ನು ಗಮನಿಸಲಿಲ್ಲವೇನೋ.
ವರ್ಷಗಳು ಟಪಟಪನೆ ಉದುರಿಹೋಗಿವೆ
ಶಿಶಿರ ಎಲೆಗಳಂತೆ.
ಹೊಚ್ಚಹೊಸ ಸನ್ನಿವೇಶಗಳು ಚಿಗುರು ತೊಟ್ಟಿವೆ
ವಸಂತಪಲ್ಲವ ಶ್ವಾಸದಂತೆ.
ಋತುಚಕ್ರ ತಿರುಗುತ್ತಲೇ ಇದೆ.
ಆಗಾಗ ತಡವರಿಸಿದರೂ
ಹೆಜ್ಜೆಗಳು ಗತಿತಪ್ಪದಂತೆ ಬೀಳುತ್ತಲೇ ಇವೆ.
ಹೀಗೆ ಇರಲು ಒಂದು ದಿನ ನನ್ನ ಬದುಕು

ನನ್ನನ್ನು ನೇರವಾಗಿ ಪ್ರಶ್ನಿಸಿದೆ
"ಏನ್ರೀ ಎಷ್ಟು ಕಾಲ ಈ ನಿರಂತರ ಯಾತ್ರೆ
ಎಂದು ಮುಗಿಸುತ್ತೀರಿ ನನ್ನನ್ನು" ಎಂದು.
ಅದನ್ನು ಕೇಳಿ ನಾನು ನಗುತ್ತಾ ಎಂದೆ
"ನಾನು ಮುಗಿದ ತರುವಾಯವೇ ಅಲ್ಲವೆ
ನೀನು ಮುಗಿಯುವುದು" ಎಂದು.
ಅರೆಗಳಿಗೆ ಕಾಲ
ಅರ್ಥಗರ್ಭಿತ ನಿಶ್ಶಬ್ದ ಆವರಿಸಿದೆ.
ತದನಂತರ ಪರಿಣಾಮಕ್ರಮ –
ಎಂದಿನಂತೆ ಜೀವಿತದ ಮೇಲೆ ಸವಾರಿಮಾಡುತ್ತಿರುವ ನಾನು.
ನನ್ನ ಭುಜಗಳ ಮೇಲೆ
ಶಲ್ಯದಂತೆ ಅಂಟಿಕೊಂಡ ಜೀವಿತ.

●

## ನೋಟಗಳು ನೋಟಗಳೇ

ಎಲ್ಲೆಗಳಿಲ್ಲದ ಆಕಾಶದ ವೈಶಾಲ್ಯವನ್ನು
ಒಂದೇ ಒಂದು ನಿಮಿಷದಲ್ಲಿ
ಅಳೆದು ತೋರಿಸುವುವು ನೋಟಗಳೇ.
ನಿಜಕ್ಕೂ ನೋಟಗಳಿಗೆ ರೂಪವಿಲ್ಲ.
ಆದರೂ ಎಲ್ಲ ರೂಪಗಳಲ್ಲಿ ಇರುವುವು ಅವೇ.
ಸಣ್ಣನೆ ಮರಳ ಕಣಗಳಲ್ಲಿ ಇಂಗಿಹೋಗುವ ನೋಟಗಳೇ
ಸಮುದ್ರವನ್ನು ತಮ್ಮಲ್ಲಿ ಅಡಗಿಸಿ ತೋರಿಸುತ್ತವೆ.
ಮರಗಳ ಯೋಗಕ್ಷೇಮ ತಿಳಿದುಕೊಳ್ಳಬೇಕೆಂದರೂ
ಹಾರುವ ಪಕ್ಷಿಗಳ ರೆಕ್ಕೆಗಳ ವಿಚಿತ್ರ ವಿನ್ಯಾಸಗಳನ್ನು
ಸೂಕ್ಷ್ಮವಾಗಿ ಸಮೀಕ್ಷಿಸಬೇಕೆಂದರೂ
ಅದು ನೋಟಗಳಿಗೇ ಸುಸಾಧ್ಯ.
ಕಾಗದಗಳ ತೊಟ್ಟಿಲುಗಳಲ್ಲಿ ಕೇಕೆಹಾಕುವ
ಅಕ್ಷರ ಶಿಶುಗಳಿಗೆ
ಮೊದಲ ಜೋಗುಳ ಹಾಡುವುದು ನೋಟಗಳೇ.
ಆ ಶಿಶುಗಳೇ ಪುಟ ಪುಟಗಳಾಗಿ ಬೆಳೆದುಹೋಗಿ
ದುಡುಕುವಯಸ್ಸಿನ ಓಟದಲ್ಲಿ ಹಾದಿ ತಪ್ಪಿದರೆ
ಸರಿತಿದ್ದುವುದು ನೋಟಗಳೇ
ನೋಟಗಳಿಗೆ ಕಿವಿಗಳಿರುತ್ತವೆ.
ಅವು ನಿಶ್ಶಬ್ದ ನುಡಿಯುವ ವಿವಿಧ ಭಾಷೆಗಳನ್ನು
ಲೀಲಾಜಾಲವಾಗಿ ಕೇಳಬಲ್ಲವುಗಳಾಗುತ್ತವೆ.
ಮೀನುಗಳೊಂದಿಗೆ ತಾವೂ ಈಜುತ್ತಾ
ಅಲೆಗಳ ಅಂತರಂಗಗಳ ಚಿತ್ರಗಳನ್ನು
ಆವಿಷ್ಕರಿಸಬಲ್ಲವುಗಳಾಗುತ್ತವೆ.

ನೋಟಗಳು ಕೋರಿಕೊಳ್ಳುವುದು ನಿರಂತರ ವಿಹಾರವನ್ನು.
ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲವೇ ಎಂದು ಯಾರಾದರೂ ಕೇಳಿದರೆ
ಅವು ವಿಚಿತ್ರವಾಗಿ ನಕ್ಕುಬಿಡುತ್ತವೆ.
ನಾವು ಕಣ್ಣು ಮುಚ್ಚಿಕೊಂಡು ನಿದ್ರಿಸುತ್ತಿರುವಾಗ
ನೋಟಗಳು ಮಾತ್ರ
ಅದೃಶ್ಯಲೋಕಗಳನ್ನು ಸುತ್ತುತ್ತಿರುತ್ತವೆ.
ರೆಕ್ಕೆಗಳ ರಪರಪ ಕೇಳಿಸುತ್ತಲೇ
ತಟ್ಟನೆ ಕಣ್ಣಗೂಡುಗಳೊಳಕ್ಕೆ ಸೇರಿಕೊಳ್ಳುತ್ತವೆ.
ಹಾಸಿಗೆ ಇಳಿಯಿರೆಂದು ಹಠಮಾಡುವ ಜಡಮತಿಗಳನ್ನು
ಪ್ರಭಾತ ಗೀತೆಗಳೊಂದಿಗೆ ತಟ್ಟಿಯೆಬ್ಬಿಸುತ್ತವೆ.
ನೋಟಗಳ ಆಂತರ್ಯಗಳನ್ನು ಔನ್ನತ್ಯಗಳನ್ನು
ಅಂದಾಜು ಕಟ್ಟಿ ತೋರಿಸುವುದು ಹೇಗೆ.
ಆ ನೋಟಗಳು ಕೊನೆಮುಟ್ಟುವುದು ಒಳನೋಟಗಳಿಗೇ.
ಏನಾದರೂ ನೋಟಗಳು ನೋಟಗಳೇ.

●

## ತಾರೆ ನುಡಿದ ಮಾತು

ದೂರದಲ್ಲಿ ಮಿಣುಕು ಮಿಣುಗುಟ್ಟುತ್ತಿರುವ
ಒಂಟಿ ತಾರೆಯ ಮೇಲೆ
ತಟ್ಟನೆ ಒಂದು ಪ್ರಶ್ನೆಯನ್ನು ಎಸೆದುಬಿಟ್ಟೆ.
"ನಿನ್ನ ಸಹತಾರೆಗಳೆಲ್ಲಾ ಅದೃಶ್ಯವಾಗಿ ಹೋದರೆ
ನೀನಿನ್ನೂ
ರಂಗ ನಿಷ್ಕ್ರಮಣ ಮಾಡಲಿಲ್ಲವೇ" ನೆಂದು,
ಅದನ್ನು ಕೇಳಿ ಆ ತಾರೆ ನೀಡಿದ ಪ್ರತ್ಯುತ್ತರ
ನನ್ನ ಕಿವಿಗಳೊಳಕ್ಕೆ ಹೀಗೆ ತೂರಿ ಬಂದಿದೆ.
"ನನ್ನ ಜತೆಯ ತಾರೆಗಳು ಅದೃಶ್ಯವಾಗಿಲ್ಲ.
ರಂಗಸ್ಥಲದ ಮೇಲಿನ ನೀಲಿ ತೆರೆಯ ಮರೆಯಲ್ಲಿ
ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುತ್ತಿವೆ.
ಅವು ತಿರುಗಿ ಬರುವತನಕ
ನಾನು ಹೀಗೆಯೇ ಇದ್ದುಬಿಡುತ್ತೇನೆ.
ನಮ್ಮನ್ನು ಹೆತ್ತುಸಾಕಿದ ಗಗನ ಜನಯಿತ್ರಿ ಅಂಗಣ
ಬಿಕೋ ಎನ್ನಬಾರದಲ್ಲಾ.
ಅದಕ್ಕಾಗಿ" .
ಅದು ಅಂದಹಾಗೆ
ಅಗೋಚರವಾಗಿ ಇದ್ದ ಅಸಂಖ್ಯಾತ ತಾರೆಗಳು
ಒತ್ತೊಟ್ಟಿಗೆ ಪ್ರತ್ಯಕ್ಷ್ಯವಾಗಿವೆ.
ಆದರೆ ಆ ತಾರೆ ಇಲ್ಲ.
ಅದರ ಮಾತು ಮಾತ್ರ ನನ್ನಲ್ಲಿ ಪ್ರತಿಧ್ವನಿಸುತ್ತಿದೆ.
ಅದು ಆಕಾಶದಲ್ಲಿ ಇಲ್ಲದಿದ್ದರೂ
ನನ್ನ ಮನಪಟಲದ ಮೇಲೆ ಮಿರಮಿರ ಮೆರೆಯುತ್ತಲೇ ಇದೆ

ಮಾತೃಭಕ್ತಿಗೆ ಪ್ರತೀಕವಾಗಿ ನಿಂತ
ಕಾಂತಿ ಕಣಿಕೆಯಂತೆ.

●

## ಪರಿಪೂರ್ಣಾಕೃತಿ

ಎದೆಯ ಮೇಲೆ ಮಂಜುಗಡ್ಡೆಯಂತೆ ಹೊಂದಿಕೊಂಡು ಹೋದ ನಿಶ್ಶಬ್ದ
ಧ್ವನಿ ಕಿರಣಗಳು ಚುರಕ್ಕನೆ ಬೀಳುತ್ತಲೇ
ತಟ್ಟನೆ ಕರಗಿ ಹೋಗುತ್ತದೆ.
ಆ ಸ್ವಭಾವವೇ ಕೊನೆಗಾಣದ್ದು.
ಇತ್ತ ನಿಶ್ಶಬ್ದವನ್ನು ಧರಿಸುವುದು ಅತ್ತ ಶಬ್ದವನ್ನು ವರಿಸುವುದು.
ಮೌನ ಮೌನವಾಗಿಯೇ ಇದ್ದಾಗ
ಮನಸ್ಸು ಎಷ್ಟೊಂದು ಪರವಶಿಸುತ್ತದೋ
ಗಾನವಾದಾಗ ಅಷ್ಟೇ ಮೈ ಮರೆತು ಹೋಗುತ್ತದೆ.
ಆಗ ಅದು ಸ್ವರವಶಿಸುತ್ತಿದೆಯೆಂದು.
ಎಲ್ಲರೂ ಬಯಸುವುದು
ಸದ್ದೂ ಬಾಧೆಗಳಿಲ್ಲದ ಪ್ರಶಾಂತ ಮಾನಸಿಕ ದಶೆಯನ್ನೇ.
ನಿಶ್ಚಿಂತೆಯಾಗಿ ಅಂಬರದ ಅಂಚುಗಳೊಳಕ್ಕೆ ಹಾರಿಹೋಗುವ
ಪಾರಿವಾಳಗಳನ್ನು ನೋಡಿದರೆ ಅನ್ನಿಸುತ್ತದೆ
ಅವು ವಿಕಸಿಸಿದ ಆನಂದಕ್ಕೆ ಪ್ರತಿಬಿಂಬಗಳೆಂದು.
ಪಾಪ ಅವು ಹೇಳಿಕೊಳ್ಳಲಾರವು
ತಮ್ಮ ರೆಕ್ಕೆಗಳ ಮರೆಯ ಮರೆಸಿಕೊಂಡ
ಹಸಿಗಾಯಗಳ ಬಾಧೆಗಳನ್ನು.
ನೆಲದಲ್ಲಿ ಹೊತುಹೋದ ಶಿಲೆಗಳಿಗೆ
ಆರದ ಆರಾಟ
ಎಂದಿಗಾದರೂ ತಮಗೆ ಕಾಲುಗಳು ಮೊಳೆತರೆ
ಗಾಳಿಯೊಂದಿಗೆ ಕೈಗಳು ಕೂಡಿಸಿ ಸಾಗಿಹೋಗಬಹುದಲ್ಲಾ ಎಂದು.
ನಿರ್ವಿರಾಮವಾಗಿ
ಸಾಗಿಹೋಗುವ ವಾಯು ವೀಚಿಕೆಗಳೇನೋ
ಪರಿತಪಿಸುತ್ತಿರುತ್ತವೆ

ಸ್ವಲ್ಪಹೊತ್ತು ವಿಶ್ರಮಿಸುವ ಯೋಗ ತಮಗೆ ಇಲ್ಲವಾ ಎಂದು
ಸೃಷ್ಟಿ ಪರಸ್ಪರ ವೈರುಧ್ಯಗಳ ಹುತ್ತ.
ಭೂ ಭ್ರಮಣ
ಎಷ್ಟೆಷ್ಟು ಅಪಶ್ರುತಿಗಳನ್ನು ಇಳಿನುಂಗಿಕೊಳ್ಳುತ್ತಾ
ಏಕ ಶ್ರುತಿಯಲ್ಲಿ ಸಾಗುತ್ತಿದೆಯೋ.
ದ್ವಂದ್ವ ಪ್ರವೃತ್ತಿಗಳೆಲ್ಲವನ್ನು
ಸಮ ದೃಷ್ಟಿಯಿಂದ ಸಮನ್ವಯಿಸಿಕೊಂಡಾಗಲೇ
ಪ್ರಕೃತಿ ಅಸ್ತಿತ್ವಕ್ಕೆ ಪರಿಪೂರ್ಣಾಕೃತಿ.

●

## ಹೀಗೇ ಇರುತ್ತೇನೆಂದರೆ

ಎಷ್ಟು ಹೊತ್ತಾದರೂ ಹೀಗೇ ಇರುತ್ತೇನೆ
ಪರಿಸ್ಥಿತಿಗಳು ನನ್ನ ತಲೆಯನ್ನು ಅದುಮಿಟ್ಟರೂ
ಶ್ವಾಸಧಾರೆಗೆ ಆಕಾಂಕ್ಷೆಗಳಡ್ಡಕಟ್ಟೆಗಳು ಕಟ್ಟಿದರೂ.
ಅನುಕ್ಷಣ ಹಾರಿಹೋಗುವ ನನ್ನ ಆಲೋಚನೆಗಳನ್ನು
ನಿಯಂತ್ರಿಸುವವರ್‍ಯಾರು ?
ನಾನು ನಿರ್ವಿರಾಮವಾಗಿ ತೂರಿಕೊಂಡು ಹೋಗುತ್ತಿರುವುದು
ಅವುಗಳ ಅಂಚುಗಳ ಮೇಲೆಯೇ.
ಅಳಸಿ ಹೋಗದ ನನ್ನ ವಿಳಾಸಕ್ಕೆ
ಅವೇ ಚಿರಕಾಲ ಜೀವಿಕೆಗಳು.
ನಡೆಯುವುದಕ್ಕೇನು
ವರ್ಷಗಟ್ಟಲೆಯಿಂದ ನಡೆಯುತ್ತಲೇ ಬಂದಿದ್ದೇನೆ.
ಎಷ್ಟೆಷ್ಟು ದೂರಗಳನ್ನು
ನನ್ನ ಕಣ್ಣೋಟಗಳ ಮಡಿಲೊಳಕ್ಕೆ ತೆಗೆದುಕೊಂಡು
ಹಸುಗೂಸಿನಂತೆ ಲಾಲಿಸಿದೆನೋ
ಪಕ್ಕಕ್ಕೆ ಸರಿದು ಹೋಗುವ ಎಷ್ಟೆಷ್ಟು ದೃಶ್ಯಗಳ
ತಲೆ ಸವರಿ
ಅವುಗಳ ಹೆಗಲ ಮೇಲೆ ಕೈಹಾಕಿ ಸಾಗಿಹೋದೆನೋ.
ಪ್ರಕೃತಿ ನನ್ನ ಆಜನ್ಮ ಸಹಚರಿ.
ಈಗ ನಾನು ಹೀಗಿದ್ದೇನೆಂದರೆ
ಚಲನರಹಿತವಾಗಿ ಇಲ್ಲ.
ಸಾಗಿ ಹೋಗುವ ನನ್ನ ಆಲೋಚನೆಗಳ ತುಂಬಾ
ಚೈತನ್ಯ ವಿದ್ಯುತ್ತಿನಂತೆ ವಿಸ್ಫೋಟನೆಗಳೇ,
ನನ್ನನ್ನು ಹುರಿಹಾಕಿಕೊಂಡು ನದಿಗಳು ಪ್ರವಹಿಸುತ್ತಿವೆ
ಪರ್ವತಗಳು ನನ್ನ ಸುತ್ತಾ

ಚೆಂಡಿನಂತೆ ಹಾರಿಬೀಳುತ್ತಿವೆ.
ಸೃಷ್ಟಿ ಭ್ರಮಣಕ್ಕೇ ಕೇಂದ್ರ ಬಿಂದು ನಾನಾದಾಗ
ನಿಶ್ಚಲನು ಹೇಗೆ ಆಗುತ್ತೇನೆ ?
ಹೆಜ್ಜೆ ಕದಲದೆ
ವಿಶ್ವಗತಿಗಳಿಗೇ ಮೇಲುಪಂಕ್ತಿ ಹಾಕುವ
ವಿನೂತನ ಸಂಚನವಿದು.

●

## ತ್ಯಾಗ ನಿರತಿ

ಒತ್ತಾಗಿ ಬೆಳೆದ ಆ ತೆಂಗಿನ ಮರ
ಹಚ್ಚನೆ ಎಲೆಗಳನ್ನೇ ಕೂದಲಿನಂತೆ ಒಣಹಾಕಿಕೊಂಡು
ಎಷ್ಟು ಹೊತ್ತಾದರೂ ಹಾಗೇ ನಿಂತಿರುತ್ತದೆ.
ಅದು ನಿರೀಕ್ಷಣೆ ಅಲ್ಲ
ಆ ವೃಕ್ಷಕ್ಕಿರುವ ಸಹಜ ತತ್ವಾವಿಷ್ಕರಣ.
ಅದಕ್ಕೆ ಗೊತ್ತು
ಅಲ್ಲೆಲ್ಲೋ ಇರುವ ಆಕಾಶ
ಬಿಡುವುಮಾಡಿಕೊಂಡು ನೆಲಕ್ಕಿಳಿದು ಬಂದು
ತನ್ನ ಕೂದಲನ್ನು ಬಾಚಿಹೋಗುತ್ತಿರುತ್ತದೆಂದು.
ದಾರಿಯಲ್ಲಿ ಹೋಗುವ ಕಣ್ಣು ತಟ್ಟನೆ ನಿಂತು
ತನ್ನ ನುಣುಪಾದ ಅಂದವನ್ನು
ಬೊಗಸೆಗಟ್ಟಲೆ ಆಸ್ವಾದಿಸುತ್ತಾ ಇರುತ್ತವೆಂದು.
ಆಗಾಗ
ತಾನು ಸ್ತಬ್ಧವಾಗಿ ಇದ್ದುಬಿಟ್ಟಾಗ
ಮೆತ್ತನೆ ಬೀಸುಗಾಳಿ
ನುಡಿಮುತ್ತುಗಳೊಂದಿಗೆ ತನ್ನನ್ನು ಹೇಗೆ ಪುಳಕಗೊಳಿಸುತ್ತವೆಯೋ
ಅದಕ್ಕೆ ಚೆನ್ನಾಗಿ ಗೊತ್ತು.
ಇವೆಲ್ಲಾ
ಬಾಹಿರ ಪ್ರಕೃತಿ ದೃಶ್ಯಾದೃಶ್ಯಗಳಾಗಿ ಎಟುಕಿಸುವ
ಸ್ಪಂದನಗಳ ಪಟ್ಟಿಕೆಗಳೇ.
ಮತ್ತೆ ಆ ಮರದ ಅಂತರಂಗವನ್ನು ತಟ್ಟಿ ಕೇಳಿದರೆ
ಏನೆನ್ನುತ್ತದೋ ?
ಮತ್ತೇನನ್ನುತ್ತದೆ
ಯಾರಾದರೂ ತನ್ನ ಮೈಗೆ ಅಂಟಿಕೊಂಡಿರುವ ಕಾಯಿಗಳನ್ನು

ಕತ್ತಿಯಿಂದ ಕಡಿದು ತೆಗೆದುಕೊಂಡು
ಅವುಗಳಲ್ಲಿನ ಸ್ವಾದು ಜಲವನ್ನು
ಮನದಣೆಯೆ ಕುಡಿದುಬಿಡುತ್ತಾ ಪರವಶಿಸುತ್ತಿದ್ದರೆ
ತಾನು ಹೊಚ್ಚಹೊಸ ಶ್ವಾಸಗಳನ್ನು ತುಂಬಿಕೊಳ್ಳುತ್ತದೆಂದು
ಆಗಲೇ ತನಗೆ ಸಂಪೂರ್ಣ ತೃಪ್ತಿ ಎಂದು ಅನ್ನುತ್ತದೆ.
ಬೇರೆ ವಿವರಣೆಗಳೇಕೆ ?
ಬೆಲೆ ಕಟ್ಟಲಾಗದ ತ್ಯಾಗನಿರತಿಗೆ
ಆಳೆತ್ತರ ಪ್ರತೀಕ ಆ ಮರ.

●

## ಮಿಂಚುಗಳಿಗೇನು ಕೊರತೆ ?

ಏನದು ?
ಹಾಗೆ ಆತ ಗಂಟೆಗಟ್ಟಲೆ ಕುರ್ಚಿಗಂಟಿಕೊಂಡು
ಕುಳಿತಿರುತ್ತಾನೆಂದುಕೊಳ್ಳಬೇಡ.
ಆ ಕುಳಿತಿರುವಿಕೆ
ಬದ್ಧಕಕ್ಕೆ ಬಿದ್ದಲ್ಲ.
ಮಥನ ಬಿದ್ದು ಮಥನ ಬಿದ್ದು
ಆವಿಯಾಗಿಹೋಗಿ ಉಳಿದ ಆ ಸ್ವಲ್ಪ ಸಮಯದಲ್ಲಿ
ಒತ್ತೊಟ್ಟಿಗೆ ಮುತ್ತಿ ಬರುವ ಆಲೋಚನೆಗಳಲ್ಲಿ
ಎಷ್ಟಕ್ಕೆ ಅಕ್ಷರಗಳನ್ನು ಕೊಡಿಸಬೇಕೋ ತೋಚದೆ
ಹೊಂದುವ ತಪನ ಅದು.
ಎಲ್ಲವನ್ನು ತನ್ನಲ್ಲಿ ಹೊಂದಿಸಿಕೊಳ್ಳಲಾರ.
ತಾನು ತೆಗೆದುಕೊಂಡು ಉಳಿದುಹೋದ ಆಲೋಚನೆಗಳು
ತಮಗೆ ಅಕ್ಷರಯೋಗವಿಲ್ಲವಾ ಎಂದು
ಕಣ್ಣೀರಿಡುತ್ತಿದ್ದರೆ ನೋಡಲಾರ.
ಮತ್ತೊಮ್ಮೆ ತಾನೇ ಹೇಳಿಕಳುಹಿಸಿದಾಗ ಬರಬೇಕೆಂದು
ಅವನ್ನು ಸಮಾಧಾನ ಪಡಿಸಿಕೊಳ್ಳುತ್ತಾನೆ.
ಬೆರಕೆಬಿದ್ದ ಆ ಆಲೋಚವೆಗಳು
ಸ್ವಾಭಿಮಾನ ಕುದುರಿನಲ್ಲಿ ಆಕ್ಷಣದಲ್ಲೇ ನಿಷ್ಕ್ರಮಿಸಿ
ಮತ್ತೊಂದು ಸಲ ಮೇಧಾಬಾಗಿಲು ಬಡಿಯುತ್ತವೆ.
ಅನುಕೂಲವಾಗಿ ಸ್ಪಂದಿಸಿದ ಆ ಮೇಧ
ಅವನ್ನು ತನ್ನ ಕಣ್ಣಲ್ಲಿ ತುಂಬಿಕೊಂಡು
ಎದೆಗೊತ್ತಿಕೊಳ್ಳುವ ಅಕ್ಷರಗಳನ್ನು
ಗೊಂಚಲು ಗೊಂಚಲುಗಳಾಗಿ ಉದುರಿಸುತ್ತದೆ.
ಆಲೋಚನೆಗಳು ಗಾಢವಾಗಿ ಆದೇಶಿಸಬೇಕೇ ಹೊರತು
ಅಕ್ಷರಗಳಿಗೇನು ಕೊರತೆ ?

ಮೋಡಗಳು ದಟ್ಟವಾಗಿ ಕವಿಯಬೇಕೇ ಹೊರತು
ಮಿಂಚುಗಳಿಗೇನು ಕೊರತೆ ?

●